

ಸೊಕ್ಕಿನ ಶ್ರೀಮಂತರಿಗೆ ಮಿಕ್ಕಿದ ಮೈಲಾರ ಪಾತ್ರ ಪರಿಚಯ

ಪುರಷ ಪಾತ್ರಗಳು

ರಾಜೇಂದ್ರ : ತಾಲ್ಲೂಕಿನ ಎಂಎಲ್ಎ ಆಗಿ ಬಡರೈತರಿಗೆ ಮೋಸ ಮಾಡುತ್ತಾ. ಹಣ ಐಶ್ವರ್ಯಕ್ಕಾಗಿ ಬಡವರನ್ನು ಬಲಿ ತೆಗೆದುಕೊಂಡು. ನಾಗೇಂದ್ರ ಮಹೇಂದ್ರನ ಅಂತ ದುಷ್ಟರ ಬೆಂಬಲ ಕಟ್ಟಿಕೊಂಡು ರಾಜ್ಯಭಾರ ಮಾಡುವ ದುಷ್ಟ ರಾಜಕಾರಣಿ (ಖಳನಾಯಕ)

ನಾಗೇಂದ್ರ : ರಾಜೇಂದ್ರನ ಪಾಟ್ನರ್ ಆಗಿ ಪರಸ್ತ್ರಿಯರ ಮೇಲೆ ಕಾಮದ ಕಣ್ಣಾಕಿ ಅತ್ಯಾಚಾರ ಮಾಡುವ ಕ್ರೂರ ಕಾಮುಕ (ಖಳನಾಯಕ)

ಮಹೇಂದ್ರ : ರಾಜೇಂದ್ರನ ದೋ ನಂಬರ್ ದಂಧೆಯಲ್ಲಿ ಶ್ಯಾಮಿಲಾಗಿ. ಕಂಡ ಕಂಡ ಹೆಣ್ಣನ್ನು ಕೆಣಕುವ ನೀಚ ಕಾಮುಕ (ಖಳನಾಯಕ)

ಕ್ರಾಂತಿವೀರ : ತನ್ನ ತಂಗಿಯನ್ನು ಕೊಂದವನ ಮೇಲೆ ಸೇಡು ತೀರಿಸಿಕೊಳ್ಳಬೇಕೆಂದು. ಹಠ ತೊಟ್ಟು ಕತ್ತಿಯನ್ನು ಹಿಡಿದು ಕ್ರಾಂತಿವೀರನಾಗಿ ಬಂದು ಈ ನಾಟಕಕ್ಕೆ ಅರ್ಥ ಇಟ್ಟ ಹರಿಕಾರ (ವಿಲನ್ & ಹೀರೋ)

ಮಹೇಶ : ಕನ್ನಡ ಶಾಲೆ ಶಿಕ್ಷಕನಾಗಿ ವೃತ್ತಿಯನ್ನು ಮುಗಿಸಿ. ತಮ್ಮಂದಿರೊಡನೆ ಜೀವನ ಸಾಗಿಸುತ್ತಾ ವ್ಯವಸಾಯ ಮಾಡುತ್ತಾ. ಧರ್ಮದಿಂದ ಬದುಕು ವ್ಯಕ್ತಿ (ಕಥನಾಯಕ)

ಮೈಲಾರ : ಮಹೇಶನ ತಮ್ಮ ಕುರಿ ಕಾಯುವ ಕುರಿಗಾರ. ಸಮಾಜದಲ್ಲಿ ಬಡವರ ಮೇಲೆ ದರ್ಪ ದಬ್ಬಾಳಿಕೆ ಮಾಡುವ. ದುಷ್ಟರಿಗೆ ತೊಡೆತಟ್ಟಿ ನಿಂತು ಹೋರಾಡುವ ಹೋರಾಟಗಾರ. ಸಿಡಿದೆದ್ದ ಮೈಲಾರ (ಟೈಟಿಲ್ ಹೀರೋ)

ಮಾಂತೇಶ : ಮಹೇಶನ ತಮ್ಮ ಮಫ್ತಿ ಪೊಲೀಸ್ ಅಧಿಕಾರಿ. ದುಷ್ಟ ಕಾಮುಕರನ್ನು ಸದೆ ಬಡಿಯುವುದಕ್ಕಾಗಿ. ವಿಷ್ಣುವಿನ ಅವತಾರ ಎತ್ತಿದ. ನಿಷ್ಠಾವಂತ ಅಧಿಕಾರಿ (ಹೀರೋ)

ನವೀನ : ಗ್ಯಾರೇಜ್ ಕೆಲಸ ಮಾಡುವ ಮೇಸ್ತ್ರಿ. ನಯನಳನ್ನು ಪ್ರೀತಿಸಿ ಮೋಸ ಹೋದ ಭಗ್ನ ಪ್ರೇಮಿ (ಹಾಸ್ಯ)

ಪ್ರವೀಣ : ಪಾನಿಪುರಿ ವ್ಯಾಪಾರ ಮಾಡುವ ವ್ಯಾಪಾರಸ್ಥ. ನಯನಳ ಮನ್ಮಥ (ಹಾಸ್ಯ)

ಸ್ತ್ರೀ ಪಾತ್ರಗಳು

ಭಾಗ್ಯಶ್ರೀ/ಮಂಜುಳಾ : ಮಹೇಶನ ಧರ್ಮಪತ್ನಿ ಮೈದುನರಿಗಾಗಿ ಮಕ್ಕಳನ್ನ ಬೇಡ ಎಂದ ತ್ಯಾಗಮಯಿ. ರಾಜೇಂದ್ರನ ಕಾಮಕ್ಕೆ ಬಲಿಯಾಗಿ. ಮುಂದೆ ಮಂಜುಳಾ ಆಗಿ ಮಾಂತೇಶನ ಪ್ರೇಯಸಿ (ಕಥನಾಯಕಿ)

ಕೀರ್ತಿ/ಮಧು : ಕ್ರಾಂತಿವೀರನ ತಂಗಿ ನಾಗೇಂದ್ರನ ಕಾಮಕ್ಕೆ ಬಲಿಯಾಗಿ ಮುಂದೆ ಮಧು ಆಗಿ ಮೈಲಾರನ ಪ್ರೇಯಸಿ (ಕಥನಾಯಕಿ)

ನಯನ : ಕನ್ನಡ ಶಾಲೆ ಟೀಚರ್ ಪ್ರವೀಣನ ಪ್ರೇಯಸಿ (ಹಾಸ್ಯ)

ಚಿಕ್ಕ ಪಾತ್ರಗಳು: ರಂಗ ಶಿಂಗ

ವಿ.ಸೂ: ಭಾಗ್ಯಶ್ರೀ ಮಂಜುಳಾ ಪಾತ್ರವನ್ನು ಒಬ್ಬರೇ ಮಾಡಬೇಕು ಕೀರ್ತಿ ಮಧು ಪಾತ್ರವನ್ನು ಒಬ್ಬರೇ ಮಾಡಬೇಕು ಈ ನಾಟಕದಲ್ಲಿ ಬರುವ ಕ್ಲಬ್ ಡ್ಯಾನ್ಸ್ ನಯನ ಪಾತ್ರ ಮಾಡಿದವರು ಮಾಡಲೇಬೇಕು

ಈ ನಾಟಕದಲ್ಲಿ ಬರುವ ಪಶ್ನೆನೇಶಗಳು ಕೇವಲ ಕವಿಯ ಕಾಲ್ಪನಿಕ



ಶ್ರೀ ಮೈಲಾರಲಿಂಗೇಶ್ವರ ಪ್ರಸನ್

ಸೋಕಿನ ಶ್ರೀಮಂತರಿಗೆ ಮಿಕ್ಕಿದ ಮೈಲಾರ

ಅರ್ಥಾತ್ : – ಸಹೋದರಿ ಸೇಡಿಗಾಗಿ ಕತ್ತಿ ಹಿಡಿದ ಕ್ರಾಂತಿವೀರ

ಪ್ರವೇಶ 1

(ಈಶ್ವರ ದೇವಸ್ಥಾನದ ಸೀನ್)

(ಕೀರ್ತಿ ಈಶ್ವರನಿಗೆ ಪೂಜೆಸಿ ಹಾಡು ಮುಗಿದ ನಂತರ)

ಕೀರ್ತಿ :– ದೇವಾ ಈಶ್ವರ ಜಗದೀಶ್ವರ. ಮಹಾ ಮಹಿಮಾ ಪುರುಷ ಪರಮೇಶ್ವರ. ಈ ಸಮಾಜದಲ್ಲಿ ತಂದೆ ತಾಯಿಯನ್ನು ಕಳೆದುಕೊಂಡು ಅನಾಥರಾಗಿದ್ದ ನಮ್ಮನ್ನು. ಈ ಸಮಾಜದ ತಂದೆ ತಾಯಿಗಳು ತಮ್ಮ ಮಕ್ಕಳಂತೆ ನಮ್ಮನ್ನು ಪೋಷಾನ ಮಾಡಿ ಬೆಳೆಸಿದ್ದಾರೆ. ತಂದೆ ತಾಯಿ ಪ್ರೀತಿ ಕಾಣದ ನನಗೂ ನನ್ನ ಅಣ್ಣನಿಗೂ ಇವರೇ ತಂದೆ ತಾಯಿ ಆಗಿದ್ದಾರೆ. ಅದು ಅಲ್ಲದೆ ನಮಗೂ ಸಾಕಷ್ಟು ವಿದ್ಯಾವನ್ನು ಕಲಿಸಿದ್ದಾರೆ. ಇವರ ಋಣದ ಭಾರ ನಮ್ಮ ಮೇಲಿದೆ. ಇವರ ಋಣದ ಹೊರೆಯನ್ನು ಬೇಗ ತೀರಿಸುವಂತೆ ಕರುಣಿಸು ತಂದೆ. ಮದುವೆ ವಯಸ್ಸಿಗೆ ಬಂದ ನನ್ನ ಅಣ್ಣನಿಗೆ ಒಂದು ಮದುವೆಯನ್ನು ಮಾಡಿ. ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದ ನನಗೆ. ಆ ನನ್ನ ಅತ್ತಿಗೆಯಿಂದ ನನಗೆ ತಾಯಿ ಸ್ಥಾನ ಕೊಡಿಸು ದೇವ ಕೊಡಿಸು (ಕೈಮುಗಿದು ಹೋಗುವಾಗ. ನಾಗೇಂದ್ರ ಸಿಗರೇಟ್ ಸೇದುತ್ತ ಬರುವನು)

ನಾಗೇಂದ್ರ :– ನಿಂತ್ತಕೋ ಹುಡಿಗಿ ನಿಂತ್ತಕೋ.

ಕೀರ್ತಿ :– ನನ್ನ ತಡೆದು ನಿಲ್ಲಿಸಿದ ನೀವ್ಯಾರು. ನಾನು ಹೋಗಬೇಕು ದಾರಿ ಬಿಡಿ

ನಾಗೇಂದ್ರ:– ನಿಂತ್ಕೋ ಚಿನ್ನ ಅವಸರದ ಪ್ರಯಾಣ. ಅಪಘಾತಕ್ಕೆ ಕಾರಣ. ರಸ ತುಂಬಿದ ಮಾವಿನ ಹಣ್ಣಿನಂತಿರುವ ನಿನ್ನ ಸೌಂದರ್ಯವನ್ನು ನೋಡಿ. ನಿನ್ನ ದೇಹವನ್ನು ಮುಟ್ಟಿ ಮುಟ್ಟಿ ಮುದ್ದಾಡಲು ಬಂದಿದ್ದಾನೆ ಈ ಕಲಿಯುಗದ ರಾವಣ

ಕೀರ್ತಿ:– ಏ ಮಿಸ್ಟರ್ ಬಾಯಿ ಇದೆ ಅಂತ ಬಾಯಿಗೆ ಬಂದಂತೆ ಎಚ್ಚರ ತಪ್ಪಿ ಮಾತನಾಡಿದರೆ. ನಿನ್ನ ಕೆನ್ನೆಗೆ ಬಾರಿಸಬೇಕಾಗುತ್ತದೆ ಎಚ್ಚರ

ನಾಗೇಂದ್ರ :– ಎಚ್ಚರ (ನಕ್ಕು) ಏ ನನಗೆ ಎಚ್ಚರ ಹೇಳುವ ಹುಚ್ಚ ಹುಡುಗಿ. ಆ ಬ್ರಹ್ಮ ಹೆಣ್ಣನ್ನು ಈ ಭೂಮಿ ಮೇಲೆ ಸೃಷ್ಟಿಸುವಾಗ.ಅವಳಿಗೊಂದು ವಿಶಿಷ್ಟ ಸ್ಥಾನಬೇಕೆಂದು ಯೋಚಿಸಿದಾನೋ ಏನು. ಅದಕ್ಕಾಗಿ ಅವಳ ಸೊಂಟಕ್ಕೆ ಸೌಂದರ್ಯ ಕೊಟ್ಟ. ಕಂಠಕ್ಕೆ ಮಾಧುರೆ ಇಟ್ಟ. ಇಂಥ ಸೌಂದರ್ಯವತಿ ಹೆಣ್ಣನ್ನು ನೋಡಿ. ಹುಚ್ಚು ಹಿಡಿಯುವಂತ ಬ್ರಾಂತಿಯನ್ನು ಈ ಗಂಡಸಿನ ಎದೆಯೊಳಗೆ ಇಟ್ಟ. ಕಾಮ ಪ್ರೇಮ ಪ್ರೀತಿ ಎಂಬ ಬಲಿಯನ್ನು ಹೆಣೆದು. ಅವಳ ಮೇಲೆ ಎಸೆಯುವಂತ ಬುದ್ಧಿ. ಈ ಗಂಡಸಿನ ಮನದಲ್ಲಿ ಬಿಟ್ಟ. ಆಂದಾಗ. ಆ ಬ್ರಹ್ಮನೇ ಈ ರೀತಿ ಸೃಷ್ಟಿಸಿದಾನೆಂದರೆ. ನಮ್ಮಂತ ಯುವಕರು ನಿಮ್ಮಂತ ಹುಡುಗಿಯರ ಮೇಲೆ ಕಣ್ಣು ಹಾಕೋದು ತಪ್ಪೆ. ಹದವಾದ ನಿನ್ನ ದೇಹದಿಂದ ನನಗೆ ಸುಖ ಕೋಟ್ಟರೆ. ನಿನ್ನಗೆ ಎಷ್ಟು ದುಡು ಕೇಳು ಕೊಡುತೇನೆ. ಗೂಗಲ್ ಪೇ ಫೋನ್ ಪೇ ಬೇಕಾದ್ರೆ ಕ್ಯಾಸ್ ಕೊಡುತ್ತೇನೆ,

ಕೀರ್ತಿ:– ಯಲೊ ಮೂರ್ಖ ನೀನು ಕೇಳಿದ ಹಾಗೆ ದೇವನನ್ನು ಅರ್ಪಿಸಿ ನಿನಗೆ ಸುಖ ಕೊಡದ್ದಕ್ಕೆ. ನಾನೇನು ದುಡ್ಡಿಗೋಸ್ಕರ ಮೈ ಮಾರಿಕೊಳ್ಳುವ ವೇವಿಚಾರಿಯೂ ಅಲ್ಲ. ನಿನ್ನ ದುಡ್ಡಿನಾಶಕ್ಕೆ ಮರುಳಾಗೋ ಹುಚ್ಚನು ನಾನಲ್ಲ. ಸಾಕಷ್ಟು ಶಿಕ್ಷಣ ಕಲಿತಿರುವ ವಿದ್ಯಾವಂತಿ ಬುದ್ದಿವಂತಿ ನಾನು

ನಾಗೇಂದ್ರ:– ವಿದ್ಯಾವಂತಿ (ನಕ್ಕು) ಏ ಹುಡುಗಿ ನಿಮ್ಮಂತ ವಿದ್ಯಾವಂತಿಯರ ಚರಿತ್ರೆಯನ್ನು ಹೇಳುತ್ತೇನೆ ಚಿತ್ತಗೊಟು ಕೇಳು. ಎಸ್ ಎಲ್ ಸಿ ಫಸ್ಟ್ ಇಯರ್ ಸೆಕೆಂಡ್ ಇಯರ್ ಕಲಿಯು ವಯಸ್ಸಿನಲ್ಲಿ. ತಮ್ಮೊಂದಿಗೆ ಕಲಿತ್ತಿದ್ದ ಹುಡುಗನ ಮೇಲೆ ಮನಸ್ಸು ಮಾಡಿ. ಯಾರಿಗೂ ಗೊತ್ತಾಗದಂತೆ ಮಾರಿಗೆ ಮುಸುಗು ಹಾಕಿಕೊಂಡು

ಹೋಗಿ. ಆ ಹುಡುಗನೊಂದಿಗೆ ಗುಡ್ಡ ಗೋವಾರದಲ್ಲಿ ಬೆತ್ತಲೆಯಾಗಿ ಬಿದ್ದು ಹೊರಳಾಡಿ ಬರುತ್ತಿದ್ದಾರೆ. ನಿನ್ನಂತ ವಿದ್ಯಾವಂತಿಯರು. ಊರಲ್ಲಿ ನಮ್ಮ ಪ್ರೇಮ ಕಾಮಕ್ಕೆ ಅಡ್ಡಿ ಆಗುತ್ತಾರೆ ಎಂದು ತಿಳಿದು. ನಾನು ಹಾಸ್ಟೆಲ್ ಗೆ ಹೋಗುತ್ತೇನೆ ಎಂದು. ಹಾಸ್ಟೆಲ್ ನಲ್ಲಿ ಸೇರಿಕೊಂಡು. ತನಗೆ ಬೇಕಾದ ಹುಡುಗನಿಗೆ ವಿಡಿಯೋ ಕಾಲಿಂಗ್ ನಲ್ಲಿ ಬೆತ್ತಲೆಯಾಗಿ ದೇಹ ತೋರಿಸುವ ಬಿನ್ನಾನಗಿತ್ತಿಯರ ಎಷ್ಟಿಲ್ಲ. ಈ ನಿನ್ನ ವಿದ್ಯಾರ್ಥಿಯ ಪುಟ್ಟದಲ್ಲಿ. ತನಗೆ ಬೇಕಾದ ಹುಡುಗನ ಜೊತೆ ಬೈಕ್ ನಲ್ಲಿ ಸುತ್ತಾಡಲು ಹೋದಾಗ. ಪರಿಚದವರು ಇವನು ಯಾರೆಂದು ಕೇಳಿದರೆ. ಇವನು ನನ್ನ ದೊಡ್ಡಪ್ಪನ ಮಗ ನನ್ನ ಅಣ್ಣ ಎಂದು ಹೇಳಿ. ಅದೇ ಅಣ್ಣನಿಗೆ ಬೆತ್ತಲೆಯಾಗಿ ದೇಹನು ಅರ್ಪಿಸಿವ ಬಂಡ ಹೆಣ್ಣುಗಳ ಎಷ್ಟಿಲ್ಲ ಈ ನಿನ್ನ ವಿದ್ಯಾರ್ಥಿಯ ಇತಿಹಾಸದಲ್ಲಿ. ನನ್ನ ಮಗಳು ತುಂಬಾ ಶಾಲೆ ಕಲಿತ್ತಿದ್ದಾಳೆ ಅವಳನ್ನು ವ್ಯವಸಾಯ ಮಾಡುವವನಿಗೆ ಕೂಲಿ ಕಾರ್ಮಿಕನಿಗೆ ಕೊಡುವುದಿಲ್ಲ ಒಳ್ಳೆ ನೌಕರಿದವನಿಗೆ ಕೊಡುತ್ತೇನೆ ಎಂದು ಜಂಬ ಕೊಚ್ಚಿ ಕುಳಿತಿರುವ ತಂದೆ ತಾಯಿಗೆ ನಿಮ್ಮಂತ ವಿದ್ಯಾರ್ಥಿಯರು ಕೊಡುವ ಮೊಟ್ಟ ಮೊದಲನೇ ಬಹುಮಾನ ಯಾವುದು ಗೊತ್ತಾ. ಕಳುವಿನ ಕಾಮದಿಂದ ಗರ್ಭಿಣಿಯಾಗಿ. ಮನೆಯಲ್ಲಿ ಗೊತ್ತಾದ ತಕ್ಷಣ. ತನ್ನ ಪ್ರಿಯಕರೊಡನೆ ಊರು ಬಿಟ್ಟು ಓಡಿ ಹೋಗಿ. ರಜಿಸ್ಟರ್ ಮ್ಯಾರೇಜ್ ಆಗಿ. ನಮ್ಮ ಪ್ರಾಣಕ್ಕೆ ಏನಾದರೂ ಹಾನಿ ಆದರೆ. ಅದಕ್ಕೆ ನನ್ನ ತಂದೆ ತಾಯಿ ಕಾರಣ ಎಂದು. ಅವರ ಮೇಲೆ ಪೊಲೀಸ್ ಕಂಪ್ಲೇಂಟ್ ಕೊಟ್ಟು. ಈ ಸಮಾಜದ ಜನರ ಮಧ್ಯ ಅವರನು ತಲೆತಗ್ಗಿಸುವಂತೆ ಮಾಡಿದ್ದಾರೆ ನಿನ್ನಂತ ಎಷ್ಟೋ ವಿದ್ಯಾವಂತಿಯರು. ಎ ಬಣ್ಣದ ಬೆಡಗಿ ನೀನೊಬ್ಬಳು ಸೌಂದರ್ಯ ತುಂಬಿ ತುಳುಕುತ್ತಿರುವ ಚಂದುಳ್ಳ ಹುಡುಗಿ. ಈ ನಾಗೇಂದ್ರನ ಕಾಮ ಎಂಬ ಹಸಿವಿಗೆ ಬಡಿಸು ಬಾ ನಿನ್ನ ದೇಹದ. ಶೀಲಾವೆಂಬ ಅಮೃತದ ಅಡುಗೆ ಬಾರಲೇ ಬಾ (ಕೈ ಹಿಡಿದು ಎಳೆಯುವನ್ನು)

ಕೀರ್ತಿ:– ಏ ನಾಗೇಂದ್ರ ನೀನು ತಿಳಿದುಕೊಂಡಿರುವ ಹಾಗೆ. ಹೆಣ್ಣಂದರೆ ಬರೆ ಭೋಗದ ವಸ್ತು ಅಲ್ಲಲೋ ಲ್ಲುಚ್ಚಾ. ನೀನು ಹೇಳಿದಾಗೆ ಅಂತ ನಡತೆಗೆಟ್ಟ ಹೆಣ್ಣಿನ ಜಾತಿಗೆ ಸೇರಿದವಳಲ್ಲ ನಾನು. ದುರ್ಗದ ಹುಲಿ ಒನಕೆ ಓಬವ್ವ. ವೀರರಾಣಿ ಕಿತ್ತೂರ ಚೆನ್ನಮ್ಮ. ಝಾನ್ಸಿ ರಾಣಿ ಲಕ್ಷ್ಮೀಬಾಯಿ. ಅಂತ ವೀರ ಒಣತಿಯರ ಜಾತಿಗೆ ಸೇರಿದ ಹೆಣ್ಣು ನಾನು. ಇನ್ನೊಂದು ಮಾತು ಹೆಚ್ಚಿಗೆ ಆಡಿದರೆ ನನ್ನ ಕಾಲಲ್ಲಿರುವ ಮೆಟ್ಟಿನಿಂದ ನಿನ್ನ ಮಾರಿ ಕೆತ್ತುವಂತೆ ಹೊಡೆಯಬೇಕಾಗುತ್ತದೆ ಬಲು ಜೋಕೆ

ನಾಗೇಂದ್ರ:– ಜೋಕೆ (ನಕ್ಕು) ಜೋಕೆ ಎಂದು ಜಿಗಿದಾಡಬೇಡಲೇ ಜಿಂಕೆ. ಕೆರಳಿದ ಕರಿ ಕಾಳಿಂಗ ಸರ್ಪದಂತೆ ಬೋರ್ಗರಿದು. ಮಿಡಿ ನಾಗರ ಹಾವಿನಂತೆ ಮೈಯಲ್ಲಾ ವಿಷ ತುಂಬಿಕೊಂಡು ನಿಂತಿರುವ ಈ ನರ ನಾಗರ ನಾಗೇಂದ್ರನಿಗೆ. ನಿನ್ನ ಮೆಟ್ಟಿನಿಂದ ಹೊಡೆಯುತ್ತೇನೆ ಎಂದು ಬೊಗಳಿದಿಯ ಬಂಡ ಹೆಣೆ. ಸುಂದರಿ ಎಂದು ಪ್ರೀತಿಯಿಂದ ಮಾತನಾಡಿಸಿದರೆ ಸೊಕ್ಕೇರಿ ಮಾತನಾಡಿದ ನಿನ್ನಂತ ಬಂಡ ಹೆಣ್ಣಿನ ಬಟ್ಟೆಯನ್ನು ಬಿಚ್ಚಿ. ಅಂದ

ಚಂದ ತುಂಬಿದ ಈ ನಿನ್ನ ದೇಹ ಎಂಬ ಭೂಮಿಯಲ್ಲಿ ಈ ನರ ನಾಗರ ನಾಗೇಂದ್ರನ ವಿಷ ಬೀಜ ಬಿತ್ತಿದಾಗಲೇ ನಿನ್ನ ಸೊಕ್ಕು ಮುರಿಯುತ್ತದೆ ಬಾರಲೇ ಬಾ (ಕೈ ಹಿಡಿದು ಎಳೆಯುವನು)

ಕೀರ್ತಿ:– ಕೈ ಬಿಡೊ ಕಾಮ ಚಂಡಲ. ನೋಡಿ ನೀವು ಹೇಳುದಾಗೆ ಕೇಳುತ್ತೆನೆ ನನ್ನನ್ನು ಬಿಟ್ಟು ಬಿಡಿ

ನಾಗೇಂದ್ರ:– ಹಾಗಾದರೆ ಸಪ್ತಶ್ವರಗಳನ್ನು ಮೀರಿಸುವ ಈ ಸಮಯದಲ್ಲಿ. ಒಂದು ಸುಂದರವಾದ ಗೀತೆಯನ್ನು ಹಾಡು

ಕೀರ್ತಿ:– ಆಯ್ತು ಹಾಡುತೇನೆ (ಜೋಡಿಪದ ಮುಗಿದ ನಂತರ)

ಕೀರ್ತಿ:– ಹಾಂ ನೋಡಿ ನೀವು ಹೇಳಿದಾಗೆ ನಾನು ಹಾಡಿದ್ದೇನೆ ನಾನಿನ್ನು ಬರುತ್ತೇನೆ

ನಾಗೇಂದ್ರ:– ಏ ಹುಡುಗಿ ನೀಲ್ಲು. ನೀನ ಹಾಡು ಕೇಳಿದ ತಕ್ಷಣ ಬಿಟ್ಟು ಬಿಡುತ್ತೀನೆಂದು ತಿಳಿದಿರುವೆಯಾ ಹೆಣ್ಣೇ. ನನ್ನ ಆಸೇ ತಿರಬೇಕಾದರೆ. ನಿನ್ನ ಶೀಲಾದ ರುಚಿ ಸವಿಯಲೇಬೇಕು. ಬಾರಲೇ ಬಾ (ಕೈ ಹಿಡಿದು ಎಳೆದುಕೊಂಡು ಒಳಗಡೆ ಹೋಗುವನು. ಸ್ವಲ್ಪ ಸಮಯದ ನಂತರ ಕೀರ್ತಿ ಅಮ್ಮ ಎಂದು ಕಿರುಚುಗಳು. ನಂತರ ನಾಗೇಂದ್ರ ಶರ್ಟ್ ಹಾಕಿಕೊಳ್ಳುತ್ತಾ ಬಂದು ಸಿಗರೇಟ್ ಹಚಿ ಬರುವನು)

ನಾಗೇಂದ್ರ:– ನನ್ನ ಮಾತಿಗೊಪ್ಪಿ ನಕ್ಕು ನಲಿದು ನವಿಲಿನಂತೆ ನರ್ತನೆ ಮಾಡಿದರೆ. ಅವರ ಜೀವನ ಬಲು ಸುಂದರ. ನಾನೇ ಸೌಂದರ್ಯವತಿ ಎಂದು ಸೊಕ್ಕೇರಿ ಉಬ್ಬಹಾರಿಸಿ ಮಾತನಾಡಿದರೆ. ಅವರ ಶೀಲ ಎಂಬ ಶ್ರೇಷ್ಠ ಬುತ್ತಿಯನ್ನು ಹದ್ದಿನಂತೆ ಕುಕ್ಕಿ ಕುಕ್ಕಿ ತಿನ್ನುವುದೇ ಈ ನರ ನಾಗರ ನಾಗೇಂದ್ರನ ದುರಂಕಾರ (ನಕ್ಕು) ಹೇಗಿದೆ ಹುಡುಗಿ ನಿನ್ನ ವಿಚಿತ್ರ ಆಕಾರ (ನಗುವಾಗ. ಕೀರ್ತಿ ವಿಕಾರವಾಗಿ ಬರುವಳು)

ಕೀರ್ತಿ :– ಏ ದುರಾತ್ಮ ನನ್ನ ಶೀಲವನ್ನು ಹಾಳು ಮಾಡಿದ ನಿನ್ನನ್ನು ಸುಮ್ಮನೆ ಬಿಡುವುದಿಲ್ಲ. ನಿನ್ನ ಮೇಲೆ ಪೊಲೀಸ್ ಕಂಪ್ಲೇಂಟ್ ಕೊಟ್ಟು. ನಿನ್ನನ್ನು ಗಲ್ಲಿಗೇರಿಸುವಂತೆ ಮಾಡುತ್ತೇನೆ

ನಾಗೇಂದ್ರ :– ಗಲ್ಲಿಗೇರಿಸುವಂತೆ (ನಕ್ಕು) ಲೇ ಹುಡುಗಿ ನಮ್ಮಂತ ಸಾಹುಕಾರರು ನೂರಾರು ಹೆಣ್ಣನ್ನು ಬಲತ್ಕರಿಸಿದರು. ಗಲ್ಲಿಗೆರಿಸಲು ಈ ಸರ್ಕಾರಕ್ಕೂ ಸಾಧ್ಯವಿಲ್ಲ. ಆ ನಿನ್ನ ಕೂರಟು ಕಚೇರಿಗಳಿಗೂ ಸಾಧ್ಯವಿಲ್ಲ. ನನ್ನ ಮೇಲೆ ಪೊಲೀಸ್ ಕಂಪ್ಲೇಂಟ್ ಕೊಡೋವರೆಗೂ ನಿನ್ನನ್ನು ಬದುಕಲು ಬಿಟ್ಟರೆ ತಾನೆ. ಈ ಪ್ರಪಂಚದಲ್ಲಿ ಈ ನರ ನಾಗರ ನಾಗೇಂದ್ರ ಒಬ್ಬನೇ ಇರಬೇಕು. ನಿನ್ನ ದೇಹದಲ್ಲಿ ನಾ ಬಿತ್ತಿದ ಬಿಜದಿಂದ ಈ ಧರೆಗೆ ಇನೊಬ್ಬ ನಾಗೇಂದ್ರ ಬರೋದಕ್ಕೆ ಪ್ರವೇಶವಿಲ್ ಮುಗಿತು ನಿನ್ನ ಜೀವನದ ಚೆರಿತ್ರೆ (ಮಚಿನಿಂದ ಕುತ್ತಿಗೆ ಕೊಯುವನು. ಕೀರ್ತಿ ಅಮ್ಮ ಎಂದು ಬಿಕ್ಕುತ್ತಾ ಬೀಳುವಳು) ಕೀರ್ತಿ (ನಕ್ಕು) ನನ್ನ ಪ್ರೇಮದ ಮಾತಿಗೋಪದೇ ಹರ್ಯಾಡಿದ ಹೆಣ್ಣಿನ ಶೀಲಾ

ಹರಣ ಮಾಡುವದೇ ಈ ನಾಗೇಂದ್ರನ ಹುಟ್ಟುಗುಣ (ನಕ್ಕು ಮಚ್ಚು ಅಲ್ಲೇ ಬಿಟ್ಟು ಹೋಗುವನು. ನಂತರ ಕಾರ್ತೀಕ ಸಾದ್ ಡ್ರೆಸಿನಲ್ಲಿ ಬರುವನು)

ಕಾರ್ತಿಕ:– ನನ್ನ ತಂಗಿ ಇವತ್ತು ನಾನು ಹುಟ್ಟಿದ ದಿನ ಎಂದು ದೇವಸ್ಥಾನಕ್ಕೆ ಹೋಗಿ ಬರುತೆನಂತ ಹೇಳಿ ಹೋದವಳು. ಎಷ್ಟೋತ್ತಾದರೂ ಇನ್ನೂ ಮನೆಗೆ ಬರಲಿಲ್ಲ. ಅದಕ್ಕೆ ಇಲ್ಲಿ ಇರಬಹುದೆಂದು ಇಲ್ಲಿಗೆ ಬಂದೆ. ಇಲ್ಲಿ ಕೂಡ ಕಾಣ್ತಾ ಇಲ್ಲ. ಎಲ್ಲಿ ಹೋಗಿರಬಹುದು (ಆ ಕಡೆ ಈ ಕಡೆ ನೋಡಿ) ಓಹೋ ಒಳಗಡೆ ಕುಳಿತಿರುಬಹುದು (ಒಳಗಡೆ ಹೋಗುವಾಗ ಬಾಗಿಲದಲ್ಲಿ ಬಿದ್ದಿರುತ್ತಾಳೆ. ತಂಗಿಯನ್ನು ನೋಡಿ ಗಾಬರಿಯಿಂದ ಚೀರುತ್ತಾನೆ) ತಂಗಿ ಏನಾಯ್ತಮ್ಮ ನಿನಗೆ. ಮಾತನಾಡಮ್ಮ ತಂಗಿ ಮಾತನಾಡುವ. ನಿನ್ನ ಅಣ್ಣ ಬಂದಿದ್ದೇನೆ ನೋಡಮ್ಮ ನಿನ್ನ ಅಣ್ಣನ್ನು. ತಂಗಿ ನೀನು ಹುಟ್ಟಿದ ಈ ಶುಭದಿನ ನಿನ್ನ ಸಾವಿನ ದಿನವಾಯಿತೆ. ಈ ನಿನ್ನ ಸ್ಥಿತಿಗೆ ಕಾರಣವದರು ರ್ಯಾರೆಂದು ಹೇಳು ತಂಗಿ ಹೇಳು. (ಅಲ್ಲಿದ್ದ ಮಚ್ಚು ಕೈಯಲ್ಲಿ ಹಿಡಿದು ಸಿಟ್ಟಿನಿಂದ) ನನ್ನ ತಂಗಿಯನ್ನು ಕೊಂದು ನನ್ನನ್ನು ಅನಾಥನಾಗಿ ಮಾಡಿದ ಆ ಆರಾಮ್ ಕೋರ ನನ್ನ ಮಗ ಯಾರೆಂದು ಕಂಡು ಹಿಡಿದು. ಅವನ ಕತ್ತು ಕಡಿಯಬೇಕಾದರೆ. ಕಾರ್ತಿಕ ಎಂಬ ಕಟು ಸತ್ಯದ ಹೆಸರನ್ನು ಕಡೆಗಣಿಸಿ. ಈ ಕತ್ತಿಯನ್ನು ಹಿಡಿದು. ಸಹೋದರಿ ಸೇಡಿಗಾಗಿ ಕತ್ತಿ ಹಿಡಿದ ಕ್ರಾಂತಿವೀರನಾಗಿ. ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಮಾಡುವ ಕೆಟ್ಟ ಶ್ರೀಮಂತ ಸೊಳೆಮಕ್ಕಳಿಗೆ. ಕರಿ ಕಾಳಿಂಗ ಸರ್ಪವಾಗಿ. ಈ ನಾಟಕಕ್ಕೆ ನಾಯಕನಾಗಿ. ಕತರ್ನಾಕ್ ಕಿಲ್ಲರ್ ಕ್ರಾಂತಿವೀರನಾಗದಿದ್ದರೆ. ನನ್ನ ಹೆಸರು ಸೇಡಿನ ಕಿಡಿ ಕಾರುವ ಕಾರ್ತಿಕನೇ ಅಲ್ಲ (ತಂಗಿಯನ್ನು ಹೊತ್ತುಕೊಂಡು ಹೋಗುವನು)

ಮಹೇಶ ಮನೆ

(ಮೈಲಾರಲಿಂಗಶ್ವರ ಫೋಟೋಕ ಪೂಜಿಸಿ ನಂತರ)

ಬಾಗ್ಯಶ್ರೀ:– ತಂದೆ ಏಳು ಕೋಟಿ ಒಡೆಯ ನಾಡಿನ ವಾಣಿ ನುಡಿಯುವ ನಿನಗೆ. ಈ ನಿನ್ನ ಮನೆಯ ಮೇಲೆ ಕರುಣೆ ಇಲವೇ ತಂದೆ. ಈ ನಿನ್ನ ಮನೆಗೆ ನಾನು ಸೊಸೆ ಆಗಿ ಬಂದು ಇಂದಿಗೆ ಅನೋದು ವರ್ಷವಾದರು. ನನ್ನ ಹೊಟ್ಟೆಯಲಿ ಒಂದು ಕೂಸು ಹುಟ್ಟಲ್ಲಿಲ ಈ ಮನೆಯಲ್ಲಿ ತೊಟ್ಟಿಲು ಕಟ್ಟಲ್ಲಿಲ. ಮಕ್ಕಳು ಇಲದ ಹೆಣ್ಣಿನ ಬಾಳು ಸಮುದ್ರದ ಮದ್ಯ ಇದ ಮರವು ಇದ್ದಂತೆ. ಸಮುದ್ರದಲ್ಲಿ ಎಷ್ಟೇ ನೀರು ಇದ್ದರು ಆ ಮರ ಚಿಗರೋಡೆಯಲ್ಲಿಲ. ಈ ಮನೆಯಲ್ಲಿ ಎಷ್ಟೇ ಸಿರಿತನ ಇದ್ದರು ವಂಶ ಬೆಳಿಸೋಕೆ ಒಂದು ಕೂಸು ಹುಟ್ಟಲ್ಲಿಲ.(ದುಃಖದಿಂದ) ಮಕ್ಕಳಿಲ್ಲದ ಹೆಣ್ಣಿಗೆ ಈ ಸಮಾಜ ಬಂಜೆಯೆಂಬ ಪಟ್ಟವನ್ನು ಕೊಟ್ಟು. ಅವರಾಡುವ ನಿಂದನೆ ಮಾತು ಕೇಳಿ ಕಣ್ಣಿರಲಿ ಕೈ

ತೊಳೆಯುವಂತೆ ಆಗಿದೆ ತಂದೆ ನನ್ನ ಜೀವನ. ಈ ನಿನ್ನ ಮಗಳ ಕಣ್ಣೀರು ನೋಡಿ ಕರುಣೆ ತೂರು ತಂದೆ ಕರುಣೆತೂರು (ಮಹೇಶ್ ಹಸಿರು ಶಾಲ್ ಹಾಕಿಕೊಂಡು ಹೊರಗಿನಿಂದ ಬರುವನು)

ಮಹೇಶ್:– ಬಾಗ್ಯಶ್ರೀ ಬಾಗ್ಯಶ್ರೀ...

ಬಾಗ್ಯಶ್ರೀ:– ಬನ್ನಿ ಸ್ವಾಮಿ ಹೊಲಕ್ಕೆ ಹೋಗಿ ಬಂದಿರ

ಮಹೇಶ:– ಹೌದು ಬಾಗ್ಯಶ್ರೀ ಹೊಲಕ್ಕೆ ಹೋಗಿ ಬಂದೆ. ಇದೇನು ಭಾಗ್ಯಶ್ರೀ ಭಕ್ತಿ ಇಂದ ನಿನ್ನ ಪೂಜೆ ಬಲು ಜೋರಾಗಿ ನಡದಿದೆ

ಬಾಗ್ಯಾಶ್ರೀ:– ಸ್ವಾಮಿ ಇವತ್ತು ಗುರುವಾರ ಅಲ್ಲವೆ ಅದಕ್ಕೆ ಮನೆ ದೇವಾ ಮೈಲಾರಾಲಿಂಗೇಶ್ವರನಗೆ ಪೂಜೆ ಮಾಡುತ್ತಿದೆ. ಹಾಂ ಸ್ವಾಮಿ ಪ್ರಸಾದ್ ತಗೆದುಕೋಳಿ (ಕೊಡುವಳು)

ಮಹೇಶ:– (ತಗೆದುಕೊಂಡು) ಬಾಗ್ಯಶ್ರೀ ಏನೆಂದು ಬೇಡಿಕೊಂಡೆ ಆ ನಿನ್ನ ದೇವನ ಹತ್ತಿರ

ಬಾಗ್ಯಶ್ರೀ:– ಸ್ವಾಮಿ ನಮ್ಮ ಮದುವೆ ಆಗಿ ಅನೋದು ವರ್ಷವಾದರು ಮಕ್ಕಳಾಗದ ನಮಗೆ. ಒಂದು ಮಗುವನ್ನು ಕರುಣಿಸು ಎಂದು ಬೇಡಿಕೊಂಡೆ ಸ್ವಾಮಿ

ಮಹೇಶ್:– ಬಾಗ್ಯಶ್ರೀ ಎಂತ ಹುಚ್ಚಿ ಕಣೆ ನೀನು ಮಕ್ಕಳು ಇಲೆಂದು ಮನದಲ್ಲಿ ಮರಗಬೆಡ ಮೈಲಾರ ಮಾಂತೇಶ ನಮ್ಮ ಮಕ್ಕಳೆಂದು ತಿಳಿದು ಜೀವನ ಸಾಗಿಸೋಣ

ಬಾಗ್ಯಶ್ರೀ:– ಸ್ವಾಮಿ ಮೈಲಾರ ಮಾಂತೇಶನನ್ನು ನಮ್ಮ ಮಕ್ಕಳನ್ನು ತಿಳಿದು ನಾವು ನಡೆದರೆ. ಮುಂದೆ ಅವರ ಮದುವೆಯಾದ ನಂತರ ನಮ್ಮನ್ನು ಬಿಟ್ಟು ಅವರು ಬೇರೆ ಹೋದರೆ ನಮ್ಮನ್ನು ನೋಡಿಕೊಳ್ಳುವರು ಯಾರು ಸ್ವಾಮಿ

ಮಹೇಶ:– ಭಾಗ್ಯಶ್ರೀ ಅದರ ಬಗ್ಗೆ ನೀನೇನು ಚಿಂತಿಸಬೇಡ. ನಮ್ಮ ಜೀವ ಇರೋವರೆಗೂ ನನ್ನ ತಮ್ಮಂದಿರು ನಮ್ಮನ್ನು ಬಿಟ್ಟು ಹಗಲುವುದಿಲ್ಲ. ಯಾಕೆಂದ್ರೆ ಸಣ್ಣ ವಸಿನಲಿ ಮನೆತನದ ಜಬ್ಬಾದಾರಿ ಹೊತ್ತು ಬದುಕುತಿರುವ ಬುದಿವಂತರು. ನನ್ನ ತಮ್ಮದಿರು

ಬಾಗ್ಯಶ್ರೀ:– ಹೌದು ರೀ. ಇಂದಿನ ಯುವಕರು ಶೆರೆ ಶೇಂದಿ ಗುಟ್ಖಾಕ್ಕ ಸಿಗರೇಟ್ ಎಂಬ ದುಶ್ಚಟಕ್ಕೆ ಬಲಿಯಾಗಿ. ಪರಸ್ತ್ರಿಯ ಹೆಣ್ಣಿನ ಸಂಘ ಮಾಡಿ. ತಂದೆ ತಾಯಿ ಮಾತು ಕೇಳದೆ ತಮ್ಮ ಮನ ಬಂದಂತೆ ಬದುಕುತ್ತಿದ್ದಾರೆ ಈ ಸಾಮಾಜದಲ್ಲಿ . ಆದರೆ ನಮ್ಮ ಮೈಲಾರ ಮಾಂತೇಶ ತುಂಬಾ ಬುದ್ಧಿವಂತರು. ನಮ್ಮ ಮಾತು ಮೀರೀ ಒಂದು ಹೆಜ್ಜೆ ಕೂಡ ಮುಂದೆ ಇಡುವುದಿಲ್ಲ ನನ್ನ ಮೈದುನರು

ಮಹೇಶ್:– ಬಾಗ್ಯಶ್ರೀ ನನ್ನ ಹಿರಿಯ ತಮ್ಮ ಮೈಲಾರನಿಗೆ 6 ವರ್ಷ. ನನ್ನ ಸಣ್ಣ ತಮ್ಮ ಮಾಂತೇಶ 2 ವರ್ಷವದರು ಇದಾಗ ನಮ್ಮ ತಂದೆ ತಾಯಿ ಸತ್ತು ಹೋದರು. ಅನಾಥರು ಎಂಬ ಬಾವನೆ ಅವರ ಮನಸಲಿ ಬರಬಾರದು ಎಂದು. ಹಗಲಿರುಳು ಎನ್ನದೆ ಕೂಲಿ ಕೆಲಸ ಮಾಡಿ. ಅವರನ್ನು ಬೆಳಸುತ್ತ ನಾನು ಕೂಡ ವಿದ್ಯಾ ಅಭ್ಯಾಸ ಮಾಡುತ್ತಿದೆ. ಆ ಮನೆ ದೇವನ ಅನುಗ್ರಹದಿಂದ ಕೊನೆಗೆ ಒಂದು ದಿನ್ ನನಗೆ ಕನ್ನಡ ಶಾಲೆ ಶಿಕ್ಷಕನಾಗುವ ನೌಕರಿ ಬಂತು. ಆದರೆ ನಮ್ಮ ದುರಾದೃಷ್ಟಕ್ಕೆ ಎರಡು ಲಕ್ಷ ಹಣ ಕಟ್ಟಿ ಆ ನೌಕರಿಗೆ ಸೇರಬೇಕೆಂದು ಬರೆದಿತ್ತು.ಒಂದು ಹೊತ್ತಿಗೆ ಗಂಜಿಗೆ ಗತಿ ಇಲ್ಲದ ನಮ್ಮ ಮನೆಯಲ್ಲಿ. ಅಷ್ಟೊಂದು ದುಡ್ಡು ಎಲ್ಲಿಂದ ಬರಬೇಕೆಂದು ಆ ನೌಕರೀನೇ ಬಿಟ್ಟಿದ್ದೆ. ಆದರೆ ನನ್ನ ತಮ್ಮ ಮೈಲಾರ ಮನೆಯವರಿಗೆ ಬಂದ ನೌಕರಿಯನ್ನು ಬಿಡಬಾರದೆಂದು. ತಾನು ಮತ್ತೊಬ್ಬರು ಕುರಿಯಲ್ಲಿ ಜೀತದಾಳಾಗಿ ದುಡಿದು ಎರಡು ಲಕ್ಷ ಹಣ ಕೊಟ್ಟು ನನ್ನನ್ನು ಆ ನೌಕರಿಗೆ ಸೇರಿಸಿದ. ಅವನ ಋಣದ ಭಾರ ನನ್ನ ಮೇಲೆ ತುಂಬಾ ಇದೆ ಬಾಗ್ಯಶ್ರೀ ತುಂಬಾ ಇದೆ. ಅವನು ಕೂಡ ಈಗ ವಯಸ್ಸಿಗೆ ಬಂದಿದ್ದಾನೆ ಅವನಿಗೊಂದು ಎಲ್ಲಿಯಾದರೂ ಒಳ್ಳೆ ಮನೆ ಕನ್ಯವನ್ನು ನೋಡಿ ಅವನಿಗೆ ಮದುವೆಯನ್ನು ಮಾಡಿದರೆ ನನ್ನ ಋಣವನ್ನು ಸ್ವಲ್ಪವಾದರೂ ತೀರುತ್ತದೆ.

ಭಾಗ್ಯಶ್ರೀ:– ಇರಲಿ ಬಿಡಿ ಸ್ವಾಮಿ ಅಣ್ಣ ತಮ್ಮಂದಿರ ಮಧ್ಯ ಋಣದ ಹೊರೆಕೇ. ಸ್ವಾಮಿ ನಮ್ಮ ಚಿಕ್ಕಪ್ಪನ ಮಗಳು ಮಧು ಅಂತ ಇದ್ದಾಳೆ. ಅವಳನ್ನು ನಮ್ಮ ಮೈಲಾರನಿಗೆ ತಂದುಕೊಂಡರೆ ಹೇಗಾಗುತ್ತೆ. ಅವಳು ಕೂಡ ತುಂಬಾ ಜಾಣೆ ಇದ್ದಾಳೆ. ತುಂಬಾ ಶಾಲೆಯನ್ನು ಕಲಿತಿದ್ದಾಳೆ

ಮಹೇಶ:– ಭಾಗ್ಯಶ್ರೀ ಅವಳು ತುಂಬಾ ಕಲಿತವಳು. ನನ್ನ ತಮ್ಮ ಕುರಿ ಕಾಯುವ ಹಳ್ಳಿಯ ಉಮ್ಮ. ಅವನ್ನನು ಮದುವೆಯಾಗಲು ಒಪ್ಪಿಕೊಳ್ಳಬೇಕಲ್ಲ. ಯಾಕಂದರೆ ಕಲಿತ ಹೆಣ್ಣು ಮಕ್ಕಳಿಗೆ ನೌಕರ ಎಂಬ ಬೆಂಬುತ ಬಡೆದುಕೊಂಡಿದೆ. ಈಗಿನ ಕಾಲದಲ್ಲಿ ಹೆಣ್ಣು ಹೆತ್ತ ತಂದೆ ತಾಯಿಗಳು ನಮ್ಮ ಮಗಳನ್ನು ನೌಕರಿದವನಿಗೆ ಕೊಡುಬೇಕೆಂದು ಮುಗ್ಧ ಭ್ರಮೆಯಲ್ಲಿ ಬದುಕುತ್ತಿದ್ದಾರೆ ಈ ಸಮಾಜದಲ್ಲಿ

ಭಾಗ್ಯಶ್ರೀ:– ಹೌದು ರೀ. ನೌಕರಿ ನೌಕರಿ ಅಂತ ಕಳ್ಳ ಬಳಿ ಕಳೆದುಕೊಂಡ ಕುಂತಿದ್ದಾರೆ ಈ ಸಮಾಜದ ಜನ. ನೌಕರಿ ಎಂಬ ಕ್ಷೆನಿಕ ಸುಖಕ್ಕೆ ಬೆನ್ನತ್ತಿದೆ ಈ ಸಮಾಜ. ತಮ್ಮ ಮಕ್ಕಳ ಜೀವನ ತಾವೇ ಹಾಳು ಮಾಡಿದರೆ ಈ ಸಮಾಜದಲ್ಲಿ ಎಷ್ಟೋ ಜನ. ಇರಲಿ ಬಿಡಿ ಸ್ವಾಮಿ. ಅದೆಲ್ಲ ಅವರ ಹಣೆಬರ ನಾವು ಒಂದು ಸಲ ಹೋಗಿ ಮಧುನನ್ನು ನೋಡಿಕೊಂಡು ಬರೋಣ ಅವರಿಬ್ಬರಿಗೂ ಮನಸ್ಸಿಗೆ ಬಂದರೆ ಮುಂದೆ ನೋಡೋಣ

ಮಹೇಶ:– ಹಾಗಾದರೆ ಒಂದು ದಿನ ಹೋಗಿ ನೋಡಿಕೊಂಡು ಬಂದರಾಯಿತು

ಭಾಗ್ಯಶ್ರೀ:– ರೀ ಅಣ್ಣ ತಮ್ಮಂದಿರ ವಿಷಯ ಮಾತನಾಡುತ್ತೇ ನಿಮಗೆ ಊಟಕ್ಕೆ ಕೊಡುವದನೆ ಮರೆತುಬಿಟ್ಟೆ. ಬನ್ನಿ ಬಿಸಿಬಿಸಿ ರೊಟ್ಟಿ ಮಾಡಿದೀನಿ ಊಟ ಮಾಡುವಂತೆ ಬನ್ನಿ ಸ್ವಾಮಿ

ಮಹೇಶ:– ಭಾಗ್ಯಶ್ರೀ ಊಟ ಮಾಡು ಕಿಂತ ಮುಂಚೆ ನಿನ್ನ ಗಂಡನ ಒಂದು ಆಸೆ ಏನೆಂದು ಕೇಳುವೇಯ

ಭಾಗ್ಯಶ್ರೀ:– ಏನ್ರೀ ಅದು ನಿಮ್ಮ ಆಸೆ,

ಮಹೇಶ:– ಭಾಗ್ಯಶ್ರೀ ಕೋಗಿಲೆಂತೆ ಹಾಡುತ್ತಾ. ನವಿಲುನಂತೆ ನರ್ತನ ಮಾಡುವ. ನಿನ್ನ ನರ್ತನ ನೋಡಬೇಕೆಂದು ಆಸೆ ಆಗಿದೆ ನನಗೆ

ಭಾಗ್ಯಶ್ರೀ:– ಆಗಲಿ ಸ್ವಾಮಿ ನಿಮ್ಮ ಅದ್ನೇನು ಮೀರುದುಂಟೆ. ಪತಿ ಅದ್ನೇನೋ ಪಾಲಿಸುವುದೇ ಸತಿಯಾದವಳ ಧರ್ಮ. ಬನ್ನಿ ಸ್ವಾಮಿ ನಿಮ್ಮ ಆಸೆಯಂತೆ ಹಾಡುತ್ತೇನೆ (ಜೋಡಿ ಪದ ಮುಗಿದ ನಂತರ. ಮೈಲಾರ ಕೈಯಲ್ಲಿ ಕೊಡ್ಲಿ ಹಿಡಿದು ಕುದುರೆ ಹತ್ತಿ ಬಂದು. ಕುದುರೆ ಇಳಿದು)

ಮೈಲಾರ:– ಅಣ್ಣ ಅತ್ತಿಗೆ ಇಬ್ಬರು ಗಾಡವಾಗಿ ಏನೋ ವಿಚಾರ ಮಾಡುತಿರುವಿರಲ್ಲ ಏನದು

ಬಾಗ್ಯಶ್ರೀ:– ಬಾ ಮೈದುನ. ಏನೂ ಇಲ್ಲ ಮೈಲಾರ ಈಗತಾನೆ ನಿಮ್ಮಾಣ್ಣ ಹೊಲದಿಂದ ಬಂದಿದಾರೆ. ಅದಕ್ಕೆ ನಮ್ಮ ಹೊಲದಲ್ಲಿ ಬೆಳೆಗಳು ಏಗಿದೆ ಎಂದು ಕೇಳುತ್ತಿದೆ ಅಷ್ಟೇ. ಇದೇನು ಮೈಲಾರ ನೀನ ಮೈ ಮೇಲೆ ಬಣ್ಣ. ಕೈಯಲ್ಲಿ ಕಡಗ

ಮೈಲಾರ:– ಅತ್ತಿಗೆ. ನಮ್ಮೂರ ಮಾರುತೆಶ್ವರ ಜಾತ್ರೆ ಅಂಗವಾಗಿ. ಉಸಿಗಿನ ಚೀಲದ ಎತ್ತಾಟವನ್ನು ಏರ್ಪಡಿಸಿದರು. ಅಲ್ಲಿಗೆ ದೊಡ್ಡ ದೊಡ್ಡ ಶಾಹರದಿಂದ ಪೈಲ್ವಾನರು ಬಂದಿದ್ದರು. ಆ ಚೀಲದ ಸ್ಪರ್ಧೆಯ ಕೊನೆಯ ಅಂಕದಲ್ಲಿ. ಕಾಳಿಂಗ ಎಂಬ ಪೈಲ್ವಾನನ್ನು. 5 ನಿಮಿಷದಲ್ಲಿ 21 ಉಟಾಬಸಿಯನ್ನು ಹೊಡೆದು. ನನಗಿಂತ ಒಂದೇ ಒಂದು ಉಟಾಬಸಿಯನ್ನು ಹೆಚ್ಚಿಗೆ ಹೊಡೆದು ತೋರಿಸರಿ ಎಂದು. ನಮ್ಮೂರ ಜನರಿಗೆ ಸೊಡ್ಡು ಹೊಡೆದು ಸವಾಲ್ ಹಾಕಿದ. ಅವನ ಮಾತಿಗೆ ನಮ್ಮೂರ ಹಿರಿಯರು ಅಂತ ಪೈಲ್ವಾನ ನಮ್ಮೂರಲ್ಲಿ ಇಲ್ಲವೆಂದು ಚಿಂತನಗೆ ಒಳಗಾದರೂ. ನನ್ನ ಸ್ನೇಹಿತರದ ಪ್ರಕಾಶ ಕಳಕೇಶ ನಮ್ಮ ಮೈಲಾರ ಇದ್ದಾನೆ ಎಂದು. ಊರ ಹಿರಿಯರಿಗೆ ಹೇಳಿ. ನನ್ನನ್ನು ಕೂಗಿ ಕರೆದರೂ. ನನ್ನ ಹೊಟ್ಟಿ ಚೀಲದಲ್ಲಿರುವ ಭಂಡಾರವನ್ನು ಹನಿಗೆ ಧರಿಸಿಕೊಂಡು. ಆ ಚೀಲಕ್ಕೆ ಬೆನ್ನು ಹಚ್ಚಿದ್ದು ಅಷ್ಟೇ ತಡ ಅತ್ತಿಗೆ 5 ನಿಮಿಷದಲ್ಲಿ 31 ಉಟಾಟಬಸಿಯನ್ನು ಹೊಡೆದು ಆ ಪೈಲ್ವಾನನಿಗೆ ಪ್ರತಿ ಉತ್ತರವಾಗಿ ಸೊಡ್ಡು ಹೊಡೆದನು. ಅದನು ನೋಡಿ ಅಲಿದ ಹಿರಿಯರು. ನಮ್ಮೂರ ಮರ್ಯಾದೆ ಉಳಿಸಿದ

ಕುರಿಗಾರ ಮೈಲಾರ ನೀನೆಂದು. ಗುಲಾಲ್ ಹಾರಸಿ ಒಂದು ತೊಲೆ ಬಂಗಾರದ ಕಡಗವನ್ನು ಬಹುಮಾನವಾಗಿ ಕೊಟ್ಟರು ಅತ್ತಿಗೆ ಈ ನಿಮ್ಮ ಮೈದುನ ಮೈಲಾರನಿಗೆ

ಮಹೇಶ:– ಮೈಲಾರ ಊರ ಉಸಾಬರಿ ನಮಗೆ ಬೇಡಪ್ಪಾ ಬೇಡ. ಯಾಕಂದರೆ ಗೆದ್ದಾಗ ಕ್ಯಾಕೆ ಸೀಳು ಹೊಡೆದವರು. ಸೋತಾಗ ಕೇಕೆ ಹಾಕಿ ನಗುತ್ತಾರೆ. ಅದಕ್ಕೆ ಬಲ್ಲವರು ಹೇಳಿದ್ದಾರೆ. ಊರಿಗೆ ಉಪಕಾರ ಮಾಡಬಾರದು ಸತ್ತ ಹೆಣಕ್ಕೆ ಸಿಂಗಾರ ಮಾಡಬಾರದು ಅಂತ. ಯಾಕಂದರೆ ಹಿಂದೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ. ನಮ್ಮ ನಾಡಿಗಾಗಿ ಹಗಲು ಇರುಳು ಎನ್ನದೆ ತನ್ನ ಪ್ರಾಣ ಪಣಕಿಟ್ಟು ಹೋರಾಡುವಾಗ. ಅವನ ಸ್ವಂತದವರೆ ಮೋಸ ಮಾಡಿ ಹಿಡಿದು ಕೊಡಲಿಲ್ಲವೇ. ಜೊತೆಗೆ ಇದ್ದುಕೊಂಡು ಬೆನ್ನಿಗೆ ಚೂರಿ ಹಾಕುವ ಕೆಟ್ಟ ಕದೀಮರು ಹುಟ್ಟಿದರಪ್ಪ ಈ ಸಮಾಜದಲ್ಲಿ. ಈ ಸಮಾಜದಲ್ಲಿ ನಾವು ಬದುಕಬೇಕಾದರೆ ಮೈಯೆಲ್ಲಾ ಕಣ್ಣಾಗಿರಬೇಕು ಮೈಲಾರ

ಮೈಲಾರ:– ಅಣ್ಣ. ಒದ್ದರೆ ಕಾಲು ಹಿಡಿಯುತ್ತಾರೆ. ಬಾಗಿದರೆ ಜೂಟು ಹಿಡಿಯುತ್ತಾರೆ. ಹರಕು ಬಟ್ಟೆ ಹಾಕಿಕೊಂಡರೆ ಬಡ ಭಿಕಾರಿ ಎನ್ನುತ್ತಾರೆ. ಮನಸ್ಸಿಗೆ ಬಂದ ಬಟ್ಟೆಯನ್ನು ಧರಿಸಿಕೊಂಡರೆ. ಶ್ರೀಮಂತ ಸೊಕ್ಕಿನವನು ಎನ್ನುತ್ತಾರೆ. ಈ ಸಮಾಜದ ದಡ್ಡ ಜನರ ಮಾತಿಗೆ ತಲೆ ಕೆಡಿಸಿಕೊಳ್ಳುವುದು ನಮ್ಮ ಮೂರ್ಖತನ.. ಅಣ್ಣ ಈ ನಾಡಿನ ವೀರ ಶೂರರ ಬಗ್ಗೆ. ನಮ್ಮ ನಾಡ ನುಡಿಯ ಬಗ್ಗೆ. ನಮ್ಮೂರ ಬಗ್ಗೆ. ಕೆಟ್ಟ ಮಾತನಾಡಿದನು ಕೇಳಿ. ಸಹಿಸಿಕೊಳ್ಳುವುದಕ್ಕೆ ನಾನೇನು ಸಿಖಂಡಿ ವಂಶದಲ್ಲಿ ಹುಟ್ಟಿಲ್ಲ ಅಣ್ಣ. ವೀರ ಸೂರ್ಯವಂಶದಲ್ಲಿ ಹುಟ್ಟಿದ ಗಂಡೆದೆಯ ವೀರ ಸರ್ದಾರ ಅಣ್ಣ. ಈ ನಿನ್ನ ತಮ್ಮ ಮೈಲಾರ

ಮಹೇಶ್:– ಮೈಲಾರ ಜೇನಿನ ಗುಡಿನಂತಿರುವ ಈ ನಮ್ಮ ಸಂಸಾರದ ಮೇಲೆ. ಯಾವ ದುಷ್ಟ ಶ್ರೀಮಂತರ ಕಣ್ಣು ಬಿದ್ದು. ಎಲ್ಲಿ ನಮ್ಮ ಮನೆ ವಡಕಾಗುತ್ತದೆಂದು ಭಯವಾಗುತ್ತಿದೆ ನನಗೆ. ಯಾಕೆಂದರೆ ನ್ಯಾಯ ನೀತಿಯಿಂದ ಬದುಕುವ ನಿಷ್ಠಾವಂತರ ಕಾಲ ಅಲ್ವಾಪ್ಪ ಇದು. ಇಲ್ಲಿ ಸುಳಿನ್ ಸಾಮ್ರಾಟ. ಸತ್ಯದ ಚಿರಾಟ ಧರ್ಮವಂತರಿಗೆ ತಪ್ಪಿದ್ದಲ್ಲಪ್ಪ. ಕಣಿರಿನ ಗೋಳಾಟ

ಮೈಲಾರ:– ಅಣ್ಣ. ಈ ನಮ್ಮ ಮನೆತದ ಮೇಲೆ ಯಾವನಾದರೂ ದುಷ್ಟ ಶ್ರೀಮಂತ ಕಣ್ಣಾಕಿದರೆ. ಕಣ್ಣನಾಕಿದ ಅ ಸೋಕಿನ ಶ್ರೀಮಂತನ ಕಣ್ಣು ಕಿತ್ತು. ನಮ್ಮ ಒಗ್ಗಟ್ಟಿನ ಬಗ್ಗೆ ಶಿಡುಕು ಮಾತನಾಡಿದ ಸಿಖಂಡಿ ನನ್ನ ಮಕ್ಕಳ ಸಿರ ಕಡಿಯುವುದಕ್ಕೆ ಹಾತೋರುತ್ತಿದೆ ಈ ಕುರಿಗಾರ ಮಸದ ಕೊಡಲಿ. ಅಣ್ಣ . ಹೆಗಲ ಮೇಲೆ ಕಂಬಳಿ ಹಾಕಿಕೊಂಡು ಕೈಯಲಿ ಕೊಡ್ಲಿ ಹಿಡಿದು ನಿಂತರೆ.. ಇವನು ಕುರಿ ಕಾಯೋ ಕುರಿಗಾರ. ಧರ್ಮದಿಂದ ನಡಿಯುವ

ಧರ್ಮವಂತರಿಗೆ. ಇವನು ಈ ಊರು ಕಾಯೋ ಕಾವಲೂಗಾರ. ಈ ಸಮಾಜದಲ್ಲಿ ದರ್ಪ ದಬಾಳಿಕೆ ಮಾಡುವ ಸೋಕಿನ ಶ್ರೀಮಂತರಿಗೆ ಇವನು ಮಿಕ್ಕಿದ ಮೈಲಾರ.

ಭಾಗ್ಯಶ್ರೀ:– ಇರಲಿ ಬಿಡು ಮೈಲಾರ. ನಿಮ್ಮ ಅಣ್ಣನಿಗೆ ಬರಿ ಊರದೆ ಚಿಂತೆ. ಮೈಲಾರ ನೀನು ಕುರಿದ್ದಡಿಯಲ್ಲಿ ಊಟ ಮಾಡಿ ಬಂದೇನಪ್ಪ

ಮೈಲಾರ:– ಅತ್ತಿಗೆ. ತಂದೆಗುನ್ನದ ಅಣ್ಣನ್ನನು ತಾಯಿಗುನ್ನದ ಅತ್ತಿಗೆಯನ್ನು ಬಿಟು ನಾನು ಎಂದಾದರು ಊಟ ಮಾಡಿದೆನಾ

ಮಹೇಶ:– ಮೈಲಾರ ನಮ್ಮ ಮೇಲೆ ಎಂತ ಅಪರವಾಧ ಪ್ರೀತಿಯಪ್ಪ ನಿನ್ನದು. ಮೈಲಾರ ಇಂಟ್ರೂಗೆ ಹೋದ ಮಹಾಂತೇಶ ಬರುವ ವೇಳೆ ಆಯಿತು. ಮಾಂತೇಶ ಬಂದ ನಂತರ ಎಲ್ಲರೂ ಸೇರಿ ಊಟ ಮಾಡೋಣ

ಬಾಗ್ಯಶ್ರೀ:– ಏನ್ರಿ ನೆನದವರ ಮನದಲಿ ಶ್ರೀಕೃಷ್ಣ ಪರಮಾತ್ಮ ಎಂದೆಂದತೆ. ನನ್ನ ಮುದಿನ ಮೈದುನ ಮಾಂತೇಶ ಬಂದೇಬಿಟ್ ನೋಡ್ರಿ ಅಲ್ಲಿ. ಹೇಗೆ ಬರತಾಹಿದಾನೆ ಈ ಮನೆಯ ರಾಜುಕುಮಾರ್ (ಮಾಂತೇಶ ಆರ್ಡರ್ ಲೆಟರ್ ಹೀಡುಕೊಂಡು ಬರುವನು)

ಮಾಂತೇಶ:– ಅಣ್ಣ ಅತ್ತಿಗೆ ಎಲರೂ ಆಶೀರ್ವಾದ ಮಾಡಿರಿ ನನಗೆ (ನಮಸ್ಕರಿಸುವನು)

ಭಾಗ್ಯಶ್ರೀ:– ಇದೇನು ಮಾಂತೇಶ ಬಲು ಸಂತೋಷದಿಂದ ಬಂದಿಯ.. ಏನೂ ವಿಶೇಯ

ಮಾಂತೇಶ:– ಅತ್ತಿಗೆ ನನ್ನ ಅಣ್ಣಂದಿರು ಹಗಲಿರುಳು ಏನ್ನದೆ ಕಷ್ಟಪಟ್ಟು ನನ್ನನು ಓದಿಸಿದ್ದಾರೆ. ಅವರ ಪರಿಶ್ರಮದ ಪಲವಾಗಿ ಇಂದು ನನ್ನಗೆ ಪೊಲೀಸ್ ನೌಕರಿ ಬಂದಿದೆ ಅತ್ತಿಗೆ.

ಮಹೇಶ:– ಹೌದೇ ಒಳೆದಯ್ತಿ ಸಹೋದರ. ಆದರೆ ನೌಕ್ರಿಗಾಗಿ ದೊಡ್ಡ ದೊಡ್ಡ ಅಧಿಕಾರಿಗಳು ಕೇಳಿದಷ್ಟು ಹಣ ಕೊಡುವದಕ್ಕೆ ನಮಗೆ ಆಗಲ್ಲ ಮಾಂತೇಶ ಆಗಲ್ಲ.

ಬಾಗ್ಯಶ್ರೀ:– ಸ್ವಾಮಿ. ಅದರ ಬಗ್ಗೆ ನೀವೇನು ಚಿಂತಿಸಬೇಡಿ ನನ್ನ ತವರು ಮನಿಯವರು ಕೊಟ್ಟಿರುವ ನಕ್ಲೆಸ ಸರ. ಗೊರಾಮಳ್ಳ ಸರ ಇದೆ. ಅದನ್ನು ಅಡವಿಟ್ಟು ಮಾಂತೇಶನ ನೌಕರಿಗಾಗಿ ನಾನು ಹಣ ಕೊಡುತೇನೆ.

ಮೈಲಾರ:– ಅಣ್ಣ ಅತ್ತಿಗೆ. ಮಾಂತೇಶನಿಗೆ ನೀವು ಅಷ್ಟೇ ಅಣ್ಣ ಅತ್ತಿಗೆ ಅಲ್ಲ. ನಾನು ಒಬ್ಬ ಅಣ್ಣ ಅದಿನಿ. ಅಣ್ಣ ನಾನು 10ಸಾವಿರ ಕೊಂದು 10 ಮರಿ ಮಾರಿದೇನೆ 1ಲಕ್ಷ ಹಣ ಬಂದಿದೆ. ಅಣ್ಣ ತಗಿದುಕೋ ಈ ಹಣವನು ಮಾಂತೇಶನ ನೌಕರಿಗಾಗಿ ಈ ಹಣ ಕೊಟ್ಟು ಬಿಡು

ಮಾಂತೇಶ:– ಅತ್ತಿಗೆ ಅಣ್ಣಂದಿರ. ನನ್ನ ಮೇಲೆ ಎಂತ ನಿಷ್ಕಲ್ಮಶವಾದ ಪ್ರೀತಿ ನಿಮ್ಮದು. ನನ್ನ ನೌಕರಿಗಾಗಿ ಎಲ್ಲರೂ ಎಷ್ಟು ಶ್ರಮ ಪಡುತ್ತಿದಿರ. ಅಣ್ಣ ದುಡ್ಡು ಕೊಟ್ಟು ನೌಕರಿಗೆ ಸೇರುವ ದಡ್ಡನಲ್ಲ ಈ ನಿಮ್ಮ ತಮ್ಮ

ಮಾಂತೇಶ. ಅಣ್ಣ ಅತ್ತಿಗೆಯ ಪರಿಶ್ರಮದಿಂದ. ಆ ಮನೆ ದೇವನ ಅನುಗ್ರಹದಿಂದ. ನನ್ನ ರಿಸಲ್ಟ್ ಮೇಲೆ ನೌಕರಿ ಸಿಕ್ಕಿದೆ ನನಗೆ. ನೌಕರಿಗಾಗಿ ಹಣ ಕೊಡುವ ಅವಶ್ಯಕತೆ ನನಗ ಇಲ್ಲ ಅಣ್ಣ

ಮಹೇಶ:– ಮೈಲಾರ. ಮಾಂತೇಶನಂತೆ ನೀನು ಶಾಲೆ ಕಲಿತಿದ್ದರೆ. ನಿನಗೂ ಯಾವದಾದುರು ಒಂದು ನೌಕ್ರಿ ಸಿಗುತಿತ್ತು. ಯಾಕಂದರೆ. ಈಗಿನ ಕಾಲದಲ್ಲಿ ವಕ್ಕಲತನ ಮಾಡುವಣಿಗೆ ಕೂಲಿ ಕಾರ್ಮಿಕನಿಗೆ. ಕುರಿ ಕಾಯೋಣಿಗೆ. ಕನ್ಯಾ ಕೊಡುವದಕೆ ಹಿಂಜರಿಯುತ್ತಾರಪ್ಪ. ಈ ಸಮಾಜದಲ್ಲಿ. ಎಲ್ಲರೂ ನೌಕರಿ ಎಂಬ ಭ್ರಮೆಯಲ್ಲಿ ಬದುಕುತಿದಾರೆ. ಇಂದಿನ ಕಲಿಗಾಲದಲ್ಲಿ

ಮೈಲಾರ:– ಅಣ್ಣ. ನೌಕರಿ ಎಂಬ ಭ್ರಮೆಯಲ್ಲಿ ಬದುಕುವ ಈ ದಡ್ಡ ಜನರಿಗೆ ಏನೂ ಗೊತ್ತು. ಈ ಕುರಿಗಾರಣ ತಾಕತ್ತು. ನಿನಗೆ ಗೊತ್ತಿಲ್ಲಿವೇಣ್ಣನ. ಅಡವಿ ಆರ್ಯನದಲಿ ಕುರಿ ಕಾಯೋ ಒಬ್ಬ ಕುರಿಗಾರ. ಆ ತಾಯಿ ಕಾಳಿಕಾಂಬೆ ವರ ಪಡೆದು. ಸಾವಿರಾರು ಕವನಗಳನ್ನು ರಚಿಸಿ. ಕವಿರತ್ನ ಎಂದು ಬಿರುದು ಪಡೆದರಲ್ಲ. ಆ ಕವಿರತ್ನ ಕಾಳಿದಾಸ. ಅವರು ಸೈತ ಕುರಿಕಾದವರೆ ಅಣ್ಣ. ಹಿಂದಿನ ಇತಿಹಾಸ ಹೇಳಿದರೆ ಈಗಿನ ಜನರಿಗೆ ತಿಳಿಯುದಿಲ್. ಇದೆ 2010ರಲಿ 60ಕು ಹೆಚು ರಿವಾಯ್ತಿ ಪದ. 500ಕು ಹೆಚು ಜಾನಪದ. ಕುರಿಗಾರ ಸಾಕಿದ ಹುಲಿ. ಮಾನುಳ್ಳವರ ಮನೆತನ. ರೈತ ಕಟ್ಟಿದ ಕ್ರಾಂತಿಯ ಕೋಟೆ ಎಂಬ ಸಮಾಜಿಕ ಕ್ರಾಂತಿಕಾರಿ ನಾಟಕವನ್ನು ರಚಿಸಿ. ಕವಿರತ್ನ ಕಲಾಕೇಸರಿ ಎಂದು ಬಿರುದು ಪಡೆದರಲ್ಲ. ಆ ಹನುಮಂತ ಸೋಮಪ್ಪ ಹೊಸಮನಿ. ಸಾ!! ಶಾಂತಗೆರಿ. ಇವರು ಕೂಡ ಕುರಿ ಕಾದವರೇ ಅಣ್ಣ. ಅಷ್ಟೇ ಅಲ್ಲ ಅಣ್ಣ. ಯಾವದೇ ವಿದ್ಯಾ ಅಭ್ಯಾಸ ಕಲಿಯದೇ. ಶಾಲೆ ಅಂಗಳ್ಳಕು ಕಾಲು ಇಡದೆ. 200ಕು ಹೆಚು ಜಾನಪದ ಗೀತೆಗಳನ್ನು ರಚಿಸಿ ಹಾಡಿ. ರೈತ ಹರಿಸಿದ ರಕ್ತದೋಕಳಿ. ಎಂಬ ಕ್ರಾಂತಿಕಾರಿ ಸಮಾಜಿಕ ನಾಟಕನ್ನು ರಚಿಸಿ.. ಈಗ ಈ ನಾಟಕದ ಬರಗಾರದ. ಕುಮಾರ್ ಹೇಮಂತ ಎನ್ ಕಡಿಯವರ ಸಾ!! ಹುನಗುಂಡಿ ಇವರು ಕೂಡ ಕುರಿ ಕಾದವರೇ ಅಣ್ಣ. ಯಾಕಣ್ಣ ಹಿಂದೆ ನಮ್ಮ ತಂದೆ–ತಾಯಿ ಸತ್ತು ಹೋದಾಗ. ಈ ಸಮಾಜದಲ್ಲಿ ನಾವು ಅನಾಥರಾಗಿ ನಿಂತಾಗ. ತುತ್ತು ಅನ್ನಕು ಗತಿ ಇಲ್ಲದಂತೆ ಆಗಿತ್ತು ನಮ್ಮ ಬಾಳು. ಆಗ ಈ ಕುರಿ ಎಂಬ ಮಹಾ ತಾಯಿ ನಮ ಮನೆಗೆ ಕಾಲಿಟ ಮೇಲೆ. ಈ ನಮ್ಮ ಮನೆತನ ಹಾಲಿನ ಹೊಳೆಯಾಗಿ ಹೋಕೇರಿತ್ತುಲ್ವೇನನ್ನ. ಅದಕ್ಕೆ ಅಣ್ಣ ಈ ಕುರಿಗೆ ತಾಯಿ ಎಂದು ಕರಿಯುತಾರೆ. ಭಕ್ತಿ ಇಂದ ಪೂಜೆ ಮಾಡುತ್ತಾರೆ. ಯಾರು ಕನ್ಯಾ ಕೊಡುವದ್ದಿಲ್ ಎಂದ ಮಾತ್ರಾಕೆ. ಈ ಕುರಿಯನ್ನು ಕೀಳಾಗಿ ಕಂಡರೆ. ಮೆಚ್ಚುವನೇ ಆ ಪರಮಾತ್ಮ. ಅಣ್ಣ ಒಂದು ಗಂಡಿಗೆ ಒಂದು ಹೆಣ್ಣು ಅಂತ. ಆ ಬ್ರಹ್ಮ ಬರಿದು ಕಳಿಸಿರುತಾನೆ. ಅದರ ಬಗ್ಗೆ ನೀನೇನೋ ಚಿಂತಿಸಬೇಡ ಅಣ್ಣ

ಬಾಗ್ಯಶ್ರೀ:– ಮೈಲಾರ ಮಾಂತೇಶ ನಿಮಗೆ ಯಾರಿಗೂ ಹಸಿವು ಆಗ್ಲಿಲ್ಲೇನ್ರಪ್ಪ. ಅಣ್ಣ ತಮ್ಮಂದಿರ ಮಾತನಾಡುತ್ತಾನಿತರೆ ಈ ಲೋಕವೇ ಮರೆತು ಬಿಡತ್ತೀರಾ ನೀವು. ಬನ್ನಿ ಬಿಸಿ ಬಿಸಿ ಊಟ ರೆಡಿ ಇದೆ ಎಲ್ಲರು ಸೇರಿ ಊಟ ಮಾಡೋಣ (ಭಾಗ್ಯಶ್ರೀ ಊಟ ತರೋದಕ್ಕೆ ಒಳಗೆ ಹೋಗುವಳು)

ಮಾಂತೇಶ:– (ಕೂಗುತ್ತಾ) ಅತ್ತಿಗೆ ನಾನು ಇವತ್ತೇ ಡ್ಯೂಟಿಗೆ ಜಾಯಿನ್ ಆಗಬೇಕೆಂದು ಆರ್ಡರ್ ಮಾಡಿದ್ದಾರೆ. ನಾನು ಡ್ಯೂಟಿಗೆ ಜಾಯಿನ್ ಆಗೋದಿಕ್ಕೆ ಲೇಟ್ ಆಗುತ್ತದೆ. ನಾನು ಅಲ್ಲೇ ಹೋಟೆಲ್ ನಲಿ ನಾಷ್ಟ ಮಾಡಿ ಹೋಗುತ್ತೇನೆ ನಾನಿನ್ನು ಬರುತ್ತೇನೆ (ಹೋಗುವಾಗ ಭಾಗ್ಯಶ್ರೀ ತಾಟಲ್ಲಿ ಊಟಕ್ಕೆ ಹಾಕಿಕೊಂಡು ಬರಬೇಕು)

ಭಾಗ್ಯಶ್ರೀ:– ನಿಂತ್ಕೋ ಮಾಂತೇಶ ಊಟ ಮಾಡಿದೆ ಹಾಗೆ ಹೋಗುವೆ. ಎಲ್ಲಿ ಆ ಮಾಡು (ಭಾಗ್ಯಶ್ರೀ ಮೈಲಾರನಿಗೆ ಮಾಂತೇಶನಿಗೆ ಕೈತುತ್ತು ತಿನಿಸಬೇಕು)

ಮಾಂತೇಶ:– ಅತ್ತಿಗೆ ತಂದೆ ತಾಯಿ ಪ್ರೀತಿ ಕಾಣದ ನಮಗೆ ನೀವೇ ತಂದೆ ತಾಯಿ ಆಗಿದ್ದೀರಿ. ನಿಮ್ಮ ಋಣ ಎಷ್ಟು ಜನ್ಮ ಎತ್ತಿದರು ತೀರದು ಅತ್ತಿಗೆ ತೀರದು

ಮೈಲಾರ:– ಅತ್ತಿಗೆ ಮಾಂತೇಶನಿಗೆ ನೌಕರಿ ಸಿಕ್ಕ ಈ ಸಿಹಿ ಸಮಯದಲ್ಲಿ ಎಲ್ಲರೂ ಒಂದು ಆನಂದದ ಗೀತೆಯನ್ನು ಹಾಡೋಣವೇ

ಭಾಗ್ಯಶ್ರೀ:– ಆಗಲಿ ಮೈದುನ. ಬನ್ನಿ ಎಲ್ಲರೂ ಸೇರಿ ಹಾಡೋಣ (ಹಾಡು ಹಾಡುವರು. ಹಾಡು ಮುಗಿದ ನಂತರ ಎಲ್ಲರೂ ಒಳಗೆ ಹೋಗುವರು)

ಪ್ರವೇಶ 2

ರಾಜೇಂದ್ರನ ಮಹಡಿಯ ಮನೆ

ರಾಜೇಂದ್ರ:– (ರಾಜೇಂದ್ರ ಮಹಡಿಯಿಂದ ಇಳಿದು ಸಿಗರೇಟ್ ಹಚ್ಚಿ) ದುಡ್ಡು (ನಕ್ಕು) ದುಡ್ಡೇ ದೊಡ್ಡಪ್ಪ ಎಂದು ಬದುಕುತ್ತಿರುವ ಈ ಸಮಾಜದಲ್ಲಿ. ನಾನು ಇಷ್ಟೊಂದು ದುಡ್ಡು ಗಳಿಸಬೇಕಾದರೆ. ಎಷ್ಟು ತಲೆಗಳನ್ನು ಕಡಿದಿದ್ದೇನೆ. ಎಷ್ಟು ತಲೆಗಳನ್ನು ಕಡಿಸಿದ್ದೇನೆ ಲೆಕ್ಕವೇ ಇಲ್ಲ (ನಕ್ಕು) ಒಂದು ಹಳ್ಳಿಯಲಿ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಗೆಲ್ಲಬೇಕಾದರೆ. ಎಂಟರಿಂದ ಹತ್ತು ಲಕ್ಷ ಬೇಕು. ಗೆದ್ದು ಬಂದ ಮೇಲೆ ಅಧ್ಯಕ್ಷ ಸ್ಥಾನ ಪಡೆಯಬೇಕಾದರೆ. ಅಲ್ಲಿ ಕೇಳಿದವನಿಗೆ ಕೇಳಿದಷ್ಟು ದುಡ್ಡು ಕೊಡಬೇಕು. ಹೀಗಿರುವಾಗ ಈ ತಾಲೂಕಿನ ಎಂಎಲ್ಎ ಆಗಿದ್ದೇನೆಂದರೆ. ಎಷ್ಟು ದುಡ್ಡು ಕೊಟ್ಟಿರಬೇಕು ಎಷ್ಟು ಮಂದಿ ಕಾಲಿಡಿದಿರಬೇಕು ಅದು ಎಲ್ಲಾ ನಿಮಗೆ ಅರ್ಥ ಆಗಿರುವುದಿಲ್ಲ. ಬರೆ ರಾಜೇಂದ್ರ ಆಗಿದ್ದ ನಾನು. ಈ ಸಮಾಜದ ಜನರ ತಲೆ ಮೇಲೆ ಕೋಟಿಗಂಟಲೆ ಹಣ ಸುರವಿ. ಕಂಡ ಕಂಡಲ್ಲಿ ಈ ದರಿದ್ರ ಮುಖಗಳಿಗೆ ಸಲಾಂ ಹೊಡಿದು. ಪ್ರತಿಯೊಬ್ಬರ ವೋಟನ್ನು ಕಿತ್ತುಕೊಂಡು ಇಂದು ಎಂಎಲ್ಎ

ರಾಜೇಂದ್ರನಾಗಿದ್ದೇನೆ.(ನಕ್ಕು) ನಾನು ಎಂಎಲ್ಎ ಆಗಿದ್ದು ಈ ದಡ್ಡ ಜನರ ಗುಲಾಮನಾಗಿ ಸಲಾಂ ಹೊಡಿಯುದಕಲ್ಲ. ಈ ರಾಜಕೀಯದಲ್ಲಿ ಸಾಕಷ್ಟು ಹಣ ಐಶ್ವರ್ಯ ಮಾಡಿಕೊಂಡು. ಇಲ್ಲಿ ನನ್ನದೇ ಸ್ವಂತ ಸಾಮ್ರಾಜ್ಯ ಸೃಷ್ಟಿಮಾಡಿಕೊಂಡು ರಾಜ್ಯಬಾರ್ ಮಾಡುವದಕ್ಕೆ(ನಕ್ಕು) ಈ ನನ್ನ ರಾಜಕೀಯ ಚದುರಂಗದಲಿ ಯಾವನಾದರೂ ಅಡ್ಡ ಬಂದರೆ... ಅವರ ದೇಹವನ್ನು ಅಡ್ಡ ಅಡ್ಡ ಕಡದು ಹಾಕಿ. ಅವರ ಹೇನಾದರಾಶಿ ಮೇಲೆ ನನ್ನ ರಾಜ್ಯಕೀಯ ಭದ್ರ ಕೋಟೆಯನು ಕಟ್ಟಿ ಮೇರೆಯುದೆ. ಈ ಕಲಿಯುಗದ ರಾವಣ ರಾಜೇಂದ್ರನ ಶಪಥ (ನಗುವಾಗ ಮಹೇಂದ್ರ ಕೈಯಲಿ ಸೂಟ್ಕೇಸ್ ಹಿಡಿದುಕೊಂಡು ಬರುವನ್ನು)

ಮಹೇಂದ್ರ:– ನಮಸ್ಕಾರ ಎಂ ಎಲೆ ಸಾಹೇಬರಿಗೆ

ರಾಜೇಂದ್ರ:– ಬಾ ಮಹೇಂದ್ರ ನೀನು ಹೋದ ಕೆಲಸ ಏನಾಯ್ತು. ಸಕ್ಸಸ್ ಇಲ್ಲ ನಾಟ್ ಸಕ್ಸಸೋ

ಮಹೇಂದ್ರ:– ನಾಟ್ ಸಕ್ಸಸ್ (ನಕ್ಕು) ಸಾಹೇಬ್ರೆ ಈ ಮಹೇಂದ್ರ ಮನಸು ಮಾಡಿದ್ರೆ ಸಕ್ಸಸ್ ಆಗದು ಯಾವದು ಇಲ್ಲ. ಈ ಮಹೇಂದ್ರ ಮಾತುಕೊಟ್ಟು ಮಚ್ಚು ಹಿಡಿದು ನಿಂತಗ. ನಾ ಮಾಡಬೇಕಾದ ಕಾರ್ಯಕೆ ಯಾವನಾದರೂ ಅಡ್ಡ ಬಂದರೆ.. ಅವರ ದೇಹವನ್ನು ಕೊಚ್ಚಿ ಹಾಕಿ. ಆ ಕಾರ್ಯವನು ಕೈಗೊಳದೆ ಬಿಡಲಾರ. ಈ ಮಗದಿರ ಮಹೇಂದ್ರ

ರಾಜೇಂದ್ರ:– ಮಹೇಂದ್ರ ನೀನು ಗಂಡೆದೆಯ ಗುಂಡಿಗಿಯ ಗಂಡು ಇದ್ದೀಯ ಎಂದು ತಿಳಿದುಕೊಂಡೆ. ನಿನ್ನನು ನನ್ನ ಬಲಗೈ ಬಂಟನಾಗಿ ಮಾಡಿಕೊಂಡಿದು. ನನ್ನ ಪ್ರತಿಯೊಂದು ಕಾರ್ಯದಲ್ಲಿ ಕೈಗೊಳುವ ಗಂಡು ನೀನು. ಮಹೇಂದ್ರ ಆ ಕಾಂಟ್ರಾಕ್ಟರ್ ಹರೀಶ್ ನಮಗೆ ಕೊಡಬೇಕಾದ ಮಾಮೂಲಿ ಕೊಟ್ಟಿದಾನೆ

ಮಹೇಂದ್ರ:– ಇಲ್ಲ ಸಾಹೇಬ್ರೆ ಆ ಹರೀಶ ಕಾಂಟ್ರಾಕ್ಟರ್ ನನ್ನ ಸ್ವಂತ ದುಡ್ಡನ್ನು ಹಾಕಿ ಕೆಲಸ ಮಾಡುತ್ತಿದ್ದೇನೆ ಈಗ ತಾನೆ ಬಿಲ್ ಆಗಿದೆ , ಅದರಲ್ಲಿ ನಿಮಗೆ ಯಾಕೆ ಕೊಡಬೇಕೆಂದು ಹಾರಾಡಿದ. ಹಾರಾಡಿದ ಅವನನ್ನು ಹರಣಪಾದ ಸೇರಿಸಿ ಅವನ ಹಣವನ್ನು ಈ ಸೂಟ್ಕೇಸ್ ನಲ್ಲಿ ತಂದಿದ್ದೇನೆ ತೆಗೆದುಕೊಳ್ಳಿ ಸಾಹೇಬರೇ

ರಾಜೇಂದ್ರ:– ಶಭಾಷ್ ಮಹೇಂದ್ರ ಶಭಾಷ್. ನಮ್ಮಂತ ಪ್ರತಿಯೊಬ್ಬ ರಾಜಕಾರಣಿಗಳ ಕೈಯಲ್ಲಿ ನಿನ್ನಂತ ಒಬ್ಬ ಗಂಡೆದೆ ವೀರ ಇದ್ದರೆ. ನಮ್ಮಂತ ರಾಜಕಾರಣಿಗಳ ಎದುರು ನಿಂತು ಕೇಳುವ ಸೂರು ಯಾವನಿದ್ದಾನೆ ಈ ದುನಿಯಾದಲಿ (ನಗುವಾಗ ಮೈಲಾರ ಕೊಡ್ಲಿ ಹಿಡಿದು ಎದೆ ಜೇಬಿನಲ್ಲಿ ಮೊಬೈಲ್ ಕ್ಯಾಮೆರಾ ಆನ್ ಮಾಡಿ ಇಟಕೊಂಡು ಬರುವನು)

ಮೈಲಾರ:– ನಮ್ಮನು ಕೇಳುವ ಸೂರ ಯಾವನು ಇಲ್ಲವೆಂದು ಸರದಾರನಾಗಿ ಮೆರೆಯ ಬೇಡ ಸಾಹೇಬ್. ಪ್ರತಿಯೊಂದು ಹಳ್ಳಿಯಲ್ಲಿ ನನ್ನಂಥ ಗಂಡೆದೆಯ ವೀರ ನಿಮ್ಮಂತ ದರ್ಪದ ದನಿಕರಿಗಾಗಿ ಹುಟ್ಟಿ ಬಂದಿರುತ್ತಾನೆ

ರಾಜೇಂದ್ರ:– ಗಂಡಿದೆಯ ವೀರ (ನಕ್ಕು) ಲೇ ಈ ಎಂಎಲ್ಎ ರಾಜೇಂದ್ರನ ಮನೆಗೆ ಬಂದು ಗಂಡೆದೆ ವೀರನೆಂದು ಗಂಟಲ ಹರಿದುಕೊಳ್ಳುತ್ತಿರುವೆಯಲ್ಲ ಯಾರಲೇ ನೀನು ಕತ್ತೆ

ಮೈಲಾರ:– ಮೈಲಾರ... ಕುರಿಗಾರ ಮೈಲಾರ.... ನಿಮ್ಮಂತ ದುಷ್ಟ ಶ್ರೀಮಂತರಗಾಗಿ ಸಿಡಿದೆದ್ದ ಮೈಲಾರ

ಮಹೇಂದ್ರ:– ಸಿಡಿದೆದ್ದ ಮೈಲಾರ (ನಕ್ಕು) ಲೆ ಮೈಲಾರ. ನೀನು ಸಿಡಿದೆದ್ದ ಮೈಲಾರ ಆದರೇನು. ಕುರಿಗಾರ ಮೈಲಾರ ಆದರೇನು. ಮೈಲಾರ ಅಂತ ಹೆಸರಿಟ್ಟುಕೊಂಡು ಮಾತ್ರಕ್ಕೆ ನೀನೇನು ಮೈಲಾರಿ ಪುರದ ಮೈಲಾರಣ. ಅಥವಾ ಗುಡ್ಡದ ಮೈಲಾರನ. ಸುಮ್ಮನೆ ದೇವ ಪುರುಷರ ಹೆಸರು ಹೇಳಿ ಗಂಟಲು ಹರಿದುಕೊಳ್ಳಬೇಡ. ಈ ಎಮ್ಮೆಲ್ಲೆ ಅವರ ಮನೆಗೆ ಬಂದ ಕಾರಣ ಏನೆಂದು ಮೊದಲ ಹೇಳಲೇ

ಮೈಲಾರ:– ಲೇ ಮಹೇಂದ್ರ... ಅಂದು ಮಲ್ಲ ಮನಿಕರ ಸಂಹಾರಕ್ಕಾಗಿ ಉತ್ತರ ದಿಕ್ಕಿನಲ್ಲಿ ಸಾಕ್ಷಾತ ಶಿವನ ಅವತಾರದಿಂದ. ಶಿಶುವಾಗಿ ಈ ಧರೆಗಿಳಿದು ಬಂದ. ಅ ಗುಡ್ಡದೊಡೆ ಮೈಲಾರಲಿಂಗ ನಾನಲ್ಲ. ಏಳು ಕೋಟಿ ಎಂದು ಬಂದವರ ಏಳು ಸ್ವರವಾಗುತ್ತೇನೆ. ಚಾಂಗ್ ಮಲೋ ಎಂದು ಬಂದವರ ಜಾಗೃತಿ ಕಾಯುತ್ತೇನೆ ಎಂದು ನುಡಿದಂತೆ ನಡೆದು. ಭಂಡಾರದ ಒಡೆಯ ಎಂದು ಕೀರ್ತಿ ಪಡೆದು. ಭಂಡಾರದಿಂದ ಭಕ್ತರ ಬಾಳನ್ನು ಬಂಗಾರ ಗೊಳಿಸಿದ ಆ ಮೈಲಾರಲಿಂಗನ ಮನೆ ಮಗನಾಗಿ ಹುಟ್ಟಿ ಬಂದಿದ್ದಾನೆ. ಈ ಕಲಿಯುಗದ ಮೈಲಾರ

ರಾಜೇಂದ್ರ:– ಕಲಿಯುಗದ ಮೈಲಾರ (ನಕ್ಕು) ಲೇ ಮೈಲಾರ ನೀನು ಕಲಿಯುಗದ ಮೈಲಾರದರೇನು. ದ್ವಾಪರಯುಗದ ಮೈಲಾರ ಆದರೇನು. ನೀನು ಯಾರಾದರೇ ನಮ್ಮಗೇನಲೆ. ಈ ಎಂ ಎಲೆ ಮನೆಗೆ ಯಾಕೆ ಬಂದ್ದಿಯ ಹೇಳು

ಮೈಲಾರ:– ನೋಡು ಎಂ ಎಲ್ ಎ ಸಾಹೇಬ. ಚುನಾವಣೆ ಬಂದಾಗ ನಿಮ್ಮ ಗ್ರಾಮವನ್ನು ಅಭಿವೃದ್ಧಿ ಮಾಡುತ್ತೇನೆ. ರೈತರ ಸಾಲವನ್ನು ಮನ್ನಾ ಮಾಡುಸುತ್ತೇನೆ ನೀವು ಹೇಳಿದಂತೆ ಕೇಳುತ್ತೇನೆ ಎಂದು ಮಾತು ಕೊಟ್ಟು. ನಿಮ್ಮ ಮತವನ್ನು ಹಾಕಿ ನನ್ನನ್ನು ಗೆಲ್ಲಿಸಿ ಎಂದು ಕೈ ಮುಗಿದು ಬೇಡಿಕೊಂಡು. ಆರಿಸಿ ಬಂದ ನಂತರ ವಿಧಾನ ಸೌಧ ಸೇರಿಕೊಂಡು. ಪ್ರತಿಯೊಬ್ಬ ರಾಜಕಾರಣಿ ಅಂತೇ ನೀನು ಬಣ್ಣ ಬದಲಿಸಿ ನಮ್ಮೂರ ಗ್ರಾಮ ಪಂಚಾಯಿತಿಗೆ ಬರಬೇಕಾದ ಎಲ್ಲ ಸೌಲಭ್ಯಗಳನ್ನು ನುಂಗಿ ಹಾಕಿದ ನಿನ್ನನು. ಎದೆ ತಟ್ಟಿ ಕೇಳುವುದಕ್ಕೆ ಬಂದಿದ್ದಾನೆ ಈ ಕುರಿಗಾರ ಮೈಲಾರ

ರಾಜೇಂದ್ರ:– ಕುರಿಗಾರ ಮೈಲಾರ (ನಕ್ಕು) ಲೆ ಮೈಲಾರ ಅದನ್ನು ಕೇಳೋದಕ್ಕೆ ಗ್ರಾಮ ಪಂಚಾಯತಿಯಲ್ಲಿ ಅಧ್ಯಕ್ಷರಿದ್ದಾರೆ ಮೆಂಬರ್ಗಳು ಇದ್ದಾರೆ ಅಷ್ಟೇ ಯಾಕೆ ಸರಕಾರದ ಅಧಿಕಾರಿಯಾದ ಪಿಡಿ ಸಾಹೇಬರು ಇದ್ದಾರೆ.

ಅಡವಿಯ ಅರಣ್ಯದಲ್ಲಿ ಕುರಿ ಕಾಯ್ದನ್ನು ಬಿಟ್ಟು ಗ್ರಾಮ ಪಂಚಾಯತಿ ವಿಷಯಕ್ಕೆ ತಲೆ ಹಾಕಿ ಸುಮ್ಮನೆ ತಲೆ ಕೆಡಿಸಿಕೊಂಡು ಹುಚ್ಚನಾಗಬೇಡ ಇಲ್ಲಿಂದ ಸುಮ್ಮನೆ ಹೊರಡು

ಮೈಲಾರ:– ಲೇ ಎಂಎಲೇ ಸಾಹೇಬ. ಕೇಳುವುದಕ್ಕೆ ಗ್ರಾಮ ಪಂಚಾಯತಿಯಲ್ಲಿ ಅಧ್ಯಕ್ಷರು ಮೆಂಬರ್ಗಳು ಇದ್ದಾರೆ ಅಂತ ಹೇಳುತ್ತಿಯಲ್ಲ ಅವರು ಅಷ್ಟೇ ನಿನಗೆ ವೋಟು ಹಾಕಿಲ್ಲ ಲೇ ಈ ಸಮಾಜದ ಪ್ರತಿಯೊಬ್ಬ ರೈತರು ನಮ್ಮ ಕಷ್ಟಕ್ಕೆ ನೀನಾಗುತ್ತಿಯ ಎಂದು ನಿನ್ನ ಮೇಲೆ ನಂಬಿಕೆ ಇಟ್ಟು. ತಮ್ಮ ಪವಿತ್ರವಾದ ಮತವನ್ನು ನಿನಗೆ ಕೊಟ್ಟು ನಿನ್ನನ್ನು ಆರಿಸಿ ತಂದಿದ್ದಾರೆ ಆ ರೈತರ ನಂಬಿಕೆಗೆ ಮೋಸ ಮಾಡಿದು ಒಂದೇ. ಹೆತ್ತ ತಾಯಿಯನ್ನು ಕತ್ತು ಹಿಚುಕಿ ಸಾಯಿಸಿದು ಒಂದೇ ನಿಮ್ಮಂತ ರಾಜಕಾರಿಗಳು ಆಡುತ್ತಿರುವ ಈ ಕಣ್ಣು ಮುಂಚ್ಚಲಿ ಆಟವನ್ನು ನೋಡಿ ಈ ರೈತರ ಸಿಡಿದೆದ್ದರೆ ನಿಮ್ಮಂತ ರಾಜಕಾರಣಿಗಳ ಮನೆಗಳಿಗೆ ಬೆಂಕಿ ಹಚ್ಚಿದೆ ಬಿಡಲಾರರು ಈ ರೈತರು ಎಚ್ಚರವಿರಲಿ

ರಾಜೇಂದ್ರ:– ರೈತರು (ನಕ್ಕು) ಲೆ ಮೈಲಾರ ಈ ರೈತರು ನನಗೆನು ಸುಮ್ಮನೆ ವೋಟು ಹಾಕಿಲ್ಲ ಲೇ ಕುಡಿಯಕ್ಕ ಎಂಡ ಕೊಟ್ಟೀನಿ. ತಿನ್ನಾಕ ಖಂಡ ಕೊಟ್ಟಿನಿ. ಇವರು ಕೇಳಿದಾಗ **500** ಸಾವಿರ ನೋಟು ಕೊಟ್ಟೀನಿ. ಅಂದಾಗ ಇವರ ಅಂದರೆ ನನಗೆ ಯಾವ ಭಯವಿಲ್ಲ ಯಾವ ಅನುಕಂಪವವಿಲ್ಲ. ಸುಮ್ಮನೇ ಈ ರೈತರ ಹೆಸರು ಎತ್ತಿ ಗಂಟಲು ಹರಿದುಕೊಳ್ಳಬೇಡ. ನಿನಗೆ ಕುರಿ ಸಾಕಾಣಿಕೆ ಮಾಡುವುದಕ್ಕೆ ಒಂದು ಶೆಡ್ಡು ಬೇಕಾದರೆ ಹೇಳು. ಸರ್ಕಾರದಿಂದ ಆಗದಿದ್ದರೆ ನನ್ನ ಸ್ವಂತ ದುಡ್ಡಿನಲ್ಲಿ ಕಟ್ಟಿಸಿ ಕೊಡುತ್ತೇನೆ. ಅದನ್ನು ಬಿಟ್ಟು ರೈತರ ಪರ ನಿಂತು ಹೋರಾಟ ಮಾಡುತೆನೆ ಎಂದು ಮುಂದೆ ಅಡಿ ಇಟ್ಟರೆ. ಅನ್ನ ತಿನ್ನೋದಕ್ಕೆ ಸರಕಾರದಿಂದ ಹಿಡಿ ಅಕ್ಕಿ ಕೂಡ ಸಿಗುವುದಿಲ್ಲ ನೆನಪಿರಲಿ ನಿನಗೆ. ಲೆ ಮೈಲಾರ ಈ ರೈತರ ಮೇಲೆ ಇಷ್ಟೊಂದು ಅನುಕಂಪ ತೋರಿ ಗಂಟಲು ಹರಿದುಕೊಳ್ಳುತ್ತಿರುವೆಯಲ್ಲ. ಇದೇ ರೈತರ ಹೊಲದಲ್ಲಿ ನಿನ್ನ ಕುರಿಗಳು ಹೋದರೆ. ಅವರ ಕೈಯಲ್ಲಿ ನೀನು ಸಿಕ್ಕರೆ. ನಿನ್ನ ಮೈಯೆಲ್ಲಾ ಮಾಯದ ಹುಣ್ಣು ಆಗುವಂತೆ ಹೊಡೆದು ಕಳಿಸುತ್ತಾರೆ ಈ ರೈತರು. ಇಂಥ ಕಟುಕ ರೈತರ ಮೇಲೆ ನಿನ್ನ ಹಂಬಲ ಇಷ್ಟ್ ಯಾಕಲೇ ಮಳ್ಳ ಕುರಿಗಾರ

ಮೈಲಾರ:– ಲೇ ಎಂಎಲ್ಎ ಸಾಹೇಬ. ತಪ್ಪು ಮಾಡಿದರೆ ಆ ದೇವರು ಕೂಡ ಶಿಕ್ಷೆ ಕೊಡುತ್ತಾನೆ ಆ ದೇವರ ಪ್ರತಿರೂಪವಾಗಿರುವ ಈ ನಾಡಿನ ಅನ್ನದಾತ. ಈ ರೈತ. ನಮ್ಮ ಕುರಿಗಳು ಅವರ ಹೊಲದಲ್ಲಿ ಹೋಗಿ ಅವರ ಬೆಳೆಯನ್ನು ನಾಶ ಮಾಡಿದರೆ. ನಾವು ಮಾಡಿದ ತಪ್ಪಿಗಾಗಿ ಅವರು ನಮ್ಮನ್ನು ಹೊಡೆದರೆ ತಪ್ಪೇನು ಇವತ್ತು ಅವರು ನಮ್ಮನ್ನು ಹೊಡೆದು ಕಳಿಸಿದ್ದರು ಮುಂದೆ ಒಂದು ದಿನ ನಮ್ಮನ್ನು ಕರೆಸಿ ಅವರ ಹೊಲದಲ್ಲಿ ಕುರಿ ದಡ್ಡಿಯನ್ನು ಹಾಕಿಸಿ. ತಮ್ಮ ಮನೆಯಿಂದ ಬುತ್ತಿ ಮಾಡಿಸಿಕೊಂಡು ಬಂದು ನಮ್ಮ ಜೋಡಿ ಕುಳಿತುಕೊಂಡು

ಹಾಲುಸಂಘಟಿ ಉಂಡು ಸಂತೋಷದಿಂದ ಹೋಗುತ್ತಾರೆ ಈ ರೈತರು. ಈ ರೈತ ಈ ಕುರಿಗಾರ ಅಣ್ಣ–ತಮ್ಮರಿದಂತೆ. ಈ ಅಣ್ಣ ತಮ್ಮಂದಿರ ಗತ್ತು. ನಿನ್ನಂತ ನಾಯಿಗೆ ಏನು ಗೊತ್ತು. ಲೇ ಎಂಎಲ್ಎ ಸಾಹೇಬ ಮರ್ಯಾದೆ ಕೊಟ್ಟು ಹೇಳುತ್ತೇನೆ. ನಮಗೆ ಬರಬೇಕಾದ ಎಲ್ಲಾ ಸೌಲಭ್ಯಗಳು ನಾಳಿಗೆ ಜಾರಿ ಆದರೆ ಸರಿ. ಇಲ್ಲ ಮತ್ತೆ ನಿನ್ನ ರಾಜಕಾರಣಿ ಕುತಂತ್ರಿ ಬುದ್ಧಿಯನ್ನು ತೋರಿಸಿದರೆ. ನಮ್ಮ ಗ್ರಾಮದ ರೈತರನ್ನು ರೊಚ್ಚಿಗೆಬಿಸಿ ನಿನ್ನ ಮನೆಗೆ ಬೆಂಕಿ ಹಚ್ಚಿಸಿಬಿಡುತ್ತೇನೆ ಬಲೆ ಎಚ್ಚರ

ರಾಜೇಂದ್ರ:– ಎಚ್ಚರ (ನಕ್ಕು) ಲೆ ಮೈಲಾರ ನಿನಗೆ ಎಷ್ಟು ತಿಳಿಸಿ ಹೇಳಿದರು ತಿಳಿದುಕೊಳ್ಳಲಾಗದ ಹುಚ್ಚ ಕುರಿಗಾರ ನೀನು. ನಿನ್ನ ಮಾತು ಕಟ್ಟಿಕೊಂಡು ಯಾವನಾದರೂ ಈ ಎಂಎಲ್ಎ ಮನೆ ಒಳಗಡೆ ಪ್ರವೇಶ ಮಾಡಿದರೆ. ನಮ್ಮ ಮನೆ ಕಳ್ಳತನ ಮಾಡೋಕೆ ಬಂದಿದ್ದಾರೆ ಎಂದು ಅವರ ಮೇಲೆ ಪೊಲೀಸ್ ಕಂಪ್ಲೇಂಟ್ ಕೊಟ್ಟು ಅವರನ್ನು ಒದ್ದು ಒಳಗಡೆ ಹಾಕಿಸಿ. ಅವರಿಗೆ ತುತ್ತು ಕೂಳು ಕೂಡ ಸಿಗದಂತೆ ಮಾಡದಿದ್ದರೆ ನನ್ನ ಹೆಸರು ಖಾದಿ ತೊಟ್ಟ ಖತರ್ನಾಕ್ ರಾಜಕಾರಣಿ ಈ ಕಲಿಯುಗದ ರಾವಣ ರಾಜೇಂದ್ರನೆ ಅಲ (ನಕ್ಕು)

ಮೈಲಾರ:– (ಜನರ ಕಡೆ ಕೈ ಮಾಡಿ) ಏ..... ಈ ಸಮಾಜದ ದಡ್ಡ ಜನತೆ. ಹೀಗಾದರೂ ಅರ್ಥ ಆಗಬೇಕು ನಿಮ್ಮ ಹೇಸಿ ಮನಸಿಗೆ. ನಂದು ಆ ಪಕ್ಷ ನಿಂದು ಈ ಪಕ್ಷ ಎಂದು. ನೀವುಕ ನೀವೇ ಬಡದಾಡಿ ಸಾಯುತ್ತಿದ್ದೀರಿ. ಅಣ್ಣ ತಮ್ಮಂದಿರಂತೆ ಬಾಳಬೇಕಾದ ನಿಮ್ಮ ಮಧ್ಯ ಕದನ ಹಚ್ಚಿ. ನಿಮ್ಮನ್ನು ಕೋಟು ಕಚೇರಿಯಂತ ಅಲೆದಾಡುವಂತೆ ಮಾಡಿ. ಮತ್ತೆ ನಿಮ್ಮನ್ನು ಬಿಡಿಸಿವಂತೆ ನಾಟಕ ಮಾಡಿ ನಿಮ್ಮ ಮೇಲೆ ರಾಜ್ಯಭಾರ ಮಾಡುತ್ತಿದ್ದರೆ ಇಂಥ ನೀಚ ರಾಜಕಾರಣಿಗಳು. ನಾಚಿಕೆಯಾಗಬೇಕು ಈ ನಿಮ್ಮ ಮುಸುಡಿಗೆ. ಐದು ನೂರರ ನೋಟಿಗಾಗಿ. ಕೆಜಿ ಕಂಡಕ್ಕಾಗಿ. ಬಾಟ್ಲಿ ಹೆಂಡಕ್ಕಾಗಿ. ಪವಿತ್ರವಾದ್ ನಿಮ್ಮ ಮತವನ್ನು ಇಂಥ ಕೆಟ್ಟ ನನ್ನ ಮಕ್ಕಳಿಗೆ ಹಾಕಿ ಇವರ ಗುಲಾಮರಾಗಿ ಬದುಕುತ್ತಿದ್ದೀರಲ್ಲ ನಿಮ್ಮಂತ ನರ ಸತ್ತ ನಾಮರ್ಧರ್ ಗಳಿಗೆ ಏನು ಹೇಳುವುದು. ಲೇ ಎಮ್ಎಲ್ಎ ಸಾಹೇಬ. ಇಷ್ಟೊತ್ತು ನೀನು ಮಾತನಾಡಿದ ನಿನ್ನ ರಾಜಕೀಯ ನಾಟಕದ ಮಾತುಗಳನ್ನು (ಮೊಬೈಲ್ ತೋರಿಸಿ) ಈ ನನ್ನ ಮೊಬೈಲ್ ನಲ್ಲಿ ವಿಡಿಯೋ ಮಾಡಿದ್ದೇನೆ ನಾಳೆ ಬೆಳಗ್ಗೆ **8:00**ಗೆ ಬರುವ ಪೇಪರ್ ನಲ್ಲಿ ನಮ್ಮ ಊರ ಗ್ರಾಮ ಪಂಚಾಯಿತಿಗೆ ಬರಬೇಕಾದ ಎಲ್ಲ ಸೌಲಭ್ಯಗಳನ್ನು ಘೋಷಣೆ ಮಾಡಿ ಬರೆದು ಕಳಿಸಿದರೆ ಸರಿ. ಇಲ್ಲ ಅದೇ ಪೇಪರಲ್ಲಿ ಭ್ರಷ್ಟ ರಾಜಕಾರಣಿ ರಾಜೇಂದ್ರ ಎಂದು ಪ್ರಸಾರ ಮಾಡಿ ಆ ನಿನ್ನ ಎಂಎಲ್ಎ ಕುರ್ಚಿಗೆ ರಾಜೀನಾಮೆ ಕೊಟ್ಟು ಮನೆಗೆ ಬರುವಂತೆ ಮಾಡದಿದ್ದರೆ.. ನನ್ನ ಹೆಸರು ನಿಮ್ಮಂತ ಸೊಕ್ಕಿನ ಶ್ರೀಮಂತರಿಗೆ ಮಿಕ್ಕಿದ ಮೈಲಾರನೆ ಅಲ್ಲ ಬರುತ್ತೇನೆ

ಮಹೇಂದ್ರ:- ಲೇ ಮೈಲಾರ ನಿಂತುಕೋ ಮಗನೇ ಮರ್ಯಾದಿಂದ ಅ ಮೊಬೈಲ್ ವಿಡಿಯೋ ಸಮೇತ ಕೊಟ್ಟು ಹೋದರೆ ಸರಿ. ಇಲ್ಲ ಈ ಮಹೇಂದ್ರ ಮಚ್ಚಿನಿಂದ ನಿನ್ನ ಕತ್ತನ್ನು ಕತ್ತರಿಸಿ ಈ ಊರವರಿಗೆ ನೀನ್ ಹೆಣ ಕೊಡು ಸಿಗದಂತೆ ಸುಟ್ಟು ಹಾಕಿ ಬಿಡುತ್ತೇನೆ. ಹಾಂ ಕೊಡ್ತೀಯಾ ಇಲ್ಲ ಸಾಯ್ತಿಯ (ಮಚ್ಚು ಎತ್ತುವನು)

ಮೈಲಾರ :- ಲೇ ಮಹೇಂದ್ರ ತುತ್ತು ಕೂಳಿಗಾಗಿ ಮತ್ತೊಬ್ಬರ ಮನೆ ಬಾಗಿಲು ಕಾಯುವ ನಾಯಿ ನೀನು. ಹಿಂಡು ಕುರಿ ಹಾಲು ಕುಡಿದ ಬೆಳೆದ ಗಂಡೆದೆ ವೀರ ಸರದಾರ ನಾನು. ಕೊಟ್ಟ ಟೈಮಿನಲ್ಲಿ ಎಲ್ಲಾ ಸೌಲಭ್ಯಗಳು ಜಾರಿ ಮಾಡಿದರೆ ಸರಿ ಇಲ್ಲ ಪ್ರತಿಯೊಂದು ಟಿವಿಯಲ್ಲಿ ನಿಮ್ಮ ಜೀವನ ಚರಿತ್ರೆ ಬರುವಂತೆ ಮಾಡುತ್ತೇನೆ.. ಅವಾಗ ನನ್ನು ಏನು ಕಿತ್ತುಕೊಳ್ಳುತ್ತಿಯ...ಕಿತ್ತುಕೊಳ್ಳಲೇ. (ಹೋಗುವನು)

ಮಹೇಂದ್ರ:- ಲೆ ಮೈಲಾರ ಈ ಎಂಎಲ್ಎ ರಾಜೇಂದ್ರನ ಭದ್ರಕೋಟೆಗೆ ಬಂದು. ನನ್ನ ಕಣ್ಣೆದುರು ನಮ್ಮ ಸಾಹೇಬರಿಗೆ ಬಾಯಿಗೆ ಬಂದಂತೆ ಮಾತನಾಡಿ. ಹಾರಾಡಿ ಹೋದೆಯಾ ಅವಿವೇಕಿ ನನ್ನ ಮಗನೇ
ಇಂದು ನೀನು ಬದುಕಿರಬಾರದು. ಹೊತ್ತು ಹಂಡುದ್ರೊಳಗಾಗಿ. ನಿನ್ನ ಆತ್ಮ ಪರಮಾತ್ಮನ ಪಾದಕ್ಕೆ. ನಿನ್ನ ಹೆಣ ಈ ಮಗಧೀರ ಮಹೇಂದ್ರ ಪಾದಕೆ (ನಕ್ಕು ಹೋಗುವಾಗ)

ರಾಜೇಂದ್ರ:- ನಿಂತುಕೋ ಮಹೇಂದ್ರ ನಾನೇ ವೀರಶೂರನೆದು ಕೊಬ್ಬರಿದ. ಆ ಕೊಬ್ಬಿನ ಕುರಿಯ ಹಬ್ಬ ಮಾಡಬೇಕಾದರೆ. ಅದಕ್ಕೊಂದು ಸಮಯ ಬರಬೇಕು. ಅಲ್ಲಿರುವ ನೀನು ತಾಳ್ಮೆಯನ್ನು ತೆಗೆದುಕೋ ಮಹೇಂದ್ರ (ನಾಗೇಂದ್ರ ಪಿಸ್ತೋಲ್ ಹಿಡಿದು ಸಿಗರೇಟ್ ಹಚ್ಚಿ ಪ್ರವೇಶಿಸಿ)

ನಾಗೇಂದ್ರ:- ಯಾಕೆ ಸಾಹೇಬ್ರೆ ಇಬ್ಬರು ಏನು ಯೋಚನೆ ಮಾಡುತ್ತಿದೆ ಕಾಣುತ್ತಿಯಲ್ಲ

ರಾಜೇಂದ್ರ:- ಬಾ ನಾಗೇಂದ್ರ, ಒಂದು ಕೊಬ್ಬಿದ ಕುರಿ ಇಂದು ನಮ್ಮ ಮನೆಗೆ ಬಂದು ಬಾಳ ಹಾರಾಡಿ ಹೋಯಿತು. ಆ ಕುರಿಯನ್ನು ಹೇಗೆ ಪಳಗಿಸಬೇಕೆಂದು ಯೋಚನೆ ಮಾಡುತ್ತಿದ್ದೆವು

ನಾಗೇಂದ್ರ:- ಆ ಕೊಬ್ಬಿದ ಕುರಿ ಯಾರೆಂದು ಹೇಳಿ ಸಾಹೇಬರೇ. ಈಗಲೇ ಹೋಗಿ ಆ ಕುರಿಯನ್ನು ಬೇಟೆಯಾಡಿ ಬರುತೆವೆ ಬಾ ಮಹೇಂದ್ರ ಹೋಗೋಣ

ರಾಜೇಂದ್ರ:- ಬೇಡ ನಾಗೇಂದ್ರ ಮಹೇಂದ್ರ ನಿಂತುಕೊಳ್ಳಿ. ಮುಂದೆ ಚುನಾವಣೆ ಬರುತ್ತಾ ಇದೆ ವಿರೋಧ ಪಕ್ಷದವರು. ನಮಗೋಸ್ಕರ ಕಾಯುತ್ತಿದ್ದಾರೆ ಇಂಥ ಕೇಸಿನಲ್ಲಿ ನಾವು ಸಿಕ್ಕಾಕಿಕೊಂಡರೆ ನಮ್ಮ ರಾಜ್ಯ ಜೀವನಕ್ಕೆ ತೊಂದರೆ ಆಗಬಹುದು. ಅದಕ್ಕೆ ನೀವು ಇಬ್ಬರು ಹೋಗೋದು ಬೇಡ. ಇದಕ್ಕೆ ಬೇರೆ ಒಂದು ವ್ಯವಸ್ಥೆ ಮಾಡೋಣ

ಮಹೇಂದ್ರ:- ಆಗಲಿ ಸಾಹೇಬರೇ ನೀವು ಅಪ್ಪಣೆ ಕೊಟ್ಟಿದರೆ ಹಾರಾಡಿದ ಹಾರಂ ಕೋರ್ನನು ಹರ ಹರ ಎನಿಸಿ ಬಿಡುತ್ತಿದ್ದೆ (ನಕ್ಕು)

ರಾಜೇಂದ್ರ:- ಈ ರಾಜೇಂದ್ರ ನಾಗೇಂದ್ರ ಮಹೇಂದ್ರ ತ್ರಿಮೂರ್ತಿಗಳು ಒಂದಾಗಿರಬೇಕಾದರೆ ನಮ್ಮನು ಎದುರು ಹಾಕಿಕೊಂಡು ಬದುಕುವ ಪುಂಡರು ಯಾರಿದ್ದಾರೆ ಈ 21ನೇ ಶತಮಾನದಲ್ಲಿ (ಮೂವರು ನಗುವರು) ನಾಗೇಂದ್ರ ಮಹೇಂದ್ರ ಬನ್ನಿ ಒಳಗಡೆ ಡ್ರಿಂಕ್ಸ್ ಮಾಡುತ್ತಾ ಇದಕ್ಕೊಂದು ಪ್ಲಾನ್ ಹಾಕೋಣ (ಹೋಗುವರು) ಅದೇ ರಸ್ತೆ ಸಿನ್

ನವೀನ್:- (ಗ್ಯಾರೇಜ್ ಮೇಸ್ತ್ರಿ ಸಾಮಗ್ರಿಗಳೊಂದಿಗೆ ಹಾಡುತ ಪ್ರವೇಶಿಸಿ) ಛೆ ಛೆ ಛೆ ಮಾಡಬಾರದುರಿ. ಮಾಡಬರದು ಈ ಗ್ಯಾರೇಜ್ ಮೇಸ್ತ್ರಿ ಕೆಲಸ ವಟ್ಟ ಮಾಡಬಾರದು.ಬೆಳಿಗ್ಗೆ ಎದ್ದ ತಕ್ಷಣ ಜಳಕ ಮಾಡಿ ಅಂಗಡಿ ಕದ ತೆಗದು ಉದನ್ ಕಡ್ಡಿ ಹಚ್ಚಿ. ಶಿವ ಅಂತ ನಿಂತಿರತಿವಿ. ಬರ್ತಾವ್ ನೋಡ್ರಿ ನಮ್ಮ ಉದ್ರಿ ಗಿರಾಕಿ. ನಮ್ಮ ಪಡೆಗೌಡ್ರು ಶರಣಪ್ಪ ಮಾವ ಲೆ ಅಳಿಯ ನವೀನ ಹತ್ತಿ ಗ್ರಾಸಿಂಗ್ ಮಾಡಾಕ ಹಾಳು ಬಂದಾವು ಅರ್ಜೆಂಟು ಹೊಲಕ್ಕ ಹೋಗಬೇಕು ಸ್ವಲ್ಪ ಹವಾ ಹಾಕು ಅಂತ ಬರ್ತಾರ ಹವಾ ಹಾಕಿದ ಮ್ಯಾಲ. ಜೇಬು ಕೈಯಾಡಿಸುತ್ತಾ ಅಳಿಯ ಜಳಕ ಮಾಡಿ ರೊಕ್ಕ ಅಂಗಿಕ ಕಿಸೆ ಇದ್ದಾಗ ಬಿಟ್ಟು ಬಂದೀನಿ ಹೊಳಿ ಬಂದು ಕೊಡ್ತೀನಿ ಅಂತ ಹೋಗಿಬಿಡುತ್ತಾರ. ಹಿಂಗಾದ್ರೆ ನಮ್ಮ ಗ್ಯಾರೇಜ್ ದಂದೇಗ ಮಾಡುವುದರ ಹೆಂಗೆ ಅಂತೀನಿ. ಇವತ್ತು ನಮ್ಮೂರ ಜಾತ್ರಿ ಐತಿ. ಜಾತ್ರ್ಯಗ ಇವತ್ತ ನಮ್ಮ ಗ್ಯಾರೆಜ್ ಕೆಲಸ ಚೊಲೋ ಆಗುತ್ತಂತೇಳಿ. ನಮ್ಮೂರ ಹನುಮಪ್ಪ ಅಜ್ಜನ್ ಮ್ಯಾಲ ಬಾರ ಹಾಕಿ. ಕೆಲಸ ಶುರು ಮಾಡಿನಿ ಇವತ್ ಹೆಂತ ಗಿರಾಕ್ ಬರ್ತಾವ್ ನೋಡೋಣ (ನಯನ ಸ್ಕೂಟಿ ತಳ್ಳಿಕೊಂಡು ಬರುವಳು)

ನಯನ:- ಸಾಕು ಸಾಕಾಗಿ ಹೋಗಿತ್ತೀ ಈ ಕೆಟ್ಟ ಗಾಡಿ ತೊಳ್ಕೊಂಡು ಬರೋದ್ರಾಗನ. ಟೀಚರ್ ನೌಕ್ರಿಗೆ ಸೇರಿದ್ರ ನಮ್ಮ ಜೀವನ ಆರಾಮ ಇರತ್ತಾಂತ ತಿಳ್ಕೊಂಡು ಈ ನೌಕ್ರಿ ಮಾಡಕತ್ರ. ನಮ್ಮ ಮ್ಯಾಗಿನ ಸಾಹೇಬ್ರು ಈ ಹಳ್ಳಿಗೆ ನನ್ನ ವರ್ಗಾವಣೆ ಮಾಡ್ಯಾರ. ಇಲ್ಲಿಗೆ ನೋಡಿದರ ಒಂದು ಬಸ್ ಕೂಡ ಇಲ್ಲ. ಅದಕ್ಕ ಈ ನನ್ನ ಸ್ಕೂಟಿ ತಗೊಂಡು ಬಂದ್ರ. ಅರ್ಧ ದಾರ್ಯಾಗ್ ಕೆಟ್ಟ ನಿಂತೈತ್ರಿ ಈ ನನ್ನ ಗಾಡಿ. ಅದಕ್ಕ ಇಲ್ಲಿ ಮಕ ತಳಕೊಂಡು ಬರೋದು ಆಗೈತ್ರಿ ನನ್ನ ಹಣೆಬಾರ. ಈ ಊರಗ ಯಾರರ ಗಾಡಿ ರಿಪೇರಿ ಮಾಡುವ ಮೆಕ್ಯಾನಿಕ್ ಇದ್ರ ನನ್ನ ಗಾಡಿ ರಿಪೇರಿ ಮಾಡಿಸಿಕೊಂಡು ಹೋದರಾಯಿತು (ಒಂದು ಕಡೆ ನೋಡಿ) ಅಲೆ ಇಲ್ಯಾರು ನಿಂತಾರಲ್ರಿ ರೀ ರೀ ಅಣ್ಣಾರ

ನವೀನ:- ಅಣ್ಣಾರ ಅನಬ್ಯಾಡ್ರಿ ಬಾಯಾರ. ಅಣ್ಣಾರ ಅನ್ನು ಶಬ್ದ ಕೇಳಿದ್ರಾ ನಮ್ಮಂತ ಹುಡುಗರಿಗೆ ಬಂದಂಗ್ ಅಕ್ಕವರಿ ಚಳಿ ಜ್ವರ. ನಿಮ್ಮಂತ ವಯಸ್ಸಿನ ಹುಡುಗಿಯರ ನಮಗೆ ಅಣ್ಣಾರ ಅಂದ್ರ. ಮುಂದೆ ಹೆಂಗ್ರಿ ನಮ್ ಸಂಸಾರ

ನಯನ:– ಅಯ್ಯ ಹಂಗಾದ್ರ. ನಿಮಗ ಏನಂತ ಕರಿಬೇಕ್ರಿ. ಇರ್ಲಿ ಬಿಡ್ರಿ. ಈ ಊರಾಗ ಗಾಡಿ ರಿಪೇರಿ ಮಾಡೋ ಮೆಕ್ಯಾನಿಕ್ ಏನಾರಾ ಅದರೇನ್ರಿ

ನವೀನ:– ಅದರೆನಂತ ಕೇಳ್ತಿರಲ್ರಿ ಮೇಡಂರ. ನಮ್ಮೂರಗ ಗಾಡಿ ರಿಪೇರಿ ಮಾಡೋ ನಂಬರ್ ಒನ್ ಮೆಕ್ಯಾನಿಕ್ ಅಂದ್ರ ನಾನ. ಹೇಳ್ರಿ ನಿಮ್ಮ ಗಾಡಿ ಏನಾಗೈತಿ

ನಯನ:– ಏನಾಗೈತೆ ಅಂತ ನನ್ನ ಕೇಳ್ತಿರಲರಿ ಮೆಕಾನಿಕ್ ಸಾಹೇಬ್ರೆ. ಗಾಡಿ ಒಟ್ಟ ಶುರುವಾಗವಲ್ತು. ನೀವು ಸ್ವಲ್ಪ ಚೆಕ್ ಮಾಡಿ ನೋಡ್ರಿ ಏನಾಗೆತಿ ಅಂತ

ನವೀನ:– ಹಂಗಂದ್ರ ನೋಡೇ ಬಿಡ್ತೀನಿ ತಡ್ರಿ (ಎರಡು ಇಂಡಿಕೇಟರ್ ಲೈಟ್ ನೋಡಿ ಚಕ್ ಮಾಡಿ ಕೈ ತೋರುಸುತ್ತ) ಇದೇನ್ರೀ ಮೇಡಂರ ನಿಮ್ಮವು ಮುಂದಿನವು ಎರಡು ಅಳಿಗ್ಯಾಡತವಲ್ಲ ಯಾವುದರ ಹೋತು ಮರಿ ಬಂದು ಗುದ್ದಯ್ತೇನ ಮತ್ತ

ನಯನ:– ಏ ಏನು ಅದು ಅಳಿಗ್ಯಾಡುದು

ನವೀನ:– ಅದ ರೀ ಮೇಡಂರ ನಿಮ್ಮ ಗಾಡಿ ಇಂಡಿಕೇಟರ್ ಲೈಟ್ (ಕಿಕ್ ಹೊಡೆದು ಚೆಕ್ ಮಾಡಿ) ಇದೇನ್ರೀ ಮೇಡಂರ ನಿಮ್ಮ ಗಾಡಿ ಎಷ್ಟು ಕಿಕ ಹೊಡೆದರು ಶುರುವಾಗವಲ್ತು ಸರ್ವಿಸಿಂಗರ ಮಾಡ್ಸಿರ್ಲಿಲ್ಲದನ್ನ. ಇಂಜಿನ್ಗ ಆಯಿಲ್ ನೋಡ್ತೀನಿ ತಡ್ರಿ (ಇಂಜಿನ್ ಚೆಕ್ ಮಾಡಿ) ಏನ್ರೀ ನೀವು ನಿಮ್ಮ ಇಂಜಿನ್ಯಾಗ ಆಯಿಲ್ ಇಲ್ಲ. ನನ್ನತ್ರ ಆಯಿಲ್ ಐತಿ ಹಾಕ್ಲೆಂಡ್ರಿ

ನಯನ:– ನಿಮ್ಮ ಆಯಿಲ್ ಚಲೋ ಐತಿಲ್ಲ ನೋಡ್ರಿ. ಎಂತದರ ಆಯಿಲ್ ಹಾಕಿ ನಮ್ ಇಂಜಿನ ಹಾಳ್ ಮಾಡಿ ಇಟ್ಟಿರಿ ಮತ

ನವೀನ:– ನಮ್ಮಯ ಬಗ್ಗೆ ನಿಮ್ಮಗ ವಟ್ಟ ಸಂಶೆ ಬ್ಯಾಡ್ರಿ ಬಾಯಾರ. ನನ್ನ ಆಯಿಲ್ ಹಾಕಿಸಿಕೊಂಡರ ನೋಡ್ರಿ. 9 ತಿಂಗಳ ನಿಮ್ಮ ಇಂಜಿನ್ ಹೊಳಿ ಸರ್ವಿಸಿಂಗ್ ಬರೋದಿಲ್ಲ. ಅಷ್ಟು ಫೀವರ್ ಐತ್ರಿ ನನ್ ಆಯಿಲ್

ನಯನ:– ಹಂಗಾದ್ರ ನಮ್ ಇಂಜಿನ್ ಕ ಹಾಕ್ರಿ ನಿಮ್ಮ ಆಯಿಲ್

ನವೀನ:– (ಆಯಿಲ್ ಹಾಕಿ ಸ್ಟಾರ್ಟರ್ ಹೊಡೆದು) ಇದೇನ್ರೀ ನಿಮ್ಮ ಗಾಡಿ ಮತ್ತ ಸುರಗವಲ್ದು ಎಣ್ಣೆ ಹಾಕ್ಸಿರ್ರೀ ನಿಮ್ಮದು ಮ್ಯಾಕೆತ್ರಿ ಬಗಿ ನೋಡ್ತೀನಿ

ನಯನ:– ಏ. ಏನದು ನೋಡೋದು

ನವೀನ:– ಅದ ರೀ ನಿಮ್ಮ ಗಾಡಿ ಶೀಟ್ ಮ್ಯಾಕ್ ಎತ್ರಿ ಒಳಗ ಎಣ್ಣೆ ಅಯ್ತಿಲ್ಲ ಬಗ್ಗಿ ನೋಡ್ತೀನಿ ಅಂದ್ಯಾ (ನಯನ ಸೀಟು ಎತ್ತುವಳು.. ನವೀನ ಎನ್ನಿ ನೋಡುವನು)

ನವೀನ:– ಎಣ್ಣಿನ ಕಾಲಿ ಆಗೈತ್ರಿ. ಅದಕ್ಕ ಶುರುವಾಗುವಂತ್ರಿ ನಿಮ್ಮ ಗಾಡಿ

ನಯನ:– ಆಯೋ ಹಂಗಾದ್ರ ಹೆಂಗ್ ಮಾಡೋದು ಅಂತೀನಿ

ನವೀನ:– ಅದರ ಬಗ್ಗೆ ನೀವೇನು ಚಿಂತಿ ಮಾಡಬ್ಯಾಡ್ರಿ ನನ್ ಹತ್ರ ಎಣ್ಣೆ ಐತಿ ನೀವು ಹಾಕಂದ್ರ ಹಾಕ್ತೀನಿ

ನಯನ:– ಬೇಗ ಹಾಕ್ರಿ ನಂದು ಸ್ವಲ್ಪ ಅರ್ಜೆಂಟ್ ಹೋಗಬೇಕು (ನವೀನ ಏಣಿ ಹಾಕುವಾಗ) ಮೆಲ್ಲ ಹಾಕ್ರಿ ನಿಮ್ಮ ಬಾಟ್ಲ್ಯಾಗ್ ಇರುದು ಸ್ವಲ್ಪ ಎಣ್ಣೆ. ಒಂದ್ ಹನಿನೂ ಚಲದಂಗ ವಷ್ಟು ಒಳಗ ಹಾಕ್ರಿ

ನವೀನ:– ಹಾಕ್ತೀನಿ ತಡ್ರೀ. ಎಣ್ಣೆ ಹಾಕಿದ್ರಾಗ ನಾನು ಫೇಮಸ್ ಅದಿನಿ. ಹಾಂ ರೊಕ್ಕ ತೆಗಿರಿ

ನಯನ:– ಎಷ್ಟ ಆಗೈತ್ರಿ ನಿಮ್ಮ ಬಿಲ್ಲ

ನವೀನ:– ಸರ್ವಿಸಿಂಗ್ ಮಾಡಿದ್ದು. ಆಯಿಲ್ ಹಾಕಿದ್ದು. ಎಣ್ಣೆ ಹಾಕಿದ್ದು. ಸೇರಿ ಒಂದು ಸಾವಿರ ಆಗೈತ್ರಿ

ನಯನ:– ಅಯ್ಯೋ ನನ್ನತ್ರ **500** ಅಷ್ಟೇ ಐತ್ರಿ. ಇನ್ನೊಮ್ಮೆ ಬಂದಾಗ **500** ಕೊಡ್ತೀನಿ. ಈಗ **500** ತಕೊಂಡು ಸ್ವಲ್ಪ ಅಜೆಷ್ಟ ಮಾಡ್ಕೋರಿ

ನವೀನ:– ಅದೆಂಗ್ ಆಗತ್ರೀ ಕಷ್ಟ ಪಟ್ಟು ಕೆಲಸ ಮಾಡಿ ನಡ ಮೊಣಕಾಲು ಬ್ಯಾನಾಗೆವು. ನಮ್ಮ ಬಿಲ್ ಎಷ್ಟಾಗಿದೆ ಅಷ್ಟು ಕೊಟ್ಟು ಹೋಗ್ರಿ

ನಯನ:– ಹಂಗೆಲ್ಲಾ ಅನ್ಬ್ಯಾಡ್ರಿ ಸ್ವಲ್ಪ ಅಜೆಷ್ಟ ಮಾಡ್ಕೋರಿ ಪ್ಲೀಸ್ ರಿ

ನವೀನ:– ಹಂಗಾದ್ರ ನೋಡು ಹುಡುಗಿ. ಈಗ **500** ಕೊಡು. ಇನ್ನ **500** ಕೊಡುವುದು ಬೇಡ. ನನಗ ಪ್ರೀತಿಲಿಂದ ಮಾವ ಅಂದ. ನನ್ನ ಕೈ ಹಿಡಿದ ಒಂದು ಡ್ಯಾನ್ಸ ಮಾಡು ನಿನ್ನ ಬಿಟ್ಟು ಬಿಡುತ್ತೇನೆ

ನಯನ:– (ಸ್ವ) ಆಲ ಮಗನ. ಏ ಸುಟ್ಟ ಆಯಿಲಿನಂತ ಕರಿ ಮಾರ್ಯವನ. ಈ ಮಗ ಬಾಳ ಬೆರಿಕೆ ಇದ್ದಂಗ್ ಕಾಂತಾನ್ರೀ ಈ **500** ಕೊಟ್ಟು ಡ್ಯಾನ್ಸ್ ಮಾಡಿ ಇಲ್ಲಿಂದ ಹೋದರಾತು(ಪ್ರ) ಆಯ್ತು ರಿ ಗ್ಯಾರೇಜ್ ಮೇಸ್ತ್ರಿ ಮಾಮ ನೀ ಹೇಳಿದಂಗ ಆಗಲಿ ತಗೋ **500** (ಕೊಟ್ಟು) ವಗಿ ಒಂದು ಜವರಿ ಜನಪದ ಸಾಂಗ್ (ಜೋಡಿ ಪದ ಮುಗಿದ ನಂತರ)

ನವೀನ:– ಹಾಂ ಹುಡುಗಿ ಇನ್ನು ನನ್ನ ಗಾಡಿ ಕೆಲಸ ಬಾಳ ಅದಾವು. ನಾನಿನ್ನು ಬರಲೇ ಟಾಟಾ (ಹೋಗುವನು)

ನಯನ:– ಈ ಕೆಟ್ಟ ಗಾಡಿ ತಳಕೊಂಡು ಬರುದ್ರಾಗ ಸುಸ್ತಾಗಿ ಬಾಳ ಹಸುವಾಗೇತಿ. ಇಲ್ಲೆ ಹೋಟೆಲಿನಲ್ಲಿ ನಾಷ್ಟ ಮಾಡಿ. ರೂಮಿಗೆ ರೆಸ್ಟ ಮಾಡಿದರಾತು (ಪ್ರವೀಣ ಪಾನಿಪುರಿ ಮಾರುವ ವೆವಸ್ತೆದೊಂದಿಗೆ ಬರುವನು)

ಪ್ರವೀಣ:– ಅಲ್ರಿ ಆ ದೇವರು ನನ್ನ ಹಣೆಬರದಾಗ ಮದವಿ ಅನುದ ಬರದಾನ ಇಲ್ಲ ಅಂತೀನಿ. ನನ್ನಗ ಮದವಿ ಮಾಡಬೇಕಂತಳೆ ನಮ್ಮಪ ನಮ್ಮವ ಅವರ ಕಳ್ಳ ಬಳ್ಯಾಗ ಎಲ್ಲ ಕಡೆ ಕನ್ಯಾ ಕಳಿದ್ರ. ನಮ್ಮ ಮಗಳ ಬಾಳ ಸಾಲಿ ಕಲತಾಳ ಗೊರಮೆಂಟ್ ನೌಕ್ರಿ ಮಾಡವಾಗರ. ಕಂಪನ್ಯಾಗ ಇರವಾಗರ.. ತಿಂಗಳ 20 ಸಾವಿರ ಪಗಾರ. ಇರುವವಗ ಕೊಡತೀನಿ ಅಂತರ. ಇಂಗಾದ್ರ ನಾವು ಮದವಿ ಅಗುದರ್ ಹೆಂಗತ ವಿಚಾರ ಮಾಡಕೊಂತ ದುರ್ಗಮ್ಮನ ಗುಡಿ ಕಟ್ಟಿ ಮ್ಯಾಗ ಮಲಕೊಂಡಿದ್ಯಾ. ಅವಾಗ ಏನಾರ್ ಬೀಜಣೇಸ್ ಮಾಡಬೇಕಂತ ಪ್ಲಾನ್ ಬಂತು. ಎನ್ ಬಿಜನೇಶ್ ಮಾಡಿದ್ರುನು ನಮ್ಮ ಹತ್ರ ಹುಡಿಗ್ಯಾರ್ ಬರುವಂತ ಬಿಜನೆಸ್ ಮಾಡಬೇಕಂತೆಳಿ. ಅದಕ್ಕ ಈ ಪಾನಿಪುರಿ ವ್ಯಾಪಾರ ಮಾಡಕತೀನಿ. ಎಲ್ಲ ಹಳ್ಳಿ ಹಾಳ್ಯಾಗ ಪಾನಿಪುರೆ ಮಾರುವನದೇ ಹಾವ್.. ಯಾವುರಾಗ ಜಾತ್ರೆ ಇದ್ರೂ ಆ ಜಾತ್ರ್ಯಗ ನಮ್ಮದೇ ಹಾವ್. ಅಂದ್ರಗ ಪಾನಿಪುರೆ ಅಂದ್ರ ಹುಡಿಗ್ಯಾರ್ ಇಂಡ ಬರ್ತೈತಿ. ಸಂಜೀಮುಂದ ನಾಕ್ಕುವರಿಗೆ ಕಾಲೇಜ್ ಬಿಡು ಟೈಮಕ ಅಂಗಡಿ ಸೂರು ಮಾಡಿದ್ರ. ಚಂದ ಚಂದ ಹುಡುಗ್ಯಾರ ಪಾನಿಪುರಿ ತಿನ್ನಾಕ ಬಂದ ಬರ್ತಾರ ಇದರಾಗ ಒಂದು ಹುಡುಗಿ ಸೆಲೆಕ್ಟ್ ಮಾಡಿಕೊಂಡ್ರ ಆಯ್ತು. ಹಾಂ ಪಾನಿಪುರಿ ಗೋಭಿ ರೀ ಗೋಬಿ

ನಯನ:– ಅಲೆ ಪಾನಿಪುರೆ ಮಾರವಾ ಇಲ್ಲೆ ಬಂಧನಲ. ಆದ್ರ ಎನ್ ಮಾಡುದು ರೀ ನಾಷ್ಟ ಮಾಡಾಕ ನನ್ನತ್ರ ರೊಕ್ಕನ ಇಲ್ಲ ಇರ್ಲಿ ಹೆಂಗರ ಮಾಡಿ ಮೊದಲು ಪಾನಿಪುರೆ ತಿನೋನ್ನ. ಏ ಏ ಪಾನಿಪುರೆ ನಿಂದ್ರೋ

ಪ್ರವೀಣ:– ಹಾಂ (ಹೊಳಿ ನೋಡಿ) ವಾರೆವಾಹ್ ಕಾಲೇಜ್ ಪೋರಿ. ಹುಡುಕ್ಕುತ ಬಂದ್ದಾಳ ನನ್ನ ಪಾನಿಪುರಿ. ಎನ್ ಗಿಚ್ಚ ಕಾಣತ್ತಾಳ ರೀ ಈ ಕನ್ಯಾಕುಮಾರಿ. ಇಂಥ ಹುಡುಗಿ ನೋಡಿದ್ರ ನಮ್ಮಂತ ವಸಿನ ಹುಡುಗರ ಮನಸು ಹೊಕೈತಿ ಜಾರಿ. ನಿಮ್ಮಗ ಬೇಕನ್ರಿ ಪಾನಿಪುರಿ

ನಯನ:– ಹುನ್ರಿ. ಬೇಕಂತ ನಿಮ್ಮ ಹತ್ರ ಬದಿವಿ ಮತ್ತ ನಿಮ್ಮ ಪಾನಿಪುರಿ ಚೊಲೋ ಅದವಿಲ್ರಿ

ಪ್ರವೀಣ:– ಒಮ್ಮೆ ನನ್ನವ್ವು ದುಂಡಾಂನ್ನುವು ನಿಮ್ಮ ಬಾಯಾಗ ಇಟ್ಟಾಗೊಂಡ ನೋಡ್ರಿ. ಹನಿ ರಸ್ ತ್ಯಾಳಗ ಚಲ್ಲದಂಗ ನಾಲ್ಗಿಗೆ ಹಚ್ಚಿ ನೆಕತ್ತಿರಿ ಅಷ್ಟ ರುಚಿ ಇರುತ್ತೆ ನನ್ನ ರಸ್

ನಯನ:– ಹಂಗಾದ್ರೆ ಕೊಡ್ರಿ (ಕೈಚಾಚುವಳು ಪ್ರವೀಣ ಪಾನಿಪುರೆ ಹಾಕಿ ಕೊಡುವನ್ನು)

ಪ್ರವೀಣ:– ಹಾಂ ಸಾಕ ಬೇಕ್ರಿ ಬಾಯರ

ನಯನ:– ಹಾಂ ಸಾಕ್ರಿ ಎಷ್ಟಾಯ್ತಿ ರೀ ನಿಮ್ಮ ಬಿಲ್

ಪ್ರವೀಣ:– ಒಂದು ಪ್ಲೇಟ ಪುರಿಗೆ 80 ರೂಪಾಯಿ ಒಂದು ಪ್ಲೇಟ್ ಗೋಬಿಗೆ 100. ಎರಡು ಸೇರಿ 180 ರೂಪಾಯಿ ಅಯ್ತಿ ಕೊಡ್ರಿ

ನಯನ:– ಹೌದ್ರ್ಯಾ ಅದರ ನನ್ನ ಹತ್ರ ಈಗ ರೊಕ್ಕ ಇಲ್ರಿ. ಇನೊಮೆ ಬಂದಾಗ ಕೊಡತೀನಿ ಸ್ವಲ್ಪ ಅಜೆಸ್ಟ್ ಮಾಡಕೋಳಿ

ಪ್ರವೀಣ:– ಅಜೆಸ್ಟ್ ಹೇ ಹೇ ಅಜೆಸ್ಟ್ ಮಾಡಿಕೊಳ್ಳುವ ಮಾತ್ತ ಇಲ್ರಿ. ಸುಮ್ಮನ ಯಾಕ ಕಿರಿ ಕಿರಿ ನಮ್ಮ ಬಿಲು ಕೊಟ್ಟು ಬಿಡ್ರಿ ಮೇಡಂರ

ನಯನ:– ಹೇ ಹಂಗ್ಯಾಲ್ ಅನಬ್ಯಾಡ್ರಿ ಪೀಸ್ ರೀ. ಇಲಂದ್ರ ನಿಮ್ಮ ನಂಬರ್ ಕೋಡ್ರಿ ನಾನು ಮನೆಗೆ ಹೋಗಿ ಫೋನ್ ಫೆ ಮಾಡತೀನಿ

ಪ್ರವೀಣ:– ಫೋನ್ ಫೆರ್ಯಾ ಹೇ ಹೇ ಬ್ಯಾಡ್ರಿ ಕ್ಯಾಸ ಕೊಡ್ರಿ

ನಯನ:– ಅಯ್ಯೋ ಇದು ಒಳ್ಳೆ ಪಜುತಿ ಆತಲ್ಲ ಅಂತೀನಿ. ಪ್ಲೀಸ್ ರೀ ಸ್ವಲ್ಪ ಅಜೆಸ್ಟ್ ಮಾಡಕೋರಿ

ಪ್ರವೀಣ:– (ಸ್ವ) ಈ ಹುಡಿಗಿ ಹತ್ರ ರೊಕ್ಕ ಇಲ್ಲ ಇದ ನೆವ ಮಾಡಿ. ಇಕಿ ಸಲಿಗೆ ಬೆಳೆಸಿ ನನ್ನ ಪ್ರೀತಿ ಗುಂಗು ಹಿಡಿಸಲಿಲ್ಲ ನನ್ನ ಹೆಸರು ಪಾನಿಪುರಿ ಸ್ಪೆಷಲ್ ಲಿಸ್ಟ್ ಪ್ರವೀಣ ನೇ ಅಲ್ಲ (ಪ್ರ) ನೋಡು ಹುಡುಗಿ ನೀನು ವಾಪಸ್ ರೊಕ್ಕ ಕೊಡುತ್ತಾನ ಅಜೆಸ್ಟ್ ಮಾಡ್ಕೋ ಬೇಕಾದರೆ ನೀನು ನನ್ನ ಕೈ ಹಿಡಿದು ಒಂದು ಡ್ಯಾನ್ಸ್ ಮಾಡು ನಿನ್ನ ಬಿಟ್ಟು ಬಿಡತ್ತೀನಿ

ನಯನ:– ಆತ ಹುಡುಗ ನೀ ಹೇಳಿದಂಗ ಆಗಲಿ ನಿನ್ನ ಕೈ ಹಿಡಿದು ಡ್ಯಾನ್ಸ್ ಮಾಡ್ತೀನಿ ನಾ ವಾಪಸ್ ರೊಕ್ಕ ಕೊಡುತನ ಅಜೆಸ್ಟ್ ಮಾಡ್ಕೋಬೇಕು (ಜೋಡಿ ಪದ ಮುಗಿದ ನಂತರ)

ನಯನ:– ನಾಯಿನ ಹೋಗಿ ಬರ್ಲಾ ಹುಡಗ

ಪ್ರವೀಣ:– ಆತ ಹುಡುಗಿ ಹೋಗಿ ಬಾ. ಅಂತೂ ಈ ಪಾನಿಪುರಿ ವ್ಯಾಪಾರದಾಗ ನನಗೊಂದು ಹುಡುಗಿ ಸಿಕ್ಕಳು ಈ ಹುಡುಗಿಗೆ ಫ್ರೀಯಾಗಿ ಪಾನಿ ಪುರಿ ಕೋಟ್ ನನ್ನ ಪ್ರೇಮದ ಬಲಿಯಾಗ ಹಾಕಿಕೊಳ್ಳಲಿಲ್ಲ ನನ್ನ ಹೆಸರು ಪ್ರವೀಣನೇ ಅಲ್ಲ (ಹೋಗುವನು)

ಪ್ರವೇಶ 3

ಕ್ರಾಂತಿವೀರನ ಮಹಡಿ ಮನೆ. ಮಹಡಿ ಇಂದ ಇಳಿದು ಸಿಗರೇಟ್ ಹಚ್ಚಿ

ಕ್ರಾಂತಿವೀರ:– ಸತ್ಯಮೇವ ಜಯಂತಿ (ನಕ್ಕು) ಸತ್ಯಮೇವ ಜಯಂತಿ ಎಂದು ಬಂಡತನದ ಮಾತನಾಡಿ. ಸತ್ಯದ ತಲಿಯ ಮೇಲೆ ಕಾಲಿಟ್ಟು. ಸುಳ್ಳಿನ ಶಿಖರವನ್ನು ಕಟ್ಟಿಕೊಂಡು. ಮೆರೆಯುವ ದುಷ್ಟ ಶ್ರೀಮಂತರ ಕಾಲ. ಸತ್ಯದ ತಲೆ ಮೇಲೆ ಕುರುಡು ಕಾಂಚನ ಕುಂತು ಕುಣಿಯುತ್ತಿರುವಾಗ. ಸತ್ಯವಂತರಿಗೆ ಎಲ್ಲಿದೆ. ಈ ಸಮಾಜದಲ್ಲಿ ಬೆಲೆ. ಸತ್ಯ ಧರ್ಮಕ್ಕಾಗಿ. ನ್ಯಾಯ ನೀತಿಗಾಗಿ. ಬದುಕುವ ಧರ್ಮವಂತರ ಕಾಲವಲ್ಲವಿದು. ಬಡವರ ಬದುಕನ್ನು ಬಡಿದು

ತಿನ್ನುವ ಬಂಡ ಶ್ರೀಮಂತರ ಕಾಲ. ದಿನನಿತ್ಯ ಈ ಸಮಾಜದಲ್ಲಿ ನೂರಾರು ಹೆಣ್ಣುಮಕ್ಕಳನು ಬಲತ್ಕರಿಸಿ. ನಾವೇ ಪುಂಡ ಪುಡಾರಿ ಎಂದು ರಾಜ್ಯ ರೋಷವಾಗಿ ಮೆರೆಯುವ ಕ್ರೂರ ಕಾಮುಕರ ಕಾಲ. ದುಡ್ಡಿನ ದರ್ಪದಿಂದ ಈ ಧರೆಯಲಿ ದಂಗೆ ಎಬ್ಬಿಸಿ ದರ್ಬಾರ್ ಮಾಡುವ ದರ್ಪದ ದನಿಕರಿಗೆ ಒದ್ದು ಬುದಿ ಕಲಿಸಿ. ಸುಳ್ಳಿನ ಸಾಬ್ರಾಟ್ ಸೃಷ್ಟಿ ಆಗಿರುವ ಈ ಸಮಾಜದಲ್ಲಿ. ಸತ್ಯದ ಸಾಬ್ರಾಟವನ್ನು. ನಾನು ಕಟ್ಟದಿದ್ದರೆ.. ನನ್ನ ಹೆಸರು ಕೆಣಕಿದವರಿಗೆ ಕಿಡಿ. ನನ್ನ ಎದುರು ನಿಂತವರ ದೇಹ ಪುಡಿ ಪುಡಿ ನನ್ನ ಮುಂದೆ ನಾನೇ ರಾವಣ ಎಂದು ರುದ್ರ ಅವತಾರ ಏತಿದಾರೆ. ಅವರನ್ನು ಸೇರಿಸಿ ಬಿಡುತೇನೆ ಹರಣ ಅಡಿ. ಇದೆ ಈ ಕ್ರಾಂತಿವೀರನ ದಿಟ್ಟ ನುಡಿ (ನಗುವಾಗ ಫೋನ್ ಬರುತ್ತದೆ ಫೋನ್ ಏತಿ)

ಹಲೋ ಯಾರು

ಕನ್ವರ್ ಲಾಲ್:– (ಫೋನಲ್ಲಿ ಹೇಳುವನು) ಕ್ರಾಂತಿವೀರನ ಮಾತನಾಡುದು

ಕ್ರಾಂತಿವೀರ:– ಹೌದು ನೀವ್ಯಾರು

ಕನ್ವರ್ ಲಾಲ್:– ಕ್ರಾಂತಿವೀರ. ನಾನು ಬೆಂಗಳೂರು ಅಂಡರ್ ವಾರ್ಡ್ ಡಾನ್ ಕನ್ವರ್ ಲಾಲ್ ಮಾತನಾಡುದು

ಕ್ರಾಂತಿವೀರ:– ಹೇಳಿ ಕನ್ವರ್ ಕ್ಯಾ ಸಮಾಚಾರ

ಕನ್ವರ್ ಲಾಲ್:– ಕ್ರಾಂತಿವೀರ. ರಾಮದುರ್ಗ ತಾಲ್ಲೂಕಿನ ಎಂಎಲ್ಎ ರಾಜೇಂದ್ರನವರು ಫೋನ್ ಮಾಡಿದ್ರು. ಅವರಿಗೊಂದು ನೀನಂದ ಕೆಲಸವಗಬೇಕಾಗಿದಂತೆ. ನೀನು ಈಗಲೇ ಹೋಗಿ ಅವರ ಕೆಲಸ ಮಾಡಿಕೊಟ್ಟರೆ. ನೀನು ಎನ್ ಬೇಕಾದರೂ ಕೇಳು ಅವರು ಕೊಡುತ್ತಾರೆ. ಅದು ಅಲದೇ ಅವರಿಂದ ನಿನಗೇನಾದರೂ ಹೆಲ್ಪ್ ಆಗಬಹುದು

ಕ್ರಾಂತಿವೀರ:– ಓಕೆ ಅಯ್ತಿ ಕನ್ವರ್ (ಫೋನ್ ಕಟ್ಟದ ನಂತರ ಸಿಗರೇಟ್ ಹಚ್ಚಿ) ಎಂಎಲ್ಎ ರಾಜೇಂದ್ರ (ನಕ್ಕು) ನೀನು ಒಳ್ಳೆ ರಾಜಕಾರಣಿಯ ವ್ಯಕ್ತಿಯಾಗಿದ್ದರೆ ನಿನಗೆ ನನ್ನ ಸಾತು. ಅಧಿಕಾರದ ಅಹಂಕಾರದಿಂದ ಹಾರಾಡಿದರೆ. ಅಂದೆ ನಿನಗೆ ಆಪತ್ತು. ಇದೆ ಈ ಕ್ರಾಂತಿವೀರನ ತಾಕತ್ತು ಬರ್ತಾ ಇದೀನಿ ವೇಟ್ ಮಿ (ನಗುತಾ ಹೋಗುವನು)

ರಸ್ತ ಪರದೆ

ಮಹೇಂದ್ರ:– (ಬೈಕ್ ಹತ್ತಿ ಬಂದು ಸಿಗರೇಟ್ ಹಚ್ಚಿ) ಎಂಎಲ್ಎ ರಾಜೇಂದ್ರ (ನಕ್ಕು) ರಾಜಕೀಯ ರಣ್ಣ ರಂಗದಲ್ಲಿ ನಾನೇ ರಾಜಾಹುಲಿ ಎಂದು ರಾವಣನಂತೆ ಮೆರೆಯುತ್ತಿರುವ ಕತ್ತೆ ನೀನು. ನಿನಗೇನು ಗೊತ್ತಾಗಬೇಕಲೇ ಈ

ಮಹೇಂದ್ರನ ಕಪುಟ ನಾಟಕದ ಕಾರಸ್ಥಾನ (ನಕ್ಕು) ರಾಜೇಂದ್ರ ಈ ಮಹೇಂದ್ರನ್ನು ನಿನ್ನ ಬಲಗೈ ಬಂಟನಾಗಿ ಮಾಡಿಕೊಂಡಿದ್ದು ರಾಜಕೀಯಲ್ಲಿ ರಾಜಹುಲಿಯಾಗಿ ಮೆರೆಯುದು ಕಲ್ಲ. ನನ್ನಿಂದ ನಿನ್ನ ಸರ್ವಾಸ್ತಿಯನ್ನು ನಾಶ ಮಾಡಿಕೊಳ್ಳುದಕ್ಕಾಗಿ (ನಕ್ಕು) ನೀನು ಹೇಳಿದಾಗೆ ಕೇಳಿ ನಿನ್ನ ಮುಂದೆ ಒಳ್ಳೆಯವನಂತೆ ನಟಿಸಿ. ಇಡೀ ಅಂಡ್ರ ವರಡಿಗೆ ದೊಡ್ಡ ಡಾನ್ ಆಗಿ ಬೆಳೆದು. ಕೊನೆಗೊಂದು ದಿನ ನಿನ್ನ ಸಿರಿ ಸಂಪತ್ತು ನನ್ನ ಕೈವಶ ಮಾಡಿಕೊಂಡು. ಆ ನಿನ್ನ ಅರಮನೆಗೆ ಬೆಂಕಿ ಹಚ್ಚಿದ ಬಿಡಲಾರ ಈ ಬಹದ್ದೂರ ಮಹೇಂದ್ರ (ನಕ್ಕು ಸಿಗರೇಟ್ ಸೇದುತ್ತಾ ಒಂದು ಕಡೆ ನೋಡಿ) ಯಾರೋ ಇವಳು ರೆಕ್ಕೆ ಬಿಚ್ಚಿದ ಹಕ್ಕಿಯಂತೆ ಹಾರುತ್ತಾ ಈ ಕಡೆ ಬರುತ್ತಿದ್ದಾಳೆ. ಬರಲಿ ಬರಲಿ. ಆಕ್ಕರೆಂದ ಮಾತನಾಡಿಸಿ ಈ ಹಕ್ಕಿಯನು ಹಾರಿಸಿಕೊಂಡು ಹೋದರಾಯ್ತು ನನ್ನ ಪ್ರೇಮಲೋಕಕ್ಕೆ (ಮಧು ಬ್ಯಾಗ ಹಾಕಿಕೊಂಡು ಬರುವಳು.)

ಮಹೇಂದ್ರ:– (ತಡೆದು) ಹಲೋ ಎಸ್ಕ್ಯೂಸ್ ಮಿ ಸ್ಟಾಪ್ ಮೇರ ಬುಲ್ ಬುಲ್

ಮದು:– ನನ್ನನ್ನು ನಿಲ್ಲಿಸಿದ ನೀವ್ಯಾರು

ಮಹೇಂದ್ರ:– ಇಡೀ ಭೂಗತ ಜಗತ್ತಿನ ಡಾನ್ ಮೆರ್ ನಾಂ ಮಹೇಂದ್ರ

ಮದು:– ನೋಡಿ. ನೀವು ಯಾರಾದರೆ ನನಗೇನು. ಅದನ್ನು ತಿಳಿದುಕೊಳ್ಳುವ ಅವಶ್ಯಕತೆ ನನಗಿಲ್ಲ

ಮಹೇಂದ್ರ:– ಅವಶ್ಯಕತೆ (ನಕ್ಕು) ಅವಶ್ಯಕತೆ ಇಲ್ಲ ಎಂದು ಹಾಗೆ ಹೋದರೆ ಹೇಗೆ ಹರಿಯದ ತರುಣೆ. ಆ ಸೂರ್ಯನ ಕಿರಣಕ್ಕೆ ಪಳಪಳನೆ ಹೊಳಿತಿದ್ದವಲ್ಲ ರಸ ತುಂಬಿದ ನಿನ್ನ ಕೆಂಪಾದ ಕೆನ್ನೆ. ಈ ಕಾಮರಾಜನ ಕಣ್ಣಿಗೆ ಕುಕ್ಕುವ ಕನ್ಯಾಮನಿ ದೇಹದ ರುಚಿಯನ್ನು ಸವಿದು. ಅವಳನ್ನು ನನ್ನ ಪ್ರೇಮದ ಅರಮನೆಗೆ ಮಾಡಿಕೊಳ್ಳುತ್ತೇನೆ ಮಹಾ ರಾಣಿನೇ. ಇದಕ್ಕೆ ನೀನು ಒಪ್ಪಿಕೊಳ್ಳುವೆಯ ಕಣೆ.

ಮದು:– ಅಂದರೆ ನಿನ್ನ ಮಾತಿನ ಅರ್ಥ

ಮಹೇಂದ್ರ:– ಅರ್ಥ(ನಕ್ಕು) ಅರ್ಥ ಅನಾರ್ಥದ ಮಾತು ಬೇಡ ರಂಬೆ. ಈ ನಿನ್ನ ಮೃದುವಾದ ದೇಹದಿಂದ ಅಮೃತದ ಸವಿಯನ್ನು ಉನಿಸಿ. ನನ್ನಗೆ ಐದು ನಿಮಿಷ ಸುಖ ಕೊಟ್ಟರೆ. ನಿನಗೆ ಕೈತುಂಬ ದುಡ್ಡು ಕೊಡುತ್ತೇನೆ. ನಿ ಹುಂ ಅಂದ್ರ ನಿನ್ನನು ನನ್ನ ದಾಸಿಯಾಗಿ ಇಟ್ಟುಕೊಳ್ಳುತ್ತೇನೆ.

ಮದು:– ಹಲೋ (ಚಟ್ಟಿಗಿ ಹೊಡೆದು) ಮಿಸ್ಟರ್. ದುಡ್ಡಿನ ಆಸೆಗೆ ಮೈ ಮಾರಿಕೊಳ್ಳುವ ವೇವಿಚಾರಿಯು ನಾನಲ್ಲ. ನಿಮ್ಮಂತ ಶ್ರೀಮಂತರ ಮಾತಿಗೊಪ್ಪಿ ನಿಮಗೆ ದೇಹ ಅರ್ಪಿಸಿ. ನಿಮ್ಮ ದಾಸಿಯಾಗಿ ಬಾಳುವ ಹುಚ್ಚಿನು ನಾನಲ್ಲ. ನಾನೊಬ್ಬಳು ದೇಶ ವಿದೇಶದಲ್ಲಿ ಓದಿ ಸಾಕಷ್ಟು ಶಿಕ್ಷಣ ಕಲಿತ ಕನ್ಯಾಕುಮಾರಿ ನಾನು

ಮಹೇಂದ್ರ:- ಕಲಿತ ಕನ್ಯಾಕುಮಾರಿ(ನಕ್ಕು) ಲೇ ಕಲಿತ ಕುಮಾರಿ ಎಂದು ಗರ್ವದಿಂದ ಹಾರ್ಯಾಡುವ ನಾರಿ. ಇಂದಿನ ಕಲಿತ ನಾರಿಯರ ಚರಿತ್ರೆ ಹೇಳುತ್ತೇನೆ ಕೇಳಲೇ. ತನ್ನ ಲವ್ವರ್ ಕೊಡಿಸಿದ ಫೋನನ್ನು ತೆಗೆದುಕೊಂಡು ಹೋಗಿ. ಮನೆಗೆ ಬಂದ ತಕ್ಷಣ ಫೋನ್ ಪ್ಲೇಟ್ ಮೂಡಿಗೆ ಹಾಕಿ. ಯಾರಿಗೂ ಗೊತ್ತಾಗದಂತೆ ಮನೆಯಲ್ಲಿ ಮುಚ್ಚಿ ಇಟ್ಟು. ಮರುದಿನ ತಾನು ಕಾಲೇಜಿಗೆ ಹೋಗುವಾಗ ಬ್ಯಾಗಿನಲ್ಲಿ ಇಟ್ಟುಕೊಂಡು ಹೋಗಿ. ಅರ್ಧ ದಾರಿಯಲ್ಲಿ ಬಂದ ತಕ್ಷಣ ತನ್ನ ಹುಡುಗನಿಗೆ ಫೋನ್ ಮಾಡಿ ಕರೆಸಿಕೊಂಡು. ಕಾಲೇಜಿಗೆ ಚಕ್ಕರ್ ಹೊಡೆದು ಆ ಹುಡುಗನೊಂದಿಗೆ ಲಾಡ್ಜಿನಲ್ಲಿ ಪಾರ್ಕಿನಲ್ಲಿ ರೋಮ್ಯಾನ್ಸ್ ಮಾಡೋ ರಾಣಿ ಎಷ್ಟಿಲ್ಲ ಇಂದಿನ ಕಲಿತ ಕುಮಾರಿಯರ ಲಿಸ್ಟಿನಲ್ಲಿ. ಸೋಶಿಯಲ್ ಮೀಡಿಯಾ ಹೆಣ್ಣು ಮಕ್ಕಳಿಗೆ ಆಪತ್ತು ಎಂದು ಮನೆಯಲ್ಲಿ ಎಷ್ಟು ತಿಳಿಸಿ ಹೇಳಿದರು. ವಿಚಿತ್ರವಾಗಿ ವಿಕಾರವಾಗಿ ಸೆಲ್ಫಿಯನ್ನು ತೆಗೆದುಕೊಂಡು. ಅದೇ ಸೋಶಿಯಲ್ ಮೀಡಿಯಾಗೆ ಅಪ್ಲೋಡ್ ಮಾಡಿ. ನಾನೇ ಸುಂದರಿ ಎಂದು ಶೋ ಕೊಡುವ ಸೂಗಲಾಡಿಯರ್ ಎಷ್ಟಿಲ್ಲ ಈ ನಿನ್ನ ವಿದ್ಯಾರ್ಥಿಯ ಇತಿಹಾಸದಲ್ಲಿ. ಫೇಸ್ ಬುಕ್ ಇನ್ಸ್ಟಾಗ್ರಾಮ್ ನಲ್ಲಿ ನಾನಾತ್ತರ ವಿಡಿಯೋಗಳನ್ನು ಮಾಡಿ. ಮಳ ವಯಸ್ಸಿನ ಹುಡುಗರ ಬುದ್ದಿಯನ್ನು ಮಂಕಗೊಳಿಸಿ. ಮಧ್ಯರಾತ್ರಿ ಮನೆಗೆ ಕರೆಸಿಕೊಳ್ಳುವ ಮದನಾರಿಯರು ಎಷ್ಟಿಲ್ ಈ ನಿನ್ನ ಕಾಲೇಜಿನ ಕಲಿಯುಗದಲ್ಲಿ. ಈ ನಿಮ್ಮ ಕರೆ ಮಸೂಡಿಗೆ ಕೆಜಿ ಗಂಟಲೆ ಮೇಕಪ್ ಮಾಡಿಕೊಂಡು. ಹತ್ತು ವರ್ಷದ ಹುಡುಗನಿಂದ 60 ವರ್ಷದ ಮುದುಕನವರಿಗೂ ಚಿತ್ತ ಚಂಚಲ ಮಾಡಿಸುವ. ಚಿಲ್ರೆ ಹೆಣ್ಣುಗಳೆಷ್ಟಿಲ್ಲ ಈ ನಿನ್ನ ಹೆಣ್ಣು ಜಾತಿಯಲಿ. ನೋಡು ಫಸ್ಟ್ ಯುವರ್ ಲಾಸ್ಟ. ನಾನು ಹೇಳಿದಾಗೆ ಕೇಳಿದರೆ ಸರಿ. ಇಲ್ಲ ನಿನ್ನ ಶೀಲ ನನ್ನ ಕೈಯಲ್ಲಿ ಆಗಬೇಕು ಪರಾರಿ ಬಾರಲೇ ಬಾ ಕನ್ಯಾಕುಮಾರಿ (ಕೈ ಹಿಡಿದು ಎಳೆಯವನು)

ಮಧು:- ಎ ಲೋಪರ್ ಈಲಿಂದ್ ಸುಮ್ನೆ ಹೋದರೆ ಸರಿ. ಇಲ್ಲ ನನ್ನ ಕಾಲ್ಲಲಿರುವ ಮೆಟ್ಟಿನಿಂದ ಕೆತ್ತಿ ಹೋಗುತ್ತದೆ ನಿನ್ನ ಮಾರಿ

ಮಹೇಂದ್ರ:- ಏನಂದೆಲೆ ಸೋಕಿನ ನಾರಿ. ಸಾವಿರ ಅಣಿ ಬಲದ ಸರ್ದಾರನಾದ ಈ ಮಗದಿರ್ ಮಹೇಂದ್ರನ ಮಾರಿ ಕೆತ್ತುವಂತೆ ಹೊಡಿಯುತ್ತೇನೆ ಅಂದಿಯ ವೈಮಾಲಿ. ನನ್ನ ಕಾಮದ ಕೈಯಲಿ ನಿನ್ನ ಶೀಲಾವೆಂಬ ಖಿಜಾನಿ ಆಗಬೇಕು ಕಾಲಿ ಬರಲೇ ಬಾಲಿ (ಕೈಹಿಡಿದು ಎಳೆಯವನು)

ಮದು:- ಎ ಕೈ ಬಿಡೋ ಕಟ್ಟುಕ (ಸ್ವ) ಅಯೋ ದೇವರೇ ನಾನೆಂತ ಕೆಟ್ಟ ಸಮಯದಲ್ಲಿ ಇಲ್ಲಿಗೆ ಬಂದು ಬೀಟೆ. (ಪ್ರ) ಹಾಂ ನೋಡಿ ನನ್ನ ಶೀಲದ ವಿಚಾರ ಬಿಟ್ಟು ಬೇರೇನಾದರೂ ಹೇಳಿ ಕೇಳುತ್ತೆನೆ

ಮಹೇಂದ್ರ:- ಹಾಗಾದರೆ ಈ ಸಮಯದಲ್ಲಿ ನನ್ನ ಕೈ ಹಿಡಿದು ಒಂದು ಹಾಡನ್ನು ಹಾಡು

ಮಧು:- ಆಯ್ತು ಹಾಡುತ್ತೇನೆ ಆದರೆ ನೀವು ಮಾತ್ರ ನನ್ನನ್ನು ಏನು ಮಾಡಬಾರದು

ಮಹೇಂದ್ರ:- ಆಯ್ತು ಮೊದಲು ಹಾಡು ಆನಂತರ ನೋಡೋಣ (ಜೋಡಿ ಪದ ಮುಗಿದ ನಂತರ)

ಮಧು:- ಹಾಂ ನೋಡಿ ನೀವು ಹೇಳಿದಂತೆ ಹಾಡಿದ್ದೇನೆ. ನನಗೆ ದಾರಿ ಬಿಡಿ

ಮಹೇಂದ್ರ:- ದಾರಿ (ನಕ್ಕು) ಬಿಡತ್ತೀನಿ ನಾರಿ. ನಿನ್ನ ಮಧುರ ಕಂಠದಿಂದ ಹಾಡಿನ ರುಚಿ ಸವಿದ್ದಾಯಿತು ಇನ್ನು ನಿನ್ನ ಮೃದುವಾದ ದೇಹದ ಸುಖವನ್ನು ಸವಿಯಲೆಬೇಕು ಬಾರಲೇ ಬಾ

(ಕೈಹಿಡಿದು ಎಳೆದಾಡುವಾಗ ಮಧು ಕಾಪಾಡಿ ಎಂದು ಕೂಗುಗಳು ಮೈಲಾರ ಕೊಡ್ಲಿ ಹಿಡಿದು ಬಂದು ಕಾಲರ್ ಹಿಡಿದು ಎಳೆದು)

ಮೈಲಾರ:- ಲೇ ಕಾಮದ ಕಚ್ಚೆ ಹರಿದು ಕಂಡ ಕಂಡ ಹೆಣ್ಣಿನ ಮೇಲೆ ಕಾಮದ ಕಣಾಕುವ ಕಚ್ಚೆ ಹರಕ್ಕ ನನ್ನ ಮಗನೆ. ಈ ಅಬಲೆ ಸ್ತ್ರೀಯನ್ನು ಬಿಟ್ಟು ಹೋದರೆ ಸರಿ. ಇಲ್ಲ ಈ ಮೈಲಾರನ ಕೈಯಲ್ಲಿ ನಿನ್ನ ಪ್ರಾಣ ಹೋಗುವದು ಹಾರಿ

ಮಹೇಂದ್ರ:- ಪ್ರಾಣ ಹಾರಿ (ನಕ್ಕು) ಲೆ ಮೈಲಾರ ಸುಮ್ಮನೆ ಕುರಿ ಕಾಯೋದನ್ನು ಬಿಟ್ಟು. ನಮ್ಮಂತ ಸರದಾರರ ಪ್ರೇಮಸಲಾಪರದಲ್ಲಿ ಅಡ್ಡ ಬರುವುದು ಸರಿಯಲ್ಲ. ಸುಮ್ಮನೆ ಸರಿಯಲೇ ಅವಿವೇಕಿ

ಮೈಲಾರ:- ಲೆ ತಿರುಬೋಕಿ. ಸುಮ್ಮನೆ ಸರಿಯೋದಕ್ಕೆ ನಾನೇನು ಸಿಕಂಡಿ ಆಲ್ಲಲೇ ಚೂತ್ಯಾ ನನ್ನ ಮಗನೇ. ಹಿಂಡು ಕುರಿ ಹಾಲು ಕುಡಿದು ಬಂಡೆಗಲ್ಲನ್ನು ಗುದ್ದಿ ಪುಡಿ ಪುಡಿ ಮಾಡುವಂತ. ವಜ್ರ ದೇಹದ ಸರದಾರಲೇ ಈ ಗಂಡುಗಲಿ ಮೈಲಾರ

ಮಹೇಂದ್ರ:- ಗಂಡುಗಲಿ ಮೈಲಾರ (ನಕ್ಕು) ಲೇ ಮೈಲಾರ ಗಂಡುಗಲಿ ಎಂದು ಘರ್ಜಿಸಬೇಡಲೇ ಮಳ ಕುರಿಗಾರ. ಘರ್ಜಿಸುವ ನಿಮ್ಮಂತ ಎಷ್ಟು ಗಂಡು ಹುಲಿಗಳು ಗಗನ ಯಾತ್ರ ಮಾಡಿದ್ದಾವೆ ಈ ಗಂಡೆದೆ ಮಗಧೀರ ಮಹೇಂದ್ರನ ಕೈಯಲ್ಲಿ. ಇನ್ನು ನೀನಂದ್ರೆ ಏನಲೇ ಬಚ್ಚಾ. ಸುಮ್ಮನೇ ಈ ಹುಡುಗಿಯನ್ನು ಕಾಪಾಡುವುದಕ್ಕೆ ಬಂದು. ಗುದ್ದಿಸಿಕೊಂಡು ನಿನ್ನ ದೇಹವನ್ನು ಪುಡಿ ಪುಡಿ ಮಾಡಿಕೊಳ್ಳಬೇಡ. ಇಲ್ಲಿಂದ ಹೊರಟು ಹೋಗು

ಮೈಲಾರ:- ಲೆ ಮಹೇಂದ್ರ ನಿನ್ನ ಕೈಯಲ್ಲಿ ಗುದ್ದಿಸಿಕೊಂಡು ಪುಡಿಪುಡಿ ಮಾಡಿಕೊಳ್ಳುವುದಕ್ಕೆ. ನನ್ನದೇನು ನಿನ್ನ ಹಾಗೆ ಹಾಲ್ಕೋ ಹಾಲು ಕುಡಿದು ಬೆಳೆದ ದೇಹ ಅಲ್ಲಲೇ ಇದು. ಕುರಿಹಾಲು ಬಿಳಿ ಜೋಳದ ಸಂಘಟಿ ಉಂಡು ಬೆಳೆದು. ಬಿಸಿಲು ಬಿರುಗಾಳಿಗೆ ಗುಡುಗು ಸಿಡಲಿಗೆ ಬಗ್ಗದ ದೆಹಲೇ ಇದು. ನನ್ನಂತೆ ನಿನ್ನ ದೇಹದಲ್ಲಿ ಗಂಡಸ್ತನದ ರಕ್ತ ಹರಿದಿದ್ದರೆ. ಈ ಹುಡುಗಿಯನ್ನು ಮುಟ್ಟೋದಕ್ಕೆ ಒಂದು ಹೆಜ್ಜೆ ಇಟ್ಟು ಮುಂದಕ್ಕೆ ಬಾರಲೇ (ಸೊಡ್ಡು ಹೊಡೆಯುವನು) ಮುಂದಕ್ಕಿಟ್ಟ ನಿನ್ನ ಕಾಲ್ಲನು ಒಂದೇ ವತ್ತಕ್ಕೆ ಮುರಿದು ಬಿಡುತ್ತೇನೆ ಬಾರಲೇ ಬಾ

ಮಹೇಂದ್ರ:– ಲೇ ಮೈಲಾರ. ಈ ಹುಡುಗಿಯನ್ನು ನೀನು ರಕ್ಷಿಸಿದ ಮಾತ್ರಕ್ಕೆ ನೀನೇನು ಸೂರಸರದಾರನೆಂದು ತಿಳಿಯಬೇಡ ಲೇ. ಮುಂದೊಂದು ದಿನ ನಿನ್ನ ಸೂರತನಿಗೆ ಸವಾಲ್ ಹಾಕಿ. ನಿನ್ನ ಶೌರ್ಯ ಸಾಹಸವನ್ನು ಸರ್ವನಾಶ ಮಾಡಿ. ನಿನ್ನ ಸೊಕ್ಕನ್ನು ಅಡಿಗಿಸದಿದ್ದರೆ. ನನ್ನ ಹೆಸರು ನಿಮ್ಮಂತ ಸೂರರಿಗೆ ಶೋರ ಧಿರರಿಗೆ ಧೀರ ಮಗಧೀರ ಮಹೇಂದ್ರನೇ ಅಲ್ಲ(ನಕ್ಕು) ಮೇರಾ ಲಡ್ಕಿ ಬಹುತ್ ಪಸಂದಾಗಯ ಮತ್ತೊಮ್ಮೆ ಈ ಸಮಯ ಸಾಧಿಸಿ ನಿನ್ನ ಶೀಲದ ಸವಿರುಚಿಯನ್ನು ಸವಿಯಿದೆ ಬಿಡಲಾರ ಈ ಸರ್ದಾರ. ಲೇ ಹುಡಿಗಿ ನಿಮ್ಮಂತ ಸುರ ಸುಂದರಿಯರಿಗೆ ಸುಕುಮಾರ ನನ್ನ ಪ್ರೇಮದ ಮಾತಿಗೊಪ್ಪಿದ ಕನ್ಯಕುಮಾರಿಯರ ಮನ ಗೆದ್ದ ಮಗಧೀರ ಈ ಮಹೇಂದ್ರ ಬರುತ್ತೇನೆ ವೇಟ್ ಎಂಡ್ ಸಿ (ನಕ್ಕು ಹೋಗುವನ್ನು)

ಮೈಲಾರ:– ಹೋಗಲೇ ಹರಾಮ್ ಕೋರ ನನ್ನ ಮಗನೆ. ಕಾಲು ಕೆದರಿ ಕದನಕ್ಕೆ ಇಳಿದರೆ ನಿಮ್ಮಂತವರ ಸಿರಾ ಕಡಿಯದಿಕ್ಕೆ ಸಿದ್ಧನಾಗಿರುತ್ತಾನೆ ಈ ಸಿಡಿದೆದ್ದ ಮೈಲಾರ. ಹಾಂ ನೋಡಿ ನೀವಿನ್ನು ಹೋಗಬಹುದು

ಮಧು:– ನೋಡಿ ಮೈಲಾರ ನಿಮ್ಮ ಶೌರ್ಯ ಸಾಹಸದ ನುಡಿಗಳನ್ನು ಕೇಳಿ ನನ್ನ ಹೃದಯವನ್ನು ನಿಮಗೆ ಕೊಟ್ಟುಬಿಟ್ಟಿದ್ದೇನೆ ನನಗೆ ತಿಳಿಯದ ಹಾಗೆ ನಾನು ನಿಮ್ಮನ್ನು ಪ್ರೀತಿಸ್ತಾ ಇದ್ದೀನಿ ಐ ಲವ್ ಯು ಮೈಲಾರ

ಮೈಲಾರ:– (ಸಿಟಿನಿಂದ) ಏ ಹುಡುಗಿ ಇದೇ ನನಗಾಗುವುದಿಲ್ಲ ಕಷ್ಟದಲ್ಲಿರುವ ಹುಡುಗಿಯನ್ನು ಕಾಪಾಡಿದ ತಕ್ಷಣ ಪ್ರೀತಿ ಪ್ರೇಮ ಆಗೋದಕ್ಕೆ. ಇದೇನು ಸಿನಿಮಾ ಅಲ್ಲ. ಇದು ನಿಜ ಜೀವನ. ನೋಡು ಸುಮ್ಮನೆ ಹೊರಟು ಹೋಗು ನನ್ನ ಕೋಪ ನೆತ್ತಿಗೇರಿಸಬೇಡ

ಮಧು:– ಅದು ಹಾಗಲ್ಲ ಮೈಲಾರ. ನನ್ನ ಹೆತ್ತ ತಾಯಿಯ ಮೇಲೆ ಆಣೆ ಮಾಡಿ ಹೇಳುತ್ತೇನೆ. ನಾನು ನಿನ್ನನ್ನು ತುಂಬಾ ಪ್ರೀತಿಸ್ತಾ ಇದ್ದೀನೆ

ಮೈಲಾರ:– ಪ್ರೀತಿ (ನಕ್ಕು) ಏ ಹುಚ್ಚು ಹುಡುಗಿ ನಿಮ್ಮಂತ ಎಷ್ಟು ಹುಡುಗಿಯರು ಈ ಸಮಾಜದಲ್ಲಿ ಪ್ರೀತಿ ಪ್ರೇಮದ ಹೆಸರಿನಲ್ಲಿ ನಾಟಕ ಮಾಡಿ. ಎಷ್ಟು ಹುಡುಗರ ಬಾಳಲಿ ಆಟ ಆಡಿ ಹೋಗಿದ್ದಾರೆ ಈ ಸಮಾಜದಲ್ಲಿ. ಇವರ ಕಪುಟ್ಟ ಗುಣದ ಪ್ರೀತಿಯನ್ನು ನಿಜವಾದ ಪ್ರೀತಿ ಎಂದು ನಂಬಿ. ಹಿಂದಿನ ಯುವಕರು ತಮ್ಮ ಜೀವನವನ್ನೇ ಹಾಳು ಮಾಡಿಕೊಂಡು. ತಲೆಕೆಡಿಸಿಕೊಂಡು ಹುಚ್ಚು ಹಿಡಿದು ದೇವದಾಸನಾಗಿ ತಿರುಗುತ್ತಿದ್ದಾರೆ ಈ ಸಮಾಜದಲ್ಲಿ. ಅದರಂತೆ ನಿನ್ನ ಪ್ರೇಮದ ಬಲೆಯಲ್ಲಿ ಸಿಕ್ಕು ಹುಚ್ಚನಾಗಿ ದೇವದಾಸನಂತೆ ಅಲೆದಾಡೋ ಹುಡುಗ ನಾನಲ್ಲ. ಅದಕ್ಕೆ ಬೇರೆ ಯಾರನ್ನಾದರೂ ನೋಡಿಕೋ ತೂ ಸರಿ ಆಚೆ (ಹೋಗುವನು)

ಮಧು:– ಹಲೋ ಮೈಲಾರ ನಿಂತಕೊಳ್ಳಿ. ಹೋಗು ಮೈಲಾರ ಹೋಗು. ನಿನ್ನ ಪ್ರೀತಿ ಪಡಿಯೋದಕ್ಕೆ ಎಷ್ಟು ಜನ್ಮ ಬೇಕಾದ್ರೂ ಕಾಯುತ್ತೆನೆ. ಐ ಲವ್ ಯು ಮೈಲಾರ (ಕಣ್ಣ ಮುಚ್ಚಿಕೊಂಡು ನಿಲುವಳು ಲೈಟ್ ಅಪ್ ಆಗಿ

ಆನ್ ಮಾಡಿದಾಗ. ಮೈಲಾರ ಬಂದಿರಬೇಕು ಕನಸಿನ ಹಾಡು ಇರುತ್ತದೆ. ಹಾಡು ಮುಗಿದ ನಂತರ) ಛೆ ನಾನೆಂತ ಹುಚ್ಚಿ ಹಗಲಲ್ಲಿ ಕನಸು ಕಾಣುತ್ತಿದ್ದೆನಲ್ಲ. ಈ ಕನಸನ್ನು ನನಸು ಮಾಡಿಕೊಳಲೇಬೇಕು (ಹೋಗುವಳು)

ಪ್ರವೇಶ 4

ಮಹೇಶನ ಮನೆ

ಮಹೇಶ:– (ಹೊರಗಿನಿಂದ ಬಂದು) ಭಾಗ್ಯಶ್ರೀ ಭಾಗ್ಯಶ್ರೀ (ಭಾಗ್ಯಶ್ರೀ ಪೂಜದ ಸಮಗ್ರದೊಂದಿಗೆ ದೇವಸ್ಥಾನದಿಂದ ಬರುವಳು)

ಬಾಗ್ಯಶ್ರೀ:– ಯಾಕ್ರೀ ಕೂಗಾಡ್ತಾ ಇದ್ದೀರಾ ಏನಾಯ್ತು

ಮಹೇಶ:– ಇದೇನು ಭಾಗ್ಯಶ್ರೀ ಎಲ್ಲಿಂದ ಬರ್ತಾ ಇದ್ದೀಯಾ ನೀನು

ಭಾಗ್ಯಶ್ರೀ:– ರೀ ನನ್ನ ಮೈದುನರಾದ ಮೈಲಾರ ಮಾಂತೇಶನ ಹುಟ್ಟು ಹಬ್ಬವಿದೆ ಇವತ್ತು. ಅದಕ್ಕೆ ದೇವಸ್ಥಾನಕ್ಕೆ ಹೋಗಿ ಅವರಿಬ್ಬರ ಹೆಸರಲ್ಲಿ ವಿಶೇಷವಾಗಿ ಪೂಜೆ ಮಾಡಿಸಿಕೊಂಡು ಬರ್ತಾ ಇದ್ದೀನಿ ರೀ

ಮಹೇಶ:– ಭಾಗ್ಯಶ್ರೀ. ದಿನ್ ನಿತ್ಯ ತುತ್ತು ಅನ್ನಕಾಗಿ ಬೀದಿ ಬೀದಿಯಲ್ಲಿ ಭಿಕ್ಷೆ ಬೇಡುವ ಅಂಗ್ ವಿಕಲ್ಲರ ಮೇಲೆ ಕರುಣೆ ತೋರದೆ ಇರುವ ಆ ನಿನ್ನ ದೇವರು. ಶುಭ ಸಮಾರಂಭಕ್ಕೆ ವಿಶೇಷವಾಗಿ ಪೂಜೆ ಮಾಡಿಸಿದರೆ ಕರುಣೆ ತೋರುವದೇ. ಭಾಗ್ಯಾಶ್ರೀ ವರ್ಷ ಪುರತಿ 12 ತಿಂಗಳು. ಒಂದು ದಿನ್ ಬಿಡದ್ದಂತೆ ಅದೇ ದೇವಸ್ಥಾನದ ಬಾಗಿಲಲ್ಲಿ ಕುಳಿತುಕೊಂಡು ಭಿಕ್ಷೆ ಬೇಡುವ ಆ ಭಿಕ್ಷುನ ಮೇಲೆ ಕರುಣೆ ತೋರದೆ ಇರುವ ಆ ನಿನ್ನ ದೇವರು. ಇನ್ನು ಯಾವಾಗೋ ಒಂದು ದಿನ್ ಬಂದು ಹೋಗುವ ನಿನ್ನಂತ ಭಕ್ತಳ ಮೇಲೆ ಕರುಣೆ ತೋರುವದೇ. ಇದುಯಲ್ಲ ನಿಮ್ಮ ಭ್ರಮೆ ಭಾಗ್ಯಾಶ್ರೀ

ಭಾಗ್ಯಾಶ್ರೀ:– ರೀ ಮಡಿವಂತಿಕೆ ಇಂದ. ವಾರ ಒಪತ್ತು ಹಿಡಿದು. ಭಕ್ತಿಯಿಂದ ಬೇಡಿಕೊಂಡರೆ. ನಮ್ಮ ಕಷ್ಟವನ್ನು ನಿವಾರಿಸುತಾನೆ ರೀ ಆ ದೇವರು

ಮಹೇಶ:– ಮಡಿವಂತಿಕೆ ಇಂದ (ಮುಗುಳು ನಗೆ) ಭಾಗ್ಯಶ್ರೀ. ಮಡಿವಂತಿಕೆ ಭಕ್ತಿ ಅನೋದ್ದಾರೆ ಮೀನಿನ ಕಿಂತ ಭಕ್ತಿವಂತರು ಯಾರು. ಉಪವಾಸ ಮಾಡುವದೇ ಭಕ್ತಿ ಅನೋದ್ದಾರೆ ಅಸುವಿನಿಂದ ನರಳುತ್ತಿರುವ ಎಷ್ಟೋ ಬಡವರು ಇದ್ದಾರೆ ಈ ಪ್ರಪಂಚದಲ್ಲಿ. ಅವರಿಗಿಂತ ಭಕ್ತಿವಂತರು ಯಾರು. ಭಾಗ್ಯೆಶ್ರೀ ಭಕ್ತಿ ಅಂದರೆ ಯಾವದು ಗೊತ್ತೆ. ಹಸಿವಿನಿಂದ ಬಂದವರಿಗೆ ನಮ್ಮ ಹತ್ರ ಇದ್ದ ಎರಡು ರೊಟ್ಟಿಯಲ್ಲಿ ಒಂದು ರೊಟ್ಟಿಯನ್ನು ಅವರಿಗೆ ಕೊಟ್ಟು ಹಸಿದವರ ಮನಸು ತೃಪ್ತಿ ಪಡಿಸೋದೆ ನಿಜವಾದ ಭಕ್ತಿ. ನಾವು ಮಾಡುವ ಕಾಯಕ ಯಾವದೇ ಇರಲಿ. ಆ ಕಾಯಕದಲ್ಲಿ ದೇವರನ್ನು ಕಾಣುತ್ತ. ನಿಷ್ಠೆ ಇಂದ ಕಾಯಕ ಮಾಡಿದರೆ. ಅದೇ ನಿಜವಾದ ದೇವರ ಭಕ್ತಿ.

ಭಾಗ್ಯಶ್ರೀ:– ಎಂತ ವೀಶೇಷವಾದ ವಿಷಯಗಳು ಅಡಿಗಿದ್ದೆ ರೀ ನಿಮ್ಮಲ್ಲಿ. ನಿಮ್ಮಂತ ಪತ್ತಿಯನ್ನು ಪಡೆದ ನಾನೇ ಪುಣ್ಯವಂತಳು ಸ್ವಾಮಿ

ಮಹೇಶ:– ರತ್ತಿ ರಮಣಿತಿರುವ ಸತ್ತಿಯನ್ನು ಪಡೆದ ನಾನೇ ಭಗ್ಯಾಷಲ್ಲಿ ಕಣೆ (ಕೆನ್ನೆ ಮುಟ್ಟುವನು)

ಭಾಗ್ಯಾಶ್ರೀ:– ರೀ ಬರೆ ನನ್ನ ವರಣೆ ಮಾಡುವದೇ ಹೆಚ್ಚಾಗಿದೆ ನಿಮಗೆ. ನನಗೆ ಒಳಗಡೆ ಬಾಳ ಕೆಲಸ ಇದೆ ನಾನು ಇನ್ ಬರ್ತೀನಿ

ಮಹೇಶ:– (ಕೈ ಹಿಡಿದು) ನಿಂತ್ತುಕೊಂಳ್ಳೆ ನನ್ನ ರಾಣಿ. ಕೆಲಸದ ಸಮಯದಲ್ಲಿ ಈ ನೀನ್ನ ಗಂಡನೇ ಮರತಂತೆ ಕಾಣುತ್ತದ್ದೆ

ಭಾಗ್ಯಾಶ್ರೀ:– ಯಾಕ್ರೀ ಹಾಗಂತೀರಾ ಸತಿ ಎಂದ್ದಾದರೂ ಪತಿಯನ್ನು ಮರಿಯುದುಂಟೇ

ಮಹೇಶ:– ಹೌದು ಭಾಗ್ಯಾಶ್ರೀ ನನಗೆ ಆ ಕೆಲಸ ಇದೆ. ಈ ಕೆಲಸ ಇದೆ ಅಂತ ಹೇಳತಿಯಲ್ಲ ನಿಮ್ಮಗೇನು ಬೆಕುಂತ ಕೇಳಿದಿಯ ನೀನು

ಭಾಗ್ಯಾಶ್ರೀ:– ಇದೆನ್ರೀ ನೀವು ಹೇಳುತ್ತಿರುವ ಮಾತ್ತು. ನಿಮ್ಮ ಮಾತ್ತನ್ನು ನಾನು ಕೇಳೋದಿಲ್ಲವ. ಯಾಕೆ ಸ್ವಾಮಿ ನನ್ನಿಂದ ನಿಮ್ಮ ಮನಸಿಗೆನಾದರೂ ಬೇಜಾರ್ ಆಗಿದ್ರೆ ನನ್ನ ಮೇಲೆ ಕ್ಷಮೇ ಇರಲಿ. ಹಾಂ ಹೇಳ್ರಿ ಏನು ನಿಮ್ಮ ಮಾತ್ತು

ಮಹೇಶ:– ಮತ್ತೆನ್ನು ಭಾಗ್ಯಾಶ್ರೀ ಹೊಲದಲ್ಲಿ ದುಡಿದು ದಣಿದು ಬಂದ ಗಂಡನ ಗಲ್ಲಕ್ಕೆ ಒಂದು ಮುತ್ತು ಕೊಟ್ಟು. ಪ್ರೇಮ ಲೋಕದಲ್ಲಿ ತೆಲ್ಯಾಡುವಂತೆ ಗಂಡನ ಕೈಹಿಡಿದು ಒಂದು ಪ್ರೇಮ ಗೀತೆಯನ್ನು ಹಾಡುದನ್ನು ಬಿಟ್ಟು. ಕೆಲಸದ ನೆವ ಹಳ್ತಾ ಇದಿಯ ನೀನು.

ಭಾಗ್ಯಾಶ್ರೀ:– ಓ ಹೊ. ಹಾಗೂ ಸಮಾಚಾರ. ಒಂದು ಹಾಡಿಗಾಗಿ. ಒಂದು ಮುತ್ತಿಗಾಗಿ. ಇಷ್ಟೊಂದು ಮಾತನಾಡಲು ನಿಂತಿದ್ದೀರಾ ನೀವು ಎಷ್ಟು ಚಂದ ಅದವುರಿ ನಿಮ್ಮ ಪ್ರೀತಿ ಪ್ರೇಮದ ನಾಟಕ ಮಾತ್ತುಗಳು. ಈ ಪ್ರೇಮದ ನಾಟಕದ ಕವಿಗಳು ನೀವೇನ್

ಮಹೇಶ:– ನಾನಲ್ಲ ಕಣೆ ಈ ಪ್ರೇಮದ ನಾಟಕದ ಕವಿಗಳು. ನನ್ನ ನೆಚ್ಚಿನ ಕವಿ ಹೇಮಂತ ಎನ್ ಕಡಿಯವರ ಸಾ॥ ಹುನಗುಂಡಿ ಆವರು ಈ ನಾಟಕದ ಕವಿಗಳು

ಭಾಗ್ಯಾಶ್ರೀ:– ಓ ಅಷ್ಟೊಂದು ರಸಿಕರ ಆ ನಿಮ್ಮ ಕವಿಗಳು

ಮಹೇಶ:– ರಸಿಕತನ ಅಷ್ಟೆ ಆಲ್ಲ ಭಾಗ್ಯಾಶ್ರೀ. ಕ್ರಾಂತಿಕಾರಿ ಕೌಟುಂಬಿಕ ರುದ್ರಮಯ್ಯ ನಾಟಕಗಳನ್ನು ರಚಿಸಿ ಹಿಡೀ ನಾಡಿನ ಜನರ ಮನ ಗೆದ್ದು ಬಂದ್ದಿದಾನೆ ಆ ನನ್ನ ಕವಿ. ಇರಲಿ ಹೀಗೆ ಮಾತನಾಡುತ್ತ ನಿಲ್ಲಬೇಡ ಹಾಡು ಒಂದು ಪ್ರೇಮ ಗೀತೆಯನ್ನು

ಭಾಗ್ಯಾಶ್ರೀ:– ಅಯ್ತಿ ಸ್ವಾಮಿ ನಿಮ್ಮ ಅಸೆ ಅಂತೆ ಹಾಡುತೇನೆ (ಜೋಡಿ ಪದ ಹಾಡು ಮುಗಿದ ನಂತರ. ಮೈಲಾರ ಕೈಚೀಲ ಹಿಡಿದುಕೊಂಡು. ಮಾಂತೇಶ್ ಸಾದ ಡ್ರೆಸ್ ನಲ್ಲಿ ಬರುವರು)

ಮಾಂತೇಶ್:– ಅಣ್ಣ ಅತ್ತಿಗೆ

ಮಹೇಶ:– ಬಾ ಸೋದರ. ಇದೇನು ಮಾಂತೇಶ್ ಪೋನ ಮಾಡದೆ ಹಾಗೆ ಬಂದ್ದಿಯಲ್

ಮಾಂತೇಶ್:– ಅಣ್ಣ ನನ್ನನ್ನು ಡ್ಯೂಟಿ ಮೇಲೆ ನಮ್ಮ ಜಿಲ್ಲೆಗೆ ಹಾಕಿದ್ದರು. ನಾನು ಡ್ಯೂಟಿ ಮೇಲಿರುವಾಗ ಮೈಲಾರಣ್ಣ ಫೋನ್ ಮಾಡಿ ಇವತ್ತು ಮೆನೆಯಲ್ಲಿ ಫಂಕ್ಷನ್ ಇದೆ ಬಾ ಎಂದು ಹೇಳಿದ ಅದಕ್ಕೆ ತಕ್ಷಣ ಹೊರಟ್ಟು ಬಂದೆ ಅಣ್ಣ

ಭಾಗ್ಯಾಶ್ರೀ:– ಫಂಕ್ಷನ್. ಇದೇನು ಮೈಲಾರ ಮಾಂತೇಶ್ ಹೇಳುತ್ತಿರುವದು. ಹೌದು ಅದೇನು ಮೈಲಾರ ಕೈಚಿಲ್ಲದಲ್ಲಿ

ಮೈಲಾರ:– ಅತ್ತಿಗೆ ಇವತ್ತು ನಿಮ್ಮ ಮದುವೆ ಅದ ದಿನ್ ಅಲ್ಲವೇ. ನಿಮಗೆ ಸರ್ಪ್ರೈಸ್ ಕೊಡಬೇಕೆಂದು. ನಾನೆ ಫೋನ್ ಮಾಡಿ ಬರಲು ಹೇಳಿದೆ ಅದಕ್ಕೆ ಅಲ್ಲೇ ಬರುವಾಗ ನಿಮ್ಮ ಇಬ್ಬರಿಗೂ ಬಟ್ಟೆಯನ್ನು ತಗೆದುಕೊಂಡು ಬಂದೆ. ಅಣ್ಣ ಅತ್ತಿಗೆ ತಗೆದುಕೋಳಿ ಬಟ್ಟೆಯನ್ನು. (ಬಟ್ಟೆ ಕೊಡುವನು) ಬೇಗ ಹೋಗಿ ಬಟ್ಟೆಯನ್ನು ಹಾಕಿಕೊಂಡು ಬನ್ನಿ ನಿಮ್ಮ ವೇಡಿಂಗ ಅನವರ್ಸರಿ ಆಚಾರಿಸೋಣ

ಮಾಂತೇಶ:– ಇದೇನು ಮೈಲಾರಣ್ಣ. ನನಗೆ ಹೇಳದೆ ಅಣ್ಣ ಅತ್ತಿಗೆ ಬಟ್ಟೆಯನ್ನು ತಂದು. ನೀನು ಒಳೆವನ್ನಾಗಿ ನನ್ನು ಕೆಟ್ಟವನಾಗಿ ಮಾಡಿ ಬಿಟ್ಟೆ ನೀನು

ಮಹೇಶ:– ಹಾಗೇನು ಇಲ್ಲ ತಮ್ಮಂದಿರಾ. ನನ್ನ ಇಬ್ಬರು ತಮ್ಮಂದಿರು ಮುತ್ತು ರತ್ನಗಳು ಇದ್ದಂತೆ. ನಿಮ್ಮಿಂದ ನಮ್ಮ ಮನಸಿಗೆ ಬೇಜಾರ್ ಆಗುವದೇ. ಛೆ ಛೆ ಅದೆಂದ್ದು ಸಾಧ್ಯವಾಗದ ಮಾತ್ತು

ಮಾಂತೇಶ:– ಅಣ್ಣ ನೀವು ಬೇಗ ರಡಿ ಅಗ್ರಿ ಅಷ್ಟರಲ್ಲಿ ನಾನು ಕೇಕ್ಕ ತಗೆದುಕೊಂಡು ಬರುತ್ತೇನೆ (ಹೋಗುವಾಗ ಭಾಗ್ಯಾಶ್ರೀ ತಡೆದು)

ಭಾಗ್ಯಾಶ್ರೀ:– ಮಾಂತೇಶ್ ನಮ್ಮಗ ಸರ್ಪ್ರೈಸ್ ಕೊಡಬೇಕಂತ ನೀವು. ನಿಮ್ಮಗ ಸರ್ಪ್ರೈಸ್ ಕೊಡಬೇಕಂತ ನಾವು ಒಳ್ಳೆ ಕಥೆಯ್ತಿ ನಮ್ಮಂದು. ಮಾಂತೇಶ ಕೇಕ್ಕ ತರುವದೆನಾ ಬ್ಯಾಡ ನಾನು ಆವಾಗ್ಲೇ ತರಿಸಿ ಇಟ್ಟಿದ್ದೇನೆ

ಮೈಲಾರ:– ಅಂದರೆ ಅತ್ತಿಗೆ ಕೇಳ್ಕ ನೀವು ಯಾಕೆ ತರಿಸಿದಿರಿ

ಭಾಗ್ಯಾಶ್ರೀ:– ಇವತ್ತು ನನ್ನ ಎರಡು ಮಕ್ಕಳ ಹುಟ್ಟು ಹಬ್ಬ ಕಣಪ್ಪ

ಮಾಂತೇಶ:– (ಆಚಾರ್ಯದಿಂದ) ಯಾರು ಅತ್ತಿಗೆ ನಿಮ್ಮ ಎರಡು ಮಕ್ಕಳು

ಭಾಗ್ಯಾಶ್ರೀ:– ಮತ್ಯಾರು ಕಣಪ್ಪ ನನ್ನ ದೊಡ್ಡ ಮಗ ಮೈಲಾರ ಚಿಕ್ಕ ಮಗ ಮಾಂತೇಶ

ಮೈಲಾರ:– (ದುಃಖದಿಂದ) ಅತ್ತಿಗೆ. ಎಂಥ ವಿಶಾಲವಾದ ಹೃದಯ ತಾಯಿ ನಿನ್ನದು. ನಿಮ್ಮ ಮದುವೆ ಅದ 15 ವರ್ಷದಿಂದ ನಿಮ್ಮ ಮಕ್ಕಳ್ಳಂತೆ ನಮ್ಮನ್ನು ಜೋಪಾನ ಮಾಡಿದೀಯ ತಾಯಿ. ಈ ಜನ್ಮದಲ್ಲಿ ನಿನ್ನ ಋಣ ತಿರುಸಕೆ ಆಗೋದಿಲ್ಲ ತಾಯಿ.

ಮಾಂತೇಶ:– (ದುಃಖದಿಂದ) ಅತ್ತಿಗೆ. ಬಾಲ್ಯದಲ್ಲಿ ತಂದೆ ತಾಯಿಯನ್ನು ಕಳೆದುಕೊಂಡ ಅನಾಥರಾದ ನತದೃಷ್ಟರು ನಾವು. ನೀವು ನಮ್ಮ ಅಣ್ಣನ ಮದುವೆ ಆಗಿ. ಈ ಮನೆಗೆ ಸೊಸೆ ಆಗಿ ಬಂದ 15 ವರ್ಷಗಳಿಂದ. ನಿಮ್ಮ ಮಕ್ಕಳಂತೆ ನಮ್ಮನ್ನು ಜೋಪಾನ ಮಾಡಿದ ನಿಮ್ಮ ಋಣವನ್ನು ಹೇಗೆ ತಿರುಸುದು ಅತ್ತಿಗೆ ನಾವು

ಭಾಗ್ಯಾಶ್ರೀ:– ಮಾಂತೇಶ ತಾಯಿ ಮಕ್ಕಳ್ಳ ಮಧ್ಯಾ ಋಣದ ಮಾತ್ಯಾಕಪ್ಪ. ನೀವು ವಿಬ್ಬರು ಯಾವತ್ತಿದ್ದರು ಮಕ್ಕಳು ತಾನೇ

ಮಹೇಶ:– ಭಾಗ್ಯಾಶ್ರೀ ಕೇಳಿದೇಯ ನನ್ನ ತಮ್ಮಂದಿರಾ ಮಾತ್ತುಗಳ್ಳನ್ನು. ಇಂಥ ತಮ್ಮದಿರುನ್ನು ಪಡೆದ ನಾನೇ ಪುಣ್ಯವಂತ. ಇದ್ದಕ್ಕೆಲ್ಲ ಆ ಮೈಲಾರಲಿಂಗನೆ ಕಾರಣ. ಹಾಂ ಭಾಗ್ಯಾಶ್ರೀ ನನ್ನಗೆ ತುಂಬಾ ಹಸಿವಾಗಿದೆ ಬೆಗನೇ ಹುಟ್ಟು ಹಬ್ಬ ಆಚರಿಸಿ. ಊಟ ಮಾಡೋಣ ಬರಿ (ಭಾಗ್ಯಾಶ್ರೀ ಒಳಗಡೆ ಹೋಗಿ ಕೇಳ್ಕ ತರುತಾಳೆ ಮಹೇಶ್ ಟೇಬಲ್ ತರಬೇಕು ಎಲ್ಲರೂ ಸೇರಿ ಹುಟ್ಟು ಮಾಡುವರು)

ಮಹೇಶ:– ಭಾಗ್ಯಾಶ್ರೀ ಈ ಸಂತೋಷದಲ್ಲಿ ಎಲ್ಲರೂ ಸೇರಿ ಹಾಡಿ ನಲಿಯುನವೇ

ಭಾಗ್ಯಾಶ್ರೀ:– ಅಯ್ತಿ ಬನ್ನಿ ಸ್ವಾಮಿ ಎಲ್ಲರೂ ಸೇರಿ ಹಾಡೋಣ (ಜೋಡಿ ಪದ ಮುಗಿದ ನಂತರ. ಎಲರೂ ಸೇರಿ ಒಳಗಡೆ ಹೋಗುವರು)

ರಾಜೇಂದ್ರನ ಮಹಡಿ ಮನೆ.

(ಮಹಡಿ ಮೇಲೆ ರಾಜೇಂದ್ರ ನಾಗೇಂದ್ರ ಮಹೇಂದ್ರ ಕುಳಿತ್ತೀರ ಬೇಕು. ರಾಜೇಂದ್ರ ಮಹಡಿ ಇಳಿದು ಸಿಗರೇಟ್ ಹಚ್ಚಿ. ಸಿಟ್ಟಿನಿಂದ)

ರಾಜೇಂದ್ರ :– ಮೈಲಾರ ಮೈಲಾರ (ನಕ್ಕು) ಲೆ ಮೈಲಾರ ಇಲ್ಲಿವರೆಗೂ ನನ್ನ ರಾಜಕೀಯ ಜೀವನದಲ್ಲಿ ಯಾವುದೋ ಒಂದು ನರಕುನ್ನಿ ಕೂಡ ಎದುರಾಗಿಲ್ಲ. ಆದರೆ ಕುರಿ ಕಾಯುವ ಹುಂಮ್ಮ ನನ್ನ ಮಗ ನಿನ್ನು. ನನಗೆ ಎದುರಾಗಿ ನಿಂತೀಯಾ ಬಡ ಕುನ್ನಿ. (ನಕ್ಕು ಹಲ್ಲು ಕಡಿಯುತ್ತಾ) ನನಗೆ ಎದುರಾಗಿ ನಿಂತ ನರ ಮಾನವರನ್ನು ಮಣ್ಣು

ಪಾಲು ಮಾಡಿ. ನನ್ನ ಸಹವಾಸಕ್ಕೆ ಬಂದವರನ್ನು ಸದ್ದಿಲ್ಲದಂತೆ ಸಾಯಿಸಿ ಸುಳ್ಳುವೇ ಸಿಗದಂತೆ ಸುಟ್ಟಾಕಿ ಬರುವುದೇ ಈ ರಾಜ ರಾಜೇಂದ್ರನ ಹಠ (ನಗುವಾಗ ನಾಗೇಂದ್ರ ಇಳಿದು)

ನಾಗೇಂದ್ರ:– ಹಠ (ನಕ್ಕು) ಸಾಹೇಬ್ರೆ ಹಠದ್ದ ಆಧಿಪತಿ ನಾನಾಗಿ. ನೀವು ಮಾಡುವ ಪ್ರತಿಯೊಂದು ಕಾರ್ಯಕ್ಕೆ ನಾನು ಸಹಾಯಕನಾಗಿ. ನಿಮಗೆ ಎದುರಾಗಿ ನಿಂತವರ ಚಟ್ಟ ಕಟ್ಟು ಚಕ್ರವರ್ತಿಯಾಗಿ. ನಾನೇ ಶೂರನೆಂದು ಸವಾಲ್ ಹಾಕಿದ. ಷಂಡರ ಸಿರ ತೆಗೆದು. ನಮ್ಮ ದಾರಿಗೆ ಅಡ್ಡ ಬಂದ್ದವರನ್ನು ಹರಣಪಾದ ಸೇರಿಸುವುದೇ ಈ ನಟ ಭಯಂಕರ ನರ ನಾಗರ ನಾಗೇಂದ್ರನ ಸಿದ್ಧಾಂತ (ನಗುವಾಗ ಮಹೇಂದ್ರ ಇಳಿದು)

ಮಹೇಂದ್ರ:– ಸಿದ್ಧಾಂತ (ನಕ್ಕು) ಆ ನಿಮ್ಮ ಸಿದ್ಧಾಂತದ ಸಿಡಿಲಿನ ಮಾತಿಗೆ ಬದ್ಧನಾಗಿರುತ್ತಾನೆ. ಈ ಸಾವಿರ ಅಣಿ ಬಲದ ಸರದಾರ ಬಹುದೂರ ಮಹೇಂದ್ರ. ಈ ನಮ್ಮ ಭವ್ಯ ಬಂಗ್ಲೇದ ಮೇಲೆ ಯಾವನಾದರೂ ದಡ್ಡ ನನ್ನ ಮಗ ದಾಳಿ ಮಾಡಲು ಬಂದರೆ. ಅವನ ದೇಹವನ್ನು ಧೂಳಿಪಟ ಮಾಡುವುದೇ ಈ ಮಗಧೀರ ಮಹೇಂದ್ರಣ್ಣ ಸ್ಪೆಶಾಲಿಟಿ (ನಗುವಾಗ ಕ್ರಾಂತಿವೀರ ಮಚ್ಚು ಹಿಡಿದು ಬರುವನ್ನು)

ಕ್ರಾಂತಿವೀರ:– ನಮಸ್ಕಾರ ಎಂಎಲ್ಎ ಸಾಹೇಬರಿಗೆ

ರಾಜೇಂದ್ರ:– ನಮಸ್ಕಾರ. ಬನ್ನಿ ಯಾರು ನೀವು

ಕ್ರಾಂತಿವೀರ:– ನನ್ನ ಹೆಸರು ಕ್ರಾಂತಿವೀರ ಅಂತ. ಬೆಂಗಳೂರು ಡಾನ್ ಕನ್ವರ್ ಲಾಲ್. ನನ್ನನ್ನು ಇಲ್ಲಿಗೆ ಕಳಿಸಿದ್ದಾರೆ

ರಾಜೇಂದ್ರ:– ಓ ಹೋ. ಆ ಕನ್ವರ್ ಕಳಿಸಿದ ಕ್ರಾಂತಿವೀರ ನೀವೇನಾ. ಕ್ರಾಂತಿವೀರ ಇವನು ನಾಗೇಂದ್ರ. ಅವನು ಮಹೇಂದ್ರ. ಇನ್ನು ನಾನು ಗೊತ್ತಲ್ಲ ಈ ರಾಮದುರ್ಗ ತಾಲ್ಲೂಕಿನ ಎಂಎಲ್ಎ ರಾಜೇಂದ್ರ ಅಂತ

ಕ್ರಾಂತಿವೀರ:– ನಿಮ್ಮ ಬಗ್ಗೆ ತಿಳಿದುಕೊಳ್ಳುವ ಅವಶ್ಯಕತೆ ನನಗಿಲ್ಲ. ಎಂಎಲ್ಎ ಸಾಹೇಬ್ರೆ ಅದೇನು ಕೆಲಸ ಅಂತ ಬೇಗ ಹೇಳಿ

ರಾಜೇಂದ್ರ:– ಅವಸರ ಬೇಡ ಕ್ರಾಂತಿವೀರ. ಈಗ ತಾನೆ ಬಂದಿದ್ದೀಯಾ. ನೀನು ಬಂದ ಖುಷಿಯಲ್ಲಿ ಭರ್ಜರಿಯಾಗಿ ಪಾರ್ಟಿ ಮಾಡೋಣ ಬಾ. ಡ್ರಿಂಕ್ಸ್ ಮಾಡುತ್ತಾ ಮಾತಾಡೋಣ

ಕ್ರಾಂತಿವೀರ:– ನೋ ನೆವರ್. ನಾನು ಡ್ರಿಂಕ್ಸ್ ಮಾಡುವುದಿಲ್ಲ

ನಾಗೇಂದ್ರ:– ಹಾಗಂದ್ರೆ ಹೇಗೆ ಕ್ರಾಂತಿವೀರ. ಕೆಲವೊಂದು ಸಮಾವೇಶದಲ್ಲಿ. ಡ್ರಿಂಕ್ಸ್ ಮಾಡಲೇಬೇಕು. ಇದೆಲ್ಲ ನಮ್ಮಂತ ದೊಡ್ಡವರಿಗೆ ಸಾಮಾನ್ಯ. ಹಾಂ ರಂಗ ನಿಂಗ ಪಾರ್ಟಿಗೆ ಬೇಗನೆ ಎಲ್ಲ ಅರೇಂಜ್ಮೆಂಟ್ ಮಾಡಿ

ರಂಗ ನಿಂಗ:– ಆಯ್ತು ಸಾಹೇಬ್ರೆ ಎಲ್ಲ ಅರೇಂಜ್ಮೆಂಟ್ ಮಾಡುತ್ತೇವೆ (ಪಾರ್ಟಿ ನಡೆಯುವುದು ಕ್ಲಬ್ ಡ್ಯಾನ್ಸ್ ಇರುತ್ತದೆ. ನಯನ ಬಂದು ಕ್ಲಬ್ ಡ್ಯಾನ್ಸ್ ಮಾಡಬೇಕು. ಮುಗಿದ ನಂತರ)

ಕ್ರಾಂತಿವೀರ:– ಅದೇನು ಕೆಲಸ ಅಂತ ಬೇಗ ಹೇಳಿ ಸಾಹೇಬ್ರೆ. ನಾನು ಅರ್ಜೆಂಟಾಗಿ ಬಾಂಬೆಗೆ ಹೋಗಬೇಕು

ರಾಜೇಂದ್ರ:– ಕ್ರಾಂತಿವೀರ ಅವನ ಹೆಸರು ಮೈಲಾರಂತ. ಅವನೊಬ್ಬ ಕುರಿ ಕಾಯುವ ಹಳ್ಳಿಯ ಹುಂಬ ಅವನ್ನು ನಮ್ಮ ದಾರಿಗೆ ಅಡ್ಡವಾಗಿದ್ದಾನೆ ಅಡ್ಡಾದವನನ್ನು ಅಡ ಆಡ್ಡಾ ಮಲಗಿಸಿದರೆ ನಿನಗೆ ಎಷ್ಟು ದುಡ್ಡು ಬೇಕು ಕೇಳು ಕೊಡುತ್ತೇನೆ

ಕ್ರಾಂತಿವೀರ:– ಓಕೆ ಸಾಹೇಬ್ರೆ. ಅವನ ಫೋಟೋ ಕೊಡಿ ನನಗೆ ಆ ಕೆಲಸ ಮುಗಿದ ನಂತರ ಹಣ ಕೇಳುತ್ತೇನೆ

ರಾಜೇಂದ್ರ:– ಓಕೆ ಕ್ರಾಂತಿವೀರ. ಫೋಟೋ ಅಷ್ಟೇ ಏಕೆ ಅವನ ಭಾವಚಿತ್ರ ಕೂಡ ನಮ್ಮ ಮನೆ ಸಿಸಿ ಕ್ಯಾಮೆರಾದಲ್ಲಿ ರೆಕಾರ್ಡ ಆಗಿದೆ. ವಿಡಿಯೋ ಸಮೇತ ಕೊಡುತ್ತೇವೆ. ಮಹೇಂದ್ರ ಸಿಸಿಟಿ ಪುಟೇಜ್ ಕ್ರಾಂತಿವೀರನಿಗೆ ಕೊಡು

ಮಹೇಂದ್ರ:– ಓಕೆ ಸಾಹೇಬ್ರೇ. ಕ್ರಾಂತಿವೀರ ತೆಗೆದುಕೋ ಸಿಸಿಟಿವಿ ಪುಟೇಜ್ 5 ಲಕ್ಷ ಅಡ್ವಾನ್ಸ್ ಕ್ಯಾಶ್ (ಕೊಡುವನು)

ಕ್ರಾಂತಿವೀರ:– ಓಕೆ ನಾನಿನ್ನು ಬರುತ್ತೇನೆ (ಹೋಗುವನು)

ರಾಜೇಂದ್ರ:– ಮೈಲಾರ (ನಕ್ಕು) ಇನ್ನು ಕೆಲವೇ ದಿನಗಳಲ್ಲಿ ನೀನು ಹರೋಹರ (ನಕ್ಕು)

ನಾಗೇಂದ್ರ:– ಹರೋಹರ (ನಕ್ಕು) ಹರೋಹರ ಅಷ್ಟೇ ಯಾಕೆ ಸಾಹೇಬ್ರ. ಆ ಮೈಲಾರ ಆಗಿ ಹೋಗುತ್ತಾನೆ ಸಂಹಾರ (ನಕ್ಕು)

ಮಹೇಂದ್ರ:– ಈ ಭೂಲೋಕದಿಂದ ಯಮಲೋಕಕ್ಕೆ ಪಾರ್ಸಲ್ ಆಗುತ್ತಾನೆ. ಆ ಮೈಲಾರ (ಮೂರು ಮಂದಿ ಜೋಡಿಲೇ ನಗುತ್ತಿರುವಾಗ ಮಾಂತೇಶ ಪೊಲೀಸ್ ಡ್ರೆಸ್ ನಲ್ಲಿ ಬರುವನು)

ಮಾಂತೇಶ:– ನಮಸ್ಕಾರ ಎಂಎಲ್ಎ ಸಾಹೇಬರಿಗೆ

ರಾಜೇಂದ್ರ:– ನಮಸ್ಕಾರ. ಬನ್ನಿ ಎಸಿಪಿ ಅವರೇ ಕುಳಿತುಕೊಳ್ಳಿ

ಮಾಂತೇಶ:– ಕುಳಿತುಕೊಳ್ಳೋಕೆ ಬಂದಿಲ್ಲ ಎಂಎಲ್ಎ ಸಾಹೇಬ್ರೆ. ನಿಮ್ಮ ಮಹೇಂದ್ರಣ್ಣನು ಅರೆಸ್ಟ್ ಮಾಡುವುದಕ್ಕೆ ಬಂದಿದ್ದೇನೆ

ರಾಜೇಂದ್ರ:– ಅರೆಸ್ಟ್ ಮಾಡೋದಕ್ಕೆ (ನಕ್ಕು) ಏ ಎಸಿಪಿ ಎಲ್ಲಿ ಬಂದು ಏನು ಹೇಳ್ತಾ ಇದ್ದೀಯಾ ಪರಿಜ್ಞಾನ ಇದೆಯಾ ನಿನಗೆ. ಇದು ಎಮ್ಮೆಲ್ಲೆ ರಾಜೇಂದ್ರನ ಮನೆ. ಅದು ಅಲ್ಲದೆ ಯಾವ ಕಾರಣಕಾಗಿ ಅರೆಸ್ಟ್ ಮಾಡೋದಕ್ಕೆ ಬಂದ್ದಿದೆಯಾ ಮೊದಲು ಹೇಳು. ಇಲ್ಲಿವರಿಗೂ ನಿನ್ನಂತೆ ಕಾಕಿ ಬಟ್ಟೆ ಹಾಕಿಕೊಂಡವರು ಕಾಲಿಟ್ಟಿದ್ದು ಮೊದಲನೇ ತಪ್ಪು. ನನ್ನಿಂದ ಎರಡನೇ ತಪ್ಪು ಆಗೋಕಿಂತ ಮುಂಚೆ ಇಲ್ಲಿಂದ ಹೊರಟು ಹೋಗು

ಮಾಂತೇಶ:– ಏ ಎಂಎಲ್ಎ ಸಾಹೇಬ. ಇದು ಎಂಎಲ್ಎ ಮನೆಯಾದರೇನು. ಎಂಪಿ ಮನೆಯಾದರೇನು. ಅಷ್ಟೇ ಯಾಕೆ ಪ್ರಧಾನಮಂತ್ರಿ ಮನೆಯಲ್ಲಿ ಕೂಡ ತಪ್ಪು ಮಾಡಿದವರನ್ನು ವದ್ದು ಎಳೆದುಕೊಂಡು ಹೋಗುವ ತಾಕತ್ತು ಈ ಕಾಕಿ ಬಟ್ಟೆಗಿದೆ. ಏನಂದೆ ಎಂಎಲ್ಎ ಸಾಹೇಬ. ಯಾವ ಕಾರಣಕಾಗಿ ಅರೆಸ್ಟ್ ಮಾಡೋದಕ್ಕೆ ಬಂದಿದ್ದೀಯಾ ಎಂದು ಕೇಳಿದೆಯಲ್ಲ. ಈ ಮಹೇಂದ್ರ ಒಬ್ಬ ಅಮಾಯಕ ಕಂಟ್ರಾಕ್ಟರ್ ಹರೀಶ್ ಎಂಬ ವ್ಯಕ್ತಿಯನ್ನು ಕೊಲೆ ಮಾಡಿ. ಅವನ ಹಣವನ್ನು ದೋಚಿಕೊಂಡು ಬಂದಿದ್ದಾನೆ. ಅವನ ಕೈಯಲಿ ಕೆಲಸ ಮಾಡುವ ಕೂಲಿ ಕಾರ್ಮಿಕರು ಈ ಮಹೇಂದ್ರ ಮೇಲೆ ಕಂಪ್ಲೀಟ್ ಕೊಟ್ಟಿದ್ದಾರೆ. ಆ ವಿಚಾರಕ್ಕಾಗಿ ಅರೆಸ್ಟ್ ಮಾಡೋದಕ್ಕೆ ಬಂದಿದ್ದೇನೆ

ನಾಗೇಂದ್ರ:– ತಪ್ಪು (ನಕ್ಕು) ಏ ಎಸಿಪಿ ನೀನು ಯಳೆದುಕೊಂಡು ಹೋಗುವರೆಗೂ ನಾವೇನು ಕೈ ಕಟ್ಟಿಕೊಂಡು ನಿಲ್ಲುತೆವೆಂದು ತಿಳಿದುಕೊಳ್ಳಬೇಡ.
ಯಾವುದೆ ಕೇಸು ನಡೆಯಬೇಕಾದರೆ. ಅದರ ತಕ್ಕಂತೆ ಸಾಕ್ಷಿ ಇರಬೇಕೆನ್ನುವದು ನಿನಗೆ ಗೊತ್ತಿಲ್ವೇನೋ ಖಾಕಿ

ಮಾಂತೇಶ:– ಲೆ ತಿರುಬೋಕಿ. ಈ ಖಾಯಿಯನ್ನು ಕೆಣಕಿದರೆ ಹತ್ತುವುದು ಈ ನಿಮ್ಮ ಅರಮನೆಗೆ ಬೆಂಕಿ. ಕಷ್ಟ ಇಲ್ದೆ ಭಕ್ತ ದೇವರ ಹತ್ರ ಹೋಗಲ್ಲ. ರೋಗ ಇಲ್ದೆ ಪೇಷಂಟು ಡಾಕ್ಟರ ಹತ್ರ ಹೋಗಲ್ಲ.
ಸಾಕ್ಷಿ ಇಲ್ಲದೆ ಒಬ್ಬ ಸರಕಾರದ ಅಧಿಕಾರಿ ನಿಮ್ಮಂತ ಕಚಡ ನನ್ನ ಮಕ್ಕಳ ರೌಡಿಗಳ ಹತ್ರ ಬರಲ್ಲ. ಸಾಕ್ಷಿ ಸಮೇತ ಬಂದಿದ್ದೇನೆ. ಮರ್ಯಾದಿಂದ ಸುಮ್ಮನೆ ಬಂದರೆ ಕರೆದುಕೊಂಡು ಹೋಗುತ್ತೇನೆ. ಇಲ್ಲ ಬೂಟ್ ಕಾಲಿನಿಂದ ಒದ್ದು ಈ ಊರು ತುಂಬಾ ಮೆರವಣಿಗೆ ಮಾಡುತ್ತಾ ಎಳೆದುಕೊಂಡು ಹೋಗುತ್ತಾನೆ ಈ ಸರ್ಕಾರದ ಹುಲಿ ಮಾಂತೇಶ

ಮಹೇಂದ್ರ:– ಸರಕಾರದ ಹುಲಿ (ನಕ್ಕು) ಏ ಎಸಿಪಿ ಸರ್ಕಾರದ ಹುಲಿ ಎಂದು ಸರದಾರನಂತೆ ಹಾರಾಡಬೇಡ. ನಿನ್ನಂತ ಎಷ್ಟೋ ಸರ್ಕಾರದ ಹುಲಿಗಳು ಈ ಸರದಾರನ ಶರಪಂಜರದಲ್ಲಿ ಶವಾವಾಗಿ ಹೋಗಿದ್ದಾರೆ. ಇನ್ನು ನೀನಂದ್ರೆ ನಲೆ ಮಳ್ಳ ಕುನ್ನಿ. ಕಾಕಿ ಬಟ್ಟೆ ತೊಟ್ಟ ಮಾತ್ರಕ್ಕೆ ನಾನೇ ದೊಡ್ಡ ಗಂಡಸೆಂದು ಆರ್ಯಾಡದನ್ನು ಬಿಟ್ಟು. ಸುಮ್ಮನೆ ಹೋದರೆ ಸರಿ. ಇಲ್ಲ ಅದಕ್ಕೂ ಮೀರಿ ಹದ್ದಿನಂತೆ ಹಾರಾಡಿದರೆ. ಆದೇ ಹಕ್ಕಿಪಕ್ಷಿಯಂತೆ ಯಮಲೋಕಕ್ಕೆ ಹಾರಿ ಹೋಗುತ್ತದೆ ನಿನ್ನ ಪ್ರಾಣ ಪಕ್ಷಿ

ಮಾಂತೇಶ:– ಲೇ ಮಹೇಂದ್ರ ನಿನ್ನ ಕೈಯಲ್ಲಿ ಹಾರಿ ಹೋಗೋದಕ್ಕೆ ನಾನೇನು ನಿನ್ನ ಹಾಗೆ ಮತ್ತೊಬ್ಬರು ಎತ್ತಿ ಹಾಕಿದ ಎಂಜಲ್ಲ ಕೂಳು ತಿಂದು ಬೆಳೆದವನಲ್ಲಲೇ. ಆಕಾಶಕ್ಕೆ ತಲೆಕೊಟ್ಟು ಭೂಮಿಗೆ ಬೆವರಹರಿಸಿ ಮಣ್ಣಲ್ಲಿ ಸನ್ನಾಗಿ ದುಡಿದು. ಬಿಳಿ ಜೋಳದ ರೊಟ್ಟಿ ಕೆನೆ ಮೊಸರು ತಿಂದು ಬೆಳೆದ ದೆಹಲೇ ಇದು. ಸುಮ್ಮನೆ ಮರ್ಯಾದೆಯಿಂದ ಬರುತ್ತೀಯಾ ಇಲ್ಲ ನನ್ನ ಬೂಟಗಾಲಿನ ರುಚಿ ತೋರಿಸಬೇಕ (ಎದೆ ಮೇಲೆ ಶರ್ಟ್ ಹಿಡಿಯುವನು)

ರಾಜೇಂದ್ರ:– ಲೇ ಎಸಿಪಿ ಕೈ ಬಿಡು ಅವನನ್ನು. ಇಲ್ಲ ನಿನ್ನನ್ನು ಸುಟ್ಟಹಾಕಿಬಿಡುತ್ತೇನೆ (ಬಂದೂಕು ಗುರಿ ಇಡುವನು) ಲೇ ಎಸಿಪಿ ಸುಮ್ಮನೆ ಎಗರಾಡಿ ಯಮಲೋಕಕ್ಕೆ ಹೋಗಬೇಡ. ಈ ಕೇಸು ಇಲ್ಲೆ ಮುಚ್ಚಿ ಹಾಕುವುದಕ್ಕೆ. ನಿನಗೆ ಎಷ್ಟು ಹಣ ಬೇಕು ಕೇಳು ಕೊಡುತ್ತೇನೆ. ಕೊಟ್ಟಿದ್ದನ್ನು ಹಿಸಿದುಕೊಂಡು ಈ ಕೇಸನ್ನು ಮುಚ್ಚಿ ಹಾಕಬೇಕು. ಇಲ್ಲ ಹಿಡಿದಿದ್ದೆ ಹಠ ಎಂದು ಹೋದರೆ. ಅದರ ಪರಿಣಾಮ ಬೇರೆನೇ ಇರುತ್ತದೆ

ಮಾಂತೇಶ:– ಏ ಎಂಎಲ್ಎ ಸಾಹೇಬ. ನಿನ್ನ ಲಂಚ್ ಎಂಬ ಮಂಚ ಹತ್ತಿ. ಲಂಚದ ಆಸೆಗೆ ಉಚ್ಚೆ ಕುಡಿಯೋ ಲುಚ್ಚ ಅಲ್ಲ ಈ ಮಾಂತೇಶ. ಇವನನ್ನು ಎಳೆದುಕೊಂಡು ಹೋಗಿ ಕೋರ್ಟಿಗೆ ಒಪ್ಪಿಸುತ್ತೇನೆ. ಅಲ್ಲಿ ಬಂದು ಬಿಡಿಸಿಕೊಂಡು ಹೋಗು. ಆವಾಗ ಗೊತ್ತಾಗುತ್ತೆ ನಿಮ್ಮ ರಾಜಕೀಯ ತಾಕತ್ತು. ಬಾರಲೇ ಬಾ ಬಂಡ ಬಡ್ಡಿಯ ಮಗನೇ (ಮಹೇಂದ್ರಣ್ಣನು ಎಳೆದುಕೊಂಡು ಹೋಗುವನು)

ನಾಗೇಂದ್ರ:– ಲೆ ಮಾಂತೇಶ (ನಕ್ಕು) ನಾನೇ ಸೂರನೆಂದು ಸವಾಲ್ ಹಾಕಿ ನಮ್ಮ ಬಲಗೈ ಬಂಟನಾದ ಮಹೇಂದ್ರಣ್ಣನು ಎಳೆದುಕೊಂಡು ಹೋದೆಯಾ ಕತ್ತೆ ನನ್ನ ಮಗನೇ. ನಿನ್ನ ಸೂರತನವನ್ನು ಸುಟ್ಟು ಹಾಕಿ. ನಿನ್ನ ಪ್ರಾಣವನ್ನು ಪತನಗೊಳಿಸಿ ಹದ್ದು ಕಾಗಿಗಳಿಗೆ ಆಹಾರ ಹಾಕದಿದ್ದರೆ. ನನ್ನ ಹೆಸರು ನಟ ಭೈರವ ನರ ನಾಗರ ನಾಗೇಂದ್ರನೇ ಅಲ್ಲ (ನಕ್ಕು)

ರಾಜೇಂದ್ರ:– ಲೆ ಮಾಂತೇಶ (ನಕ್ಕು) ಈ ರಾಜ ರಾಜೇಂದ್ರನ ಮನೆಗೆ ಬಂದು. ನನ್ನ ಅಂಗರಕ್ಷಕನಾದ ಮಹೇಂದ್ರಣ್ಣನು ಅರೆಸ್ಟ್ ಮಾಡಿಕೊಂಡು ಹೋದೆಯಾ ಮಗನೇ. ಇನ್ನು ನಿನಗೆ ಉಳಿಗಾಲವಿಲ್ಲ. ನಿನ್ನ ಸ್ಟೇಷನ್ ಗೆ ಬೆಂಕಿ ಹಚ್ಚಿಯಾದರೂ ಸರಿ. ನನ್ನ ಮಹೇಂದ್ರಣ್ಣನು ಹೇಗೆ ಹೊರಗಡೆ ತರ್ಬೇಕು ಎಂದು ನನಗೆ ಚೆನ್ನಾಗಿ ಗೊತ್ತು. ನಾಗೇಂದ್ರ ಬಾ ಅವನು ಕೋರ್ಟಿಗೆ ಕಳಿಸುಕಿಂತ ಮುಂಚೆ ಹೋಗಿ. ನಮ್ಮ ಮಹೇಂದ್ರಣ್ಣನು ಬಿಡಿಸಿಕೊಂಡು ಬರೋಣ ಬಾ ಹೋಗೋಣ

ನಾಗೇಂದ್ರ:– ನಡಿಯರಿ ಸಾಹೇಬರೇ. ಎಷ್ಟು ಹೆಣ್ಣಾ ಬಿದ್ದರೂ ಚಿಂತೆ ಇಲ್ಲ. ನಮಗೆ ಎದುರು ಬಂದರುವರನ್ನು ಎತ್ತಿ ಹಾಕಿ. ಮಹೇಂದ್ರಣ್ಣನು ಕರೆದುಕೊಂಡು ಬರೋಣ (ಹೋಗುವರು)

ಪ್ರವೇಶ 5

ರಸ್ತ ಪರದೆ (ಹಾಸ್ಯ)

(ನವೀನ ಹಾಡುತ್ತಾ ಬರುವನು)

ನವೀನ:– ಅಲ್ರೀ ನನ್ನ ವಾರಿಗೆ ಹುಡುಗುರು ಮದುವೆ ಮಾಡಿಕೊಂಡು ನಾಕ್ ನಾಕ್ ಮಕ್ಕಳ ಹಡದಾರ. ಅದ್ರ ಏನು ಮಾಡುದುರಿ ನನ್ನ ಹಣೆಬರಕ್ಕ ನನಗ ಇನ್ನು ಕನ್ಯಾಸಿಗವಲ್ವು. ಹಳ್ಳಿ ಹಳ್ಳಿಯಾಗ ಕನ್ಯಾ ಹುಡಕ್ಯಾಡಿ ಸಾಕಾಗಿ ನಮಗ ಒಂದು ಕನ್ಯಾ ಸಿಂಗಲಾರ್ಕ್ ಬ್ರೋಕರ್ ಗೂಳಿಗೆ ಕನ್ಯೆ ಹುಡುಕಾಕ್ ಹೇಳಿದರ. ಒಂದು ಕನ್ಯೆ ಕೊಡಸಾಕ್ 20 ಸಾವಿರ ಕೇಳತ್ತಾರಿ. ಆಯ್ತಾಳ್ರಿ ಹುಡುಕ್ರಿ ಕೊಡತ್ತೇನಂತ ಹೇಳಿದರ. ಅಡ್ವಾನ್ಸ 5,000 ಕೊಡು ಅಂತಾರ. ತೊಗೊರೆಂತ ರೊಕ್ಕ ಕೊಟ್ಟು ಕಳ್ಸಿದ್ರ ವಾರದಾಗ ಕನ್ಯಾ ಹುಡುಕಿ. ಹುಡುಗಿನ ತೋರ್ಸಕ್ಕ ಕರ್ಕೊಂಡು ಹೋಕ್ಕರ. ಹುಡುಗಿ ನೋಡಿದ ಮ್ಯಾಲ. ಇಲ್ರೀ ನಮ್ಮಗ ಹುಡುಗಿ ಮನಸ್ಸಿಗೆ ಬಂದಿಲ್ಲ. ಬ್ಯಾರೆ ಹುಡುಗಿ ನೋಡ್ರಂತ ಹೇಳಿದರ. ಮತ್ತ 5,000 ಕೇಳ್ತಾರ. ಮೊನ್ನೆ ಕೊಟ್ಟಿನಲ್ಲರಿ ಅಂತ ಹೇಳಿದರ. ಒಂದು ಕನ್ಯೆ ತೋರ್ಸಕ್ಕ ಐದು ಸಾವಿರ ಪಿಕ್ಸ್ ಅಂತಾರ. ಆಗಿದ್ದಾಗಲಿ ಅಂತ 10 ಕನ್ಯಾ ನೋಡಿದ್ಯಾ. 50,000 ರೊಕ್ಕ ಹೋದ್ರು ನನಗ ಒಂದು ಕನ್ಯಾನ ಸಟ್ಟ ಆಗ್ಲಿಲ್ಲರಿ. ಬರೆ ಗೊರಮಿಂಟ್ ನೌಕ್ರಿ ಐತೆನು. ಬೆಂಗಳೂರಾಗ ಕಂಪನ್ಯಾಗ್ ಇರತಿ ಏನ ಅಂತ ಕೇಳತ್ತಾರ. ಇದು ಅಲ್ಲದ ಮನಿ ಎಷ್ಟದವ ಹೊಲ ಎಷ್ಟ ಐತಿ ಅಂತಾರ. ಮತ್ತ ಮ್ಯಾಲ್ ನಮ್ಮ ಮಗಳಿಗೆ ಹೊರಗಿನ ಬಿಸಲ ತೋರಿಸಿಲ್ಲ ಅಂತಾರ ಕನ್ಯಾ ನೋಡಕ್ಕ ಹೋದಾಗ ಇವರ ಕಂಡೀಷನ್ ಕೇಳಿ ಕೇಳಿ ತೇಲಿ ಕೆಟ್ಟ ಸನ್ಯಾಸಿ ಆಗಬೇಕಂತ ವಿಚಾರ ಮಾಡಿ ಮಠ ಹುಡುಕೊಂತ ಹೊಂಟೀನಿ ರಿ ಎನ ಅಕೈತಿ ಆಗಲಿ (ಹೋಗುವಾಗ ಎದುರಿಗೆ ಪ್ರವೀಣ ಬರುವನು)

ಪ್ರವೀಣ:– ಯಾಕೋ ನವೀನ್ ಮಾರಿ ಸಣ್ಣಗ ಮಾಡಿ ಎಲ್ಲಿಗೆ ನಡಸಿ ಪ್ರಯಣ್ಣ

ನವೀನ:– ಬಾರೋ ಪ್ರವೀಣ. ಏನಂತ ಹೇಳೋ ನನ್ನ ಜೀವನದ ಚರಿತ್ರೆಯಾನ

ಪ್ರವೀಣ:– ಹಿಗ್ಯಾಕಂತಿಯೋ ನವೀನ. ಏನಾಗೇತಿ ಹೇಳೋ ನಿನ್ನ ಜೀವನದ ಚರಿತ್ರೆಯಾನ

ನವೀನ:– ಮತ್ತೆನು ಪ್ರವೀಣ. ನನ್ನ ವಾರಿಗೆ ಹುಡುಗುರು ಮದುವಿ ಮಾಡಕೊಂಡ ಹಾಡದಾರೋ ನಾಕ್ ನಾಕ್ ಮಕ್ಕಳನ. ನನಗ 30 ವಯಸ್ಸಾದ್ರೂ ನಮ್ಮ ಮನ್ಯಾಗ ಮಾಡವಲ್ಲರೋ ನನ್ನ ಮದುವೆನಾ. ಅದಕ್ಕ ಸಾಕಾಗಿ ಸಿಟ್ಟಿಗೆದ್ದ ಮಠ ಸೇರಬೇಕಂತೆಳಿ ಹೊಂಟ್ಟಿನೋ ಪ್ರವೀಣ

ಪ್ರವೀಣ:– ಹೇ ಹೇ ಆಗ್ಯಾಲ್ ದುಡಿಕ್ಕಿ ತಪ್ಪು ನಿರ್ಧಾರ ತೊಗೋಬ್ಯಾಡ ನವೀನ. ನಿಮಗೇನಾ ಕಡಿಮೋ ಹೆಣ್ಣ. ಅಲ್ಲೇ ನಿಮ್ಮ ಕಳ್ಳ ಬಳ್ಯಾಗ ಒಂದು ಹುಡಿಗಿ ನೋಡಿ ಮಾಡಕೋಬೇಕಿಲೋ ಮದುವಿನ

ನವೀನ:– ಕಳ್ಳು ಬಳ್ಯಾಗ (ಹನಿ ಬಡಕೊಂಡ) ಪ್ರವೀಣ ನಿ ಹೇಳಿದಂಗ ಕಳ್ಳ ಬಳ್ಯಾಗ ಹುಡುಗಿನ ಮಾಡಕೋಬೇಕಂತ ಇಲ್ಲಿವರೆಗೂ ಅವರ ಹಾಧಿಕಾದೀನೋ ಮಾರಾಯ. ನಮ್ಮ ಸೂಳ್ಳಿಕೆರಿ ಸೋಮವ್ವ ಅತ್ತಿ ಅಳಿಯ ನನ್ನ ಮಗಳ್ಳನ ನಿನ್ನಗ ಕೊಡತಿನಂತೆಳಿ ಎರಡ ವರ್ಷಾ ಹೊಲ ಮನಿ ಕೆಲಸ ಮಾಡಿಸಿಕೊಂಡು. ಇಲ್ಲ ಅಳಿಯ ನನ್ನ ಮಗಳಿಗೆ ಗೊರಮಿಂಟ್ ನೌಕ್ರಿ ಮಾಡವನ ಬೇಕಣ್ಣಕತ್ತಾಳ ಅಂತೇಳಿ ನೌಕ್ರಿದಾವಗ ಕೊಟ್ಲು. ಇನ್ ನಮ್ಮ ನೆಲಗಿ ನಿಂಗವ್ವಕ್ಕ. ತಮ್ಮ ನನ್ನ ಮಗಳ್ಳ ನಿನ್ನಗ ಫಿಕ್ಸ್ ಅಂತೇಳಿ ನಾಕ್ ವರ್ಷ ನನ್ನ ಕಡೆ ಇಂದ ಎಲ್ಲ ಕೆಲಸ ಮಾಡಸಿಗೊಂಡ. ಕೊನೆಗೆ ಒಂದು ದಿನ ಇಲ್ಲ ತಮ್ಮ ನನ್ನ ಮಗಳಿಗೆ ಕಂಪನ್ಯಾಗ ಇರಾವ್ ಬೇಕಂತಳ್ಳ ನಿನ್ನಗ ನಾನ ಒಂದು ಕನ್ಯಾ ಹುಡಿಕಿ ಕೊಡತೀನಿ ಅಂತೇಳ್ಳಿ ಕಡೆಕ್ ನಮ್ಮ ಅಕ್ಕನು ಕೈಕೋಟ್ಲು. ಅದಕ್ಕ ಕಳ್ಳ ಬಳ್ಯಾರ ಸಾವಾಸನೆ ಬ್ಯಾಡಂತಳ್ಳಿ ಸುಮ್ಮನಾಗಿ ಬಿಟ್ಟೀನಿ ನೋಡ. ಹೌದು ಮತ್ತ ನಿನ್ನ ಮದುವಿ ಆಗೇತೇನು ಪ್ರವೀಣ

ಪ್ರವೀಣ:– ಅಯೋ ಶಿವ. ಮದುವಿ ಸುದ್ದಿ ತಗಿಬ್ಯಾಡೋ ನವೀನ. ನನಗೂ ಕನ್ಯಾ ನೋಡಿ ನೋಡಿ ಸಾಕಾಗಿ ಹೋತೋ ಮಾರಾಯ. ನನ್ನ ಹಣೆಬರಕ ಒಂದು ಹುಡುಗಿನ್ನು ಸಟ್ಟ ಆಗಿಲ್ಲ ಇದು ನಮ್ಮ ಇಬ್ಬರ ಪರಸ್ಥಿತಿ ಅಷ್ಟ ಅಲೋ ನವೀನ. 2020 ಲಿದ್ದ ಇಡದ್ದ 2028 ತನಕ ಮದುವಿ ವಸಿಗೆಬಂದ ಎಲ್ಲ ಹುಡುಗರ ಪರಸ್ಥಿತಿ ಹಿಂಗ ಆಗೇತೋ ದೋಸ್ತ. ಅದಕ್ಕ ಹಿಂಗಿದ್ರ ನಮ್ಮ ಮದುವಿ ಆಗೋದಿಲ್ ಅನ್ನುದು ಗೊತ್ತಾಗಿ ಪಾನಿಪುರಿ ವ್ಯಾಪಾರ ಮಾಡಕತಿನೊ ನವೀನ ಪಾನಿಪುರಿಯಾಪುರದಾಗ ಸಾಕಷ್ಟು ರೊಕ್ಕ ಮಾಡಿಕೊಂಡು. ಈ ಪಾನಿಪುರಿ ತಿನ್ನಾಕ ಚಂದ ಹುಡುಗ್ಯಾರ ರಗಡ ಬರ್ತಾರ. ಇದರಾಗ ಒಂದು ಹುಡುಗಿ ನೋಡಿ ಸೆಲೆಕ್ಟ್ ಮಾಡಿ. ಅಕ್ಕಿನ ಲವ್ ಮ್ಯಾರೇಜ್ ಮದುವೆ ಮಾಡ್ಕೋಬೇಕಂತ ಮಾಡಿನಿ. ಮತ್ತ ನೀನು ಗ್ಯಾರೇಜ್ ಉದ್ಯೋಗದ ಚೆಲುವಿನ ಚಿತ್ತಾರ ಪಿಚ್ಚರ್ ನ್ಯಾಗ. ಐಸು ಗಣೇಶಗ ಕಾಳ ಹಾಕಿದಂಗ. ನೀನು ಯಾವುದರ ಒಂದು ಹುಡುಗಿ ಲೈನ್ ಹಾಕಿ. ಮದುವೆ ಮಾಡಿಕೊಂಡು ಬಿಡುವ ದೋಸ್ತ

ನವೀನ:– ಪ್ರವೀಣ ನೀ ಹೇಳೋದು ಕರೆತಿ. ಮೊನ್ನೆ ನನ ಗ್ಯಾರೇಜಿಗೆ ಒಂದು ಹುಡುಗಿ ಬಂದಿತ್ತು. ನೋಡಕ ಏನ ಮಸ್ತ ಇತಿತ್ತೋ ಆ ಮಾಲ. ಅಕ್ಕಿನ ನೋಡುತ್ತಾ ಜಾರಿ ಹೋಯಿತು ಈ ನನ್ನ ದಿಲ್ಲ. ನನಗು ಲವ್ ಆಗಿದ್ದಂಗ ಕಾಣದೈತಿ ಅಕಿ ಮ್ಯಾಲ. ಕುಂತ್ರು ನಿಂತ್ರು ಅಕಿದ ಆಗಿತೊ ನನಗ ಕ್ಯಾಲ. ಮಲ್ಕೊಂಡಗ ಕನಸಲ್ಲಿ ಬಂದ ಕೊಟ್ಟಂಗ ಆಗ್ತೈತೆ ಬೆಲ್ಲ. ಎಷ್ಟು ಚಂದವು ಆಕಿ ದುಂಡನಗಲ್ಲ.

ಪ್ರವೀಣ:– ಆಕಿ ಮ್ಯಾಲ ಕನಸು ಕಂಡ ಆಗಬೇಡ ಪಾಗಲ್. ಬೇಗ ಹೋಗಿ ಆ ಹುಡುಗಿನ ಮಾಡ್ಕೊಂಡ್ ಬಿಡು ಡೀಲ. ಇಲ್ಲಾಂದ್ರೆ ಬ್ಯಾರೆದವ ಹಾಕ್ತಾನ ಒಂದು ಕಾಲ. ಹೊದ ಬುದುವಾರ ಮ್ಯಾಗಳ ಕ್ರಾಸನ್ಯಾಗ ನಾಕರ್ ಮ್ಯಾಗ್ ಅಂಗಡಿ ಶುರು ಮಾಡಿದ್ನೋ ನಾಲ್ಕರ ಮ್ಯಾಲ. ಪಾನಿಪುರಿ ತಿನ್ನಾಕ್ ನನ್ನತ್ರ ಬರ್ತಾವು ಹುಡುಗಿಯರ

ಸಾಲ. ಪಾನಿಪುರಿ ತಿಂದಿಂದ ಒಂದು ಹುಡುಗಿಗೆ ಕಡೆ ನನಗ ಕೊಡಕ ರೊಕ್ಕ ಇದ್ದಿಲ್ಲ. ಮನೆಗೆ ಹೋಗಿ ಫೋನ್ ಪೇ ಮಾಡ್ತೀನಿ ನಿಮ್ಮ ನಂಬರ್ ಕೊಡ್ರಿ ಅಂತ ಕೇಳುದ್ಲು. ನಾನ ಗಟ್ಟಿ ಧೈರ್ಯ ಮಾಡಿ ನಂಬರ್ ಕೊಡಲಿಲ್ಲ. ನಂಬರ್ ಕೊಟ್ಟಿದ್ರ ಅವಾಗವಾಗ ಮಾಡಕ್ ಬರ್ತಿತ್ತು ಒಂದು ಮಿಸ್ ಕಾಲ್

ನವೀನ:– ಅಕಿ ಚಿಂತಿ ಮಾಡುವುದು ಬ್ಯಾಡೊ ಹಗಲೆಲ್ಲ. ನಿನ್ನ ಹಣೆಬರದಾಗ ಬರೆದಿದ್ರ ಆ ಹುಡುಗಿ ನಿಂಗ ಸಿಕ್ಕ ಸಿಕ್ತಾಳ. ಬಾ ಹೋಗೋನು ಮನೆ ಕಡೆ (ಹೋಗುವಾಗ ನಯನ ಟೀಚರ್ ವೇಷದಲ್ಲಿ ಬ್ಯಾಗ್ ಹಾಕಿಕೊಂಡು ಹಾಡುತ್ತಾ ಬರುವಳು)

ನಯನ:– ಅಲ್ರೀ ಚಂದಾಗ ಸಾಲಿ ಕಲಿತ ಜಾಬ್ ಮಾಡಿದರ. ಚೊಲೋ ಗಂಡು ಸಿಗತಾನಂತ ಹೇಳ್ತಾರ. ಅದಕ್ಕ ನಾನು ಟೀಚರ್ ಆದೆ. ನನ್ನ ಹಣೆ ಬರಕ್ಕ ಒಬ್ನು ಚೊಲೋ ಹುಡುಗನ ಸಿಗೋವಲ್ಲ. ಹಿಂಗಾದ್ರ ನನ್ನ ಮದುವಿ ಆಗೋದರ ಹೆಂಗೆ ಅಂತೀನಿ. ಕಾಲೇಜ್ ಕಲಿಯುವಾಗ ಒಬ್ಬ ಹುಡುಗುನ ಲವ್ ಮಾಡಬೇಕಿತ್ತು. ಲವ್ ಮಾಡಿ ಮದುವೆ ಆಗಿದ್ದಾರ. ಇಷ್ಟಕೊಂದ ಕಷ್ಟನಾ ಪಡಬೇಕಿದ್ದಿಲ್ಲ. ಈಗರ ಏನಾಗೈತ್ರಿ ಒಬ್ಬ ಚೊಲೋ ಹುಡುಗ ನೋಡಿ. ಲವ್ ಮಾಡಿ. ಲವ್ ಮ್ಯಾರೇಜ್ ಮದುವಿ ಆಗ್ತೀನಿ (ನವೀನ ಪ್ರವೀಣ ಇಬ್ಬರು ನೋಡಿ ಗಾಬರಿಯಿಂದ ಅಪ್ಪಿಕೊಂಡು)

ನವೀನ:– ಪ್ರವೀಣ ನನ ಗ್ಯಾರೇಜ್ ಬಂದ ಹುಡುಗಿ ಈಕಿನ್ನಲೆಯಪ್ಪ

ಪ್ರವೀಣ:– ಲೆ ನವೀನ ನನ್ನ ಪಾನಿಪುರಿ ತಿಂದ ನನ್ನ ನಂಬರ್ ಕೇಳಿದ ಹುಡುಗಿ ಈಕೆ ಲೇಯಪ್ಪ

ನವೀನ:– ಹಾಯ್ ಹಲೋ ರೀ ಮೇಡಂರ ಸ್ವಲ್ಪ ಹೇಳ್ರಿ ನಿಮ್ಮ ಹೆಸರ

ನಯನ:– ನನ ಹೇಸರು ತಗೊಂಡು ನೀ ಏನ ಮಾಡತಿಯೋ ಮೂಡಧಾರ

ಪ್ರವೀಣ:– ಮೂಡಧಾರ ಅನಬ್ಯಾಡ್ರಿ ಮೇಡಂರ

ಸ್ವಲ್ಪ ಹೇಳ್ರಿಲ್ಲ ನಿಮ್ಮ ಹೆಸರ

ನಯನ:– ನಯನ ಅಂತ ನನ್ನ ಹೆಸರ. ಬೆಳಗಾವಿ ನಮ್ಮೂರ. ಈ ಊರಿಗೆ ಆಗಿ ಬಂದೀನಿ ನಾ ಟೀಚರ್

ನವೀನ:– ವಾರೆವ್ಹಾ ನಯನ ಟೀಚರ್. ನೀವು ಹುಂ ಅಂತ ಒಪ್ಪಿಗೆ ಕೊಟ್ರ ಸೂಪರ್ ಇರ್ತೈತ್ರಿ ನನ್ನ ಫ್ಯೂಚರ್. ಆಗ ನಾ ನಿಮ್ಮ ಸ್ಟುಡೆಂಟ್ ನೀವೇ ನನ್ನ ಲೇಕ್ಕ್ಯರ. ಮುಂದ ನನಗ ನಿಮಗೆ ಹುಟ್ಟು ಮಕ್ಕಳಿಗೆ ಇಡೋಣ್ರೀ ನಮ್ಮೂರು ಹನುಮಪ್ಪನ ಹೆಸರ.

ನಯನ:– ನಾ ಅದಿನಿ ಕನ್ನಡ ಶಾಲೆ ಟೀಚರ್ ನಿಮ್ಮಂತ ಉಡಾಳ ಹುಡುಗರಿಗೆ ಆಗಲ್ಲ ನಾ ಫ್ಯೂಚರ್. ನನ್ನ ಕಣ್ಣು ಮುಂದೆ ಕಾಣಕತೈತಿ ಹೆಂಗೈತಿಂತ ನಿಮ್ಮ ಜೀವನದ ಪಿಚ್ಚರ್. ಹೋಗ ಹೋಗೊ ಹಳೆ ಜೋಕುಮಾರ

ಪ್ರವೀಣ:– ಅವನು ಬಿಡ್ರಿ ನನ್ ಲವ್ ಮಾಡ್ರಿ ಟೀಚರ್. ನನ್ನ ಮದುವೆ ಆದ್ರ ನಿಮ್ಮ ಜೀವನ ಆಗುತ್ತಾ ಬಲು ಸೂಪರ್. ಯಾಕಂದ್ರೆ ನನ್ನ ಪಾನಿಪುರಿ ವ್ಯಾಪಾರ ಐತ್ರಿ ಬಲು ಜೋರ. ದಿನ ವ್ಯಾಪಾರ ಮಾಡಿದ ರೊಕ್ಕ ತಂದ ನಿಮ್ಮ ಕೈಯಗ ಕೊಡುತ್ತೀನಿ. ಆಗ ನೀವು ಮಹಾರಾಣಿಯವರು ನಾವು ನಿಮ್ಮೆಜಮಾನ್ರು.

ನಯನ:–ಬಾಯಿ ಮುಚ್ಚುರು ಹುಡುಗರ. ಐತಿಲ ನಿಮ್ಮ ಮೈಯಗ ಹುಷಾರ. ಯಾಕ ಪೋಲೀಸರಿಗೆ ಹೇಳಿ ಬಡಗಿಗೆ ಹೆಚ್ಚುಸಲೇನ್ ಹೆಸ್ಸೆಖಾರ. ಸರಿ ಸರಿ ದಾರಿ ಬಿಡ್ರೀ ನನಗ ಡ್ಯೂಟಿಗೆ ಲೇಟಾಗೈತಿ (ಹೋಗುವಾಗ ನವೀನ ತಡೆದು)

ನವೀನ:– ನಿಂದ್ರಿ ಮೇಡಂರ. ಪ್ರವೀಣ ಹಿಂಗ್ ಬಿಟ್ರ ಈ ಹುಡುಗಿ ನಮ್ಮಗ ಸಿಗುದಿಲ್ಲ ಇಕಿ. ನಿನಗ ಸೀಕ್ರ ನಿನಗ. ನನಗ ಸೀಕ್ರ ನನಗ. ಇಬ್ರು ಕೂಡಿ ಈ ಹುಡುಗಿನ ಬುಡುದ ಬ್ಯಾಡ ದೋಸ್ತ

ಪ್ರವೀಣ:– ಅಯ್ತು ದೋಸ್ತ ನಿ ಹೇಳಿದಂಗ ಆಗಲ್ಲಿ ರಿ ನಯನ ಟೀಚೆರ. ನಮ್ಮಂತ ಒಳ್ಳೆ ಹುಡುಗುರು ನಮ್ಮೂರಗ ಇಲ್ರಿ. ಒಮ್ಮೆ ಫ್ರೆಂಡಾಸಿಪ್ ಆಗಿ ನೋಡ್ರಿ. ನಾವು ಹೆಂಗ ಅದೀವಿ ಅನ್ನುದು ನಿಮ್ಮಗ ಗೊತ್ತಾಕೈತಿ

ನಯನ:– (ಸ್ವ)ಈ ಹುಡುಗುರು ನನ್ನ ಬಾಳ ಲವ್ ಮಾಡಕತ್ತಾರ. ಸ್ವಲ್ಪ ದಿನ್ ಇವರ ಫ್ರೆಂಡಾಸಿಪ್ ಮಾಡಿ. ಇವರ ಬಗ್ಗೆ ಎಲ್ಲ ತಿಳ್ಕಕೊಂಡು. ಯಾರ ಚೊಲೋ ಅದರ. ಅವರನ ಮದುವಿ ಅದ್ರ ಅಯ್ತು (ಪ್ರ) ನೋಡು ಹುಡುಗುರ ಫ್ರೆಂಡಾಸಿಪ್ ಅಷ್ಟ ಬೇರೆನ್ನುಲ್ಲಾ

ಪ್ರವೀಣ:– ಅಯ್ತ್ರಿ ಟೀಚರ್ ನೀವು ಹೇಳಿದಂಗ ಆಗಲಿ

ನಯನ:– ಅಯ್ತ ಹುಡುಗುರು ನಾ ಇನ್ ಬರಲ್ಯ

ನವೀನ:– ನಿಂದ್ರಿ ಹುಡುಗಿ ಈ ನಿಮ್ಮ ಫ್ರೆಂಡಾಸಿಪ್ ಗೋಸ್ಕರ ಒಂದು ಹಾಡ ಹಾಡುದು ಬಿಟ್ಟು ಅಂಗ ಹೊಂಟೀಯಲ್ಲ. ಈ ನಿಮ್ಮ ಗೆಳೆಯರ ಕೈಹಿದು ಒಂದು ಹಾಡರ ಹಾಡ ಹುಡುಗಿ

ನಯನ:– ಅಯ್ತ ಹುಡುಗುರ ಬರಿ ಎಲರೂ ಸೇರಿ ಹಾಡೋಣ (ಜೋಡಿ ಪದ ಮುಗಿದ ನಂತರ) ಆಯ್ತು ನಾ ಇನ್ ಬರ್ತೀನಿ ಬಾಯ್ (ಹೋಗುವಳು)

ಪ್ರವೀಣ:– ಹೋಗ ಹುಡುಗಿ ಹೋಗು ಊರಿಗೆ ಬಂದಾಕ ನೀರಿಗೆ ಬರದ ಇರ್ತಿಯೇನು ನೋಡಿ ಬಿಡ್ತೀವಿ. ನವೀನ ಈಗಂತೂ ಪಾಸ್ ಆಗಿ ಹೋಗ್ಯಾಳ ಹೋಗ್ಲಿ. ಇನೊಮೆ ಸಿಕ್ಕಾಗ ನೋಡಿಕೊಳೋತ ಅಂತ ಬಾ ಹೋಗೋಣ (ಇಬ್ಬರು ಹೋಗುವರು)

ರಸ್ತ ಪರದೆ

(ಕ್ರಾಂತಿವೀರ ಬೆನ್ನ ಇಂದೇ ಮಚ್ಚು ಇಟ್ಟಕೊಂಡು ಕೈಯಲ್ಲಿ ಸೂಟ್ಕೇಸ್ ಹಿಡಿದುಕೊಂಡು ಮುಂದೆ ಬರುವನು. ಮೈಲಾರ ಕೊಡ್ಲಿ ಹಿಡಿದು ಹಿಂದೆ ಬರುವನು)

ಮೈಲಾರ:– ಲೇ ನಿಂತುಕೊಂಳಲೆ ಕಳ್ಳ ನನ್ನ ಮಗನೆ. ಒಂದು ಹೆಜ್ಜೆ ಮುಂದೆ ಇಟ್ಟರೆ ನಿನ್ನ ರುಂಡ ತುಂಡಗಿ ಬೀಳುವದು ಈ ರುದ್ರ ಭೂಮಿಯಲ್ಲಿ

ಕ್ರಾಂತಿವೀರ:– ರುದ್ರ ಭೂಮಿಯಲ್ಲಿ (ನಕ್ಕು) ಲೇ ಮಳ್ಳ. ಇದು ಮಡಿದ್ದವನಿಗೆ ರುದ್ರ ಭೂಮಿ. ನನ್ನಂತ ನಟ ನಾಯಕನಿಗೆ ರಂಗ ಭೂಮಿ. ಈ ರಂಗ ಭೂಮಿಯನ್ನು ರಂಗೇರಿಸಿದ ಈ ಕತರ್ನಾಕ್ ಕಿಲ್ಲರ್ ಕ್ರಾಂತಿವೀರನನ್ನು ತಡೆದು ನಿಲ್ಲಿಸಿದ ನೀನ್ಯಾರಲೇ ಕುತ್ತೆ

ಮೈಲಾರ:– ಏನಂದೆ ಲೇ ಕತ್ತೆ. ಕವಿಗಳು ಕಲೆಗಳು. ಯೋಗಿಗಳು ತ್ಯಾಗಿಗಳು. ಸಾದು ಸಂತರು ಸ್ರೇಷ್ಟ ಶರಣ್ಣರು. ವೀರರು ಶೂರರು. ಮೈಮ್ಮ ಪುರುಷರು. ಮಹಾ ಮಾಹಾತ್ಮರು ಜನಸಿದ ಈ ಕನ್ನಡ ನಾಡಲಿ ಹುಟ್ಟಿ. ಕಂಡ ಕಂಡವರ ಹಣ್ಣನ್ನು ಕಿತ್ತುಕೊಂಡು ತಿನ್ನುವ ಹೆಂತ ಹೆಂತ ಖದೀಮರು ಹುಟ್ಟಿದಿರಲೇ ಈ ಪವಿತ್ರವಾದ ಕನ್ನಡ ನಾಡಿನಲ್ಲಿ

ಕ್ರಾಂತಿವೀರ:– ಕನ್ನಡ ನಾಡಿನಲ್ಲಿ (ನಕ್ಕು) ಲೇ ಕನ್ನಡ ನಾಡಿನ ಬಗ್ಗೆ ಕನ್ನವರಿಸೀತಿರುವ ಕತ್ತೆ. ಈ ನಾಡಿನಲ್ಲಿ ಹುಟ್ಟಿದವರು ಎಲ್ಲರೂ ಸ್ರೇಷ್ಟರೆಂದು ತಿಳುದುಕೊಳ್ಳಬೇಡ. ದಿನ ನಿತ್ಯ ಹಣ್ಣದ ಅಹಂಕಾರದಿಂದ ಹುಟ್ಟ ಹುಟ್ಟ ಬಾಲ್ಲಾಕಿಯರ ಮೇಲೆ ಅತ್ಯಾಚಾರ ಮಾಡಿದ ಹಲ್ಲಕಟ್ಟ ಸೂಳೆಮಕ್ಕಳು ಹುಟ್ಟಿದು. ಇದೆ ನಿನ್ನ ನಾಡಿನಲ್ಲಿ. ಹೆತ್ತ ಮಗಳ ದೇಹದ ಮೇಲೆ ಮೋಹ ಮಾಡಿ. ಅವಳನ್ನು ತನ ಕಾಮದಟ್ಟಕೆ ಕರೆದಾಗ ಅವಳು ಒಪಿಕೊಳ್ಳದಿದ್ದರೆ. ಹೆತ್ತ ಮಗಳನ್ನು ಅತ್ಯಾಚಾರ ಮಾಡಿದ ರಂಡಿ ಮಕ್ಕಳು ಹುಟ್ಟಿದು. ಇದೆ ನಿನ್ನ ನಾಡಿನಲ್ಲಿ. ಚಿಕ್ಕಪ್ಪನ ಮಗಳಾಗಲಿ. ದೊಡ್ಡಪ್ಪನ ಮಗಳಾಗಲಿ. ಅಥವಾ ತನ್ನ ಒಡಹುಟ್ಟಿ ತಂಗಿ ಆದರೂ ಸರಿ. ತನ್ನ ಕಾಮದಟ್ಟಕಾಗಿ ಅವಳಿಗೆ ಪ್ರೀತಿ ಪ್ರೇಮದ ಹುಚ್ಚು ಹಿಡಿಸಿ ಊರು ಬಿಟ್ಟು ಓಡಿಸಿಕೊಂಡು ಹೋದ ಬೋಸುಡಿ ಮಕ್ಕಳು ಹುಟ್ಟಿದು. ಇದೆ ನಿನ್ನ ನಾಡಿನಲ್ಲಿ ಎನ್ನುವದು ನೆನಪಿರಲ್ಲಿ ನಿನಗೆ

ಮೈಲಾರ:– ಲೇ ಮೂರ್ಖ. ನೀನು ಹೇಳಿದಾಗೆ ಅಂತ ಕೆಟ್ಟ ನನ್ನ ಮಕ್ಕಳು ಹುಟ್ಟಿದ ನಾಡು ಇದು ಆಗಿರಬಹುದು. ಆದರೆ ಹಂತ ಲೂಚ್ಚಾ ನನ್ನ ಮಕ್ಕಳನ್ನು ಚಪ್ಪಲಿಂದ ಹೊಡೆದು. ಅವರಿಗೆ ತುತ್ತು ಅನ್ನ ಕೂಡ ಸಿಗದಂತೆ ಬೈಸ್ಕಾರ ಹಾಕಿದ್ದಾರೆ ಈ ನಮ್ಮ ಸಮಾಜದಲ್ಲಿ. ಲೇ ಅಂತ ಕೆಟ್ಟ ನನ್ನ ಮಕ್ಕಳ ದುಷ್ಟಗುನ್ನವನ್ನು ಎತ್ತಿ ಹೇಳಿ ನಾನು ಒಳ್ಳೆವನ್ನು ಎಂದು ಜಂಬಕೋಚಿಕೊಳ್ಳಬೇಡ. ಕಂಡ ಕಂಡ ಹೆಣ್ಣಿನ ಮೇಲೆ ಅತ್ಯಾಚಾರ ಮಾಡಿದ

ಕಾಮದ ಕತ್ತೆ ನನ್ನ ಮಕ್ಕಳ ಗಂಡು ನರವನ್ನು ಕಿತ್ತು ಷಂಡರಾಗಿ ಮಾಡಿ. ಅವರಿಗೆ ಗಲ್ಲು ಶಿಕ್ಷೆ ಕೊಡಿಸಿದೆ ಈ ನಮ್ಮ ಸಾಮಾಜ

ಕ್ರಾಂತಿವೀರ:– ಸಾಮಾಜ (ನಕ್ಕು) ಲೇ ಈ ಸಮಾಜದ ಬಗ್ಗೆ ಅಕ್ಕರೆ ಇಂದ ಮಾತ್ತನಾಡು ಅವಿವೇಕಿ. ಮದುವೆ ಆಗಿ ಗಂಡನ ಮನೆ ಸೇರಬೇಕಾದ ನನ್ನ ತಂಗಿ. ತನ್ನ ಹುಟ್ಟು ಹಬ್ಬವಿದೆ ಎಂದು ದೇವಸ್ಥಾನಕ್ಕೆ ಹೋಗಿ ಬರುತೇನಂತ ಹೋದ ನನ್ನ ತಂಗಿಯನ್ನು ಹಾಡ ಹಾಗಲ್ಲಲೇ ಅತ್ಯಾಚಾರ ಮಾಡಿ ಸಾಯಿಸಿ ಬಿಟ್ಟರು. ಸತ್ತ ನನ್ನ ತಂಗಿಯ ಶವವನ್ನು ಹೆಗಲ ಮೇಲೆ ಹೊತ್ತುಕೊಂಡು ಹೋಗಿ. ನನ್ನ ಕೈಯಾರೆ ಮಣ್ಣು ಮಾಡಿ ಬಂದೆ. ನನ್ನ ತಂಗಿಗೆ ಆದ ಅನ್ಯಾಯಕ್ಕೆ. ನ್ಯಾಯವೇ ಸಿಗಲ್ಲಿಲ. ಆಗ ಎಲ್ಲಿ ಹೋಗಿತ್ತು ಈ ನಿನ್ನ ಸಮಾಜ. ಕಾಲೇಜಿಗೆ ಹೋಗಿ ಬರುವ ಯುತ್ತಿಯನ್ನು ಹೊತ್ತುಕೊಂಡು ಹೋಗಿ ಬಲಾತ್ಕಾರ ಮಾಡಿ ಸಾಯಿಸಿ. ನಾವೇ ರಾಜರೆಂದು ರಾಜ್ ರೋಷವಾಗಿ ಮೆರೆತ್ತಿರುವಾಗ. ಸತ್ತು ಹೋದ ಆ ಸೌಜನ್ಯ ಎಂಬ ಯುವತ್ತಿಗೆ 12 ವರ್ಷವಾದುರು ಎಲ್ಲಿ ನ್ಯಾಯ ಸಿಕ್ಕಿದೆ ಈ ನಿನ್ನ ಸಮಾಜದಲ್ಲಿ. ಅಷ್ಟೇ ಯಾಕಲೇ. ಒಬ್ಬ ಚಲನಚಿತ್ರ ನಟ ನಮ್ಮ ಮನೆ ಹೆಣ್ಣು ಮಕ್ಕಳಿಗೆ ಅಸಲಿಲ್ ವಿಡಿಯೋಗಳನ್ನು ಕಳಿಸಿ ಚೂಡಾಸಿದವನಿಗೆ ಸ್ವಲ್ಪ ಬುದ್ದಿ ಹೇಳ್ರಿ ಎಂದು ತನ್ನ ಅಂಗರಕ್ಷರನ್ನು ಕಳಿಸಿದಾರೆ. ಅಕಸ್ಮಿಕವಾಗಿ ಅವನ ಪ್ರಾಣ್ಣ ಹೋದರೆ. ಅವನನ್ನು ನೀನೆ ಕೋಲೆ ಮಾಡಿಸಿದಿಯಂದು ಅಮಾಯಕಣಾದ ಆ ನಟನನ್ನು ಅನ್ಯಾಯದಿಂದ ಎರಡು ವರ್ಷ ಜೇಲ್ಲಿನಲಿ ಹಾಕಿ. ಅವರು ಮಾಡಿದ ಧಾನ ದರ್ಮವನ್ನು ಲೇಕಿಸದೆ ಅವರ ಹೆಸರಿಗೆ ಮಸಿ ಬಡದರಲ್ಲ ಆಗ ಎಲ್ಲಿ ಹೋಗಿತ್ತು ಈ ನಿನ್ನ ಸ್ರೇಷ್ಟ ಸಮಾಜ. ಬಡತನ ಎಂಬ ಬೆಂಕಿಯಲ್ಲಿ ಬೆಂದು ಬೆಟ್ಟದ ಆಕಾರವಾಗಿ ಬೆಳೆದು. 25 ವರ್ಷ ಜೀವನದಲ್ಲಿ ಬರುವ ಕಷ್ಟಕ್ಕೆ ಚಾಲೆಂಜ್ ಹಾಕಿ. ಚಾಲೆಂಜಿಂಗ್ ಸ್ಟಾರ್ ಆಗಿ ಬೆಳೆದ ನಿಂತರಲ್ಲ ಆ ತೂಗುದೀಪ ಶ್ರೀನಿವಾಸ್ ಮೀನಮ್ಮನವರ ವಂಶದ ಕುಡಿ ದರ್ಶನ್. ಅರ್ಥಾತ್ ಮೈ ಫೇವರೆಟ್ ಹೀರೋ **D boss** ಆವರು ಮಾಡಿದ್ದು ಕಾನೂನು ರೀತಿಯಲ್ಲಿ ತಪ್ಪಾಗಿರಬಹುದು. ಆದರೆ ಆ ರೇಣುಕ ಸ್ವಾಮಿ ಎಂಬ ಕಾಮುಕನಂತವರು ಇನ್ನೂ ಈ ಸಮಾಜದಲ್ಲಿ ಬದುಕಿರಬೇಕಾ. ನೋಡು ಈ ದುನಿಯಾದಲ್ಲಿ ಬದುಕಬೇಕಾದರೆ ದುಡ್ಡು ಇರಬೇಕು. ದುಡ್ಡು ಇದ್ದರೆ ಸಾಕು ದಡ್ಡನು ಕೂಡ ದೊಡ್ಡವನಾಗುತ್ತಾನೆ ಎನ್ನುವದು ನಿನಗೆ ಗೊತ್ತಿಲ್ವಾ

ಮೈಲಾರ:– ನೋಡು ನೀನು ಹೇಳುವ ಪ್ರತಿಯೊಂದು ಮಾತಿನಲ್ಲಿ ಅರ್ಥವಿದೆ. ಆದರೆ ನೀನು ಏನ ಮಾಡ್ತಾ ಇದ್ದೀಯಾ. ದಿನನಿತ್ಯ ಬಡವರು ದುಡಿದು ಕೂಡಿಟ್ಟ ದುಡ್ಡನ್ನು ಕದ್ದುಕೊಂಡು ಹೋಗುತ್ತಿರುವೆಯಲ್ಲ ನಾಚಿಕೆ ಆಗೋದಿಲ್ವ ನಿನ್ನ ಹೇಸಿ ಜನ್ಮಕ್ಕೆ

ಕ್ರಾಂತಿವೀರ:– ನಾಚಿಕೆ (ನಕ್ಕು) ಎ ಹುಚ್ಚ ನನಗ್ಯಾಕೆ ನಾಚಿಕೆಯಾಗಬೇಕು. ನೀನು ಹೇಳಿದಾಗೆ ನಾನೇನು ಬಡವರ ದುಡ್ಡನ್ನು ಕದ್ದು ತಂದಿಲ್ಲ. ಬಡವರ ಬದುಕನ್ನು ಬಂಡವಾಳ ಮಾಡಿಕೊಂಡು ದುಡ್ಡಿನ ದರ್ಪದಿಂದ ಬಡವರ ಮೇಲೇ ದರ್ಬಾರ್ ಮಾಡುವ. ಆ ಸೊಕ್ಕಿನ ಶ್ರೀಮಂತರ ಶ್ರೀಮಂತಿಕೆಯನ್ನು ನಾಸಿ ಮಾಡಬೇಕೆಂದು. ಅವರ ಹಣವನ್ನು ಕದ್ದೋಯಿತ್ತಿದ್ದೇನೆ. ಈ ಹಣದಿಂದ ನಾನೇನೂ ಶ್ರೀಮಂತನಾಗೋದು ಕಲ್ಲ. ತುತ್ತು ಅನ್ನಕ್ಕಾಗಿ ಅಂಗ್ಲಾಚುವ ಅನಾಥರಿಗೆ ಹಂಚುವದಕಾಗಿ ತಗೆದುಕೊಂಡು ಹೋಗುತ್ತಿದ್ದೇನೆ. ಇದಕ್ಕೆ ನೀನೇನಾದರೂ ಅಡ್ಡ ಬಂದರೆ. ನಿನ್ನ ಪರಿಣಾಮ ಬೇರೇನೆ ಇರುತ್ತದೆ

ಮೈಲಾರ:– ಶಭಾಷ್ ಕ್ರಾಂತಿವೀರ ಶಭಾಷ್. ನಿನ್ನ ವೇಶ ಬೋಶನ ನಿನ್ನ ವರ್ತನೆ ನೋಡಿ. ನೀನೊಬ್ಬ ಕೆಟ್ಟ ರೌಡಿ ಎಂದು ಬಾವಿಸಿದೆ. ಆದರೆ ನೀನೊಳ್ಳಗೆ ಇಷ್ಟೊಂದು ಧಾನ ಧರ್ಮಗಳು ಧರ್ಮದ ನುಡಿಗಳು ಅಡಿಗಿದ್ದಾವೆಂದು ನನಗೆ ಗೊತ್ತಿರಲಿಲ್ಲ. ಹಾಂ ಕ್ರಾಂತಿವೀರ ನನ್ನ ಹೆಸರು ಮೈಲಾರ ಅಂತ. ನಾನೊಬ್ಬ ಕುರಿ ಕಾಯೋ ಕುರಿಗಾರ. ನನಗೆ ಎಲ್ಲರೂ ಕುರಿಗಾರ ಮೈಲಾರ ಎನ್ನುತ್ತಾರೆ. ಹಾಂ ಕ್ರಾಂತಿವೀರ ನಿನ್ನ ಊರು ಯಾವೂರು ನಿನ್ನ ಒಡಹುಟ್ಟಿದವರು ಎಲ್ಲಿದ್ದಾರೆ

ಕ್ರಾಂತಿವೀರ:–(ಸ್ವ) ಓ ಹೋ ಆ ಎಂ ಎಲೆ ರಾಜೇಂದ್ರ ನನಗೆ ಸುಪಾರಿ ಕೊಟ್ಟಿದ್ದು ಇವನೇ ಇರಬೋವುದು (ಪ್ರ) ಮೈಲಾರ ನನಗೆ ಊರು ಅಂತನ್ನು ಇಲ್ಲ. ಯಾರು ಒಡಹುಟ್ಟಿದವರು ಇಲ್ಲ. ಇರುವ ಒಬ್ಬಳು ತಂಗಿಯನ್ನು ಯಾರೋ ನರಹಂತಕ್ಕರು ಬಲ್ತಕರಿಸಿ. ಇದೆ ಕತ್ತಿಂದ ಸಾಯಿಸಿ ಬಿಟ್ಟರು. ನನ್ನ ತಂಗಿಯ ಜೀವನ ಬಲ್ಲಿ ತಗೆದುಕೊಡಂತೆ. ಎಷ್ಟೋ ಹೆಣ್ಣು ಮಕ್ಕಳನ್ನು ಬಾಳ್ಳನ್ನು ಹಾಳು ಮಾಡಿದ ಆ ಅರಾಮ್ ಕೋರರ ಅಂಗಾಗವನ್ನು ತುಂಡು ತುಂಡಗಿ ಕತ್ತರಿಸಿ ಹಾಕಿ. ಆ ನರಹಂತ್ತಕ್ಕರ ಬಿಸಿ ರಕ್ತವನ್ನು ಕುಡಿಯುದ್ಧಕ್ಕೆ ಕಾರ್ತಿಕ್ ಎಂಬ ನಾಮ್ಮವನ್ನು ತೀರಸ್ಕರಿಸಿ. ಕ್ರಾಂತಿವೀರ ಎಂದು ಕ್ರಾಂತಿಯ ಹೆಸರು ದರೆಸಿಕೊಂಡು ಈ ಕತ್ತಿಯನ್ನು ಹಿಡಿದು ಸಹೋದರಿ ಸೇಡಿಗಾಗಿ ಕತ್ತಿ ಹಿಡಿದ ಕ್ರಾಂತಿವೀರಣಾಗಿ ನಿಂತಿದ್ದೇನೆ ಈ ಪ್ರಪಂಚದಲ್ಲಿ

ಮೈಲಾರ:– ಕ್ರಾಂತಿವೀರ. ಇದ್ದರೆ ಇರಬೇಕು ನಿನಂತ ಕೆಚ್ಚೆದೆಯ ವೀರ್. ನಿನ್ನಂತ ವೀರ್ ಪ್ರತಿಯೊಂದು ಊರಲ್ಲಿ ಇದ್ದರೆ ಕೋಲೆ ಸುಲುಗೆ ದರೋಡೆ ಅನ್ಯಾಯ ಅತ್ಯಾಚಾರ ಆಗುವದ್ದಿಲ್. ಕ್ರಾಂತಿವೀರ ನನ್ನಿಂದ ನಿನಗೇನಾದರೂ ಸಹಾಯ ಬೇಕಾದರೆ ಕೇಳು. ಈ ಸಮಾಜದಲ್ಲಿದ್ದ ದುಷ್ಟ ಶ್ರೀಮಂತರ ಅಟ್ಟಹಾಸವನ್ನು ಮಟ್ಟ ಹಾಕೋದಕ್ಕೆ ಸದಾ ಸಿದ್ದ ಈ ಕುರಿಗಾರ ಮೈಲಾರ

ಕ್ರಾಂತಿವೀರ:– (ಸಿಟ್ಟಿನಿಂದ) ಲೇ ಶ್ರೀಮಂತ ನರಕ್ಕುನಿಗಳೆ ನಿಮ್ಮಂತ ಸೊಕ್ಕಿನ ಶ್ರೀಮಂತರ ಸೊಕ್ಕಡಗಿಸಲು ಈ ಭೂಲೋಕದಲ್ಲಿ ಮತ್ತೆ ಹುಟ್ಟಿ ಬಂದಿದ್ದಾರೆ ಈ ಕ್ರಾಂತಿವೀರ ಮೈಲಾರ (ನಕ್ಕು)

ಮೈಲಾರ:– ಕ್ರಾಂತಿವೀರ ಬಾ ನಮ್ಮ ಮನೆಗೆ ಹೋಗೋಣ. ನನ್ನ ಅಣ್ಣ ತಮ್ಮನಿಗೆ ನಿನ್ನನ್ನು ಪರಿಚಯ ಮಾಡಿಕೊಡುತ್ತೇನೆ

ಕ್ರಾಂತಿವೀರ: ಮೈಲಾರ ನನಗೆ ಸ್ವಲ್ಪ ಕೆಲಸವಿದೆ. ಮತ್ತೊಂದು ಸಲ ನಿಮ್ಮ ಮನೆಗೆ ಬಂದು ಭೇಟಿಯಾಗುತ್ತೇನೆ. ಈಗ ನಾನು ಬರುತ್ತೇನೆ (ಇಬ್ಬರು ಎದುರು ಬದರು ದಿಕ್ಕಿನಲ್ಲಿ ಹೂಗುವರು)

ಪ್ರವೇಶ 6

ಮಹೇಶನ ಮನೆ

ಭಾಗ್ಯಾಶ್ರೀ:– (ಕೈಯಲ್ಲಿ ಗುಳಿಗಿ ಹಿಡಿದುಕೊಂಡು ಪ್ರವೇಶಿಸಿ ದುಃಖದಿಂದ) ತಂದೆ ಮೈಲಾರಲಿಂಗಶ್ವರ ಎಂಥ ವಿಕ್ಕಟ್ಟವದ ಸುಳಿಯಲ್ಲಿ ಸಿಲುಕಿಸಿ ಬೀಟ್ಟೆ ನನ್ನನು. ಒಂದು ಕಡೆ ನೋಡಿದರೆ ನನಗೆ ಮಕ್ಕಳಿಲ್ಲ ಎನ್ನುವ ಸಂಕಟ. ಇನೊಂದು ಕಡೆ ನೋಡಿದರೆ. ಎಲ್ಲಿ ನನಗೆ ಮಕ್ಕಳ್ಳಾದರೆ ನನ್ನನೇ ತಾಯಿ ಎಂದುಕೊಂಡ ನನ್ನ ಮೈದುನರಾದ. ಆ ನನ್ನ ಮಕ್ಕಳಿಗೆ ಎಲ್ಲಿ ನನ್ನಿಂದ ತಾಯಿ ಪ್ರೀತಿ ಕೊರತೆ ಆಗುತ್ತದ್ದೆಯನ್ನುವ ಸಂಕಟ. ಅಪ್ಪ ಜಗದೊಡೆಯ ನಿನ್ನ ಅನುಗ್ರಹದಿಂದ ನನ್ನ ಹೊಟ್ಟೆಯಲ್ಲಿ ಮೂರು ತಿಂಗಳು ಕೂಸು ಬೆಳೆಯುತ್ತಿದೆ ತಂದೆ. ಆದರೆ ನನ್ನ ಹೊಟ್ಟೆಯಲ್ಲಿ ಇರುವ ಮಗು ಈ ಭೂಮಿಗೆ ಬಂದರೆ. ನನ್ನ ಕಣ್ಮುಂದೆ ಇರುವ ಎರಡು ಮಕ್ಕಳು ಎಲ್ಲಿ ನನ್ನಿಂದ ದೂರವಾಗುತ್ತಾರೆ ಎಂದು ಭಯವಾಗುತ್ತಿದೆ ನನಗೆ. (ದುಃಖದಿಂದ) ಬೇಡ. ನನಗೆ ಈ ಮಗು ಬೇಡ. ನನಗೆ ಮಕ್ಕಳಿಲ್ಲದಿದ್ದರೂ ಪರವಾಗಿಲ್ಲ. ಈ ಸಮಾಜ ನನಗೆ ಬಂಜೆ ಎಂದರೂ ಪರವಾಗಿಲ್ಲ. ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗುವಿಗಾಗಿ ನನ್ನ ಮೈದುನರಾದ ಮೈಲಾರ ಮಾಂತೇಶನಂತ ಮಕ್ಕಳನು ಕಳೆದುಕೊಳ್ಳುವುದಕ್ಕೆ ನನ್ನಿಂದ ಸಾಧ್ಯವಿಲ್ಲ ತಂದೆ ಸಾಧ್ಯವಿಲ್ಲ. ನಾನು ತಾಯಿಯಾಗಿರುವ ಈ ವಿಷಯ ಮನೆಯವರಿಗೆ ಗೊತ್ತಾಗುವಕ್ಕಿಂತ ಮುಂಚೆ. ಈ ಗುಳಿಗೆಯನ್ನು ಸೇವಿಸಿ. ನನ್ನ ಗರ್ಭದಲ್ಲಿ ಇರುವ ಕೂಸನ್ನು ಗರ್ಭದಲ್ಲೆ ಸಾಯಿಸಲೇಬೇಕು (ಗುಳಿಗೆನು ಸೇವಿಸುತ್ತಿರುವಾಗ ಮಹೇಶ ಬರುವನು)

ಮಹೇಶ:– ಯಾಕೆ ಬಾಗ್ಯಶ್ರೀ ಗುಳಿಗೆಯನ್ನು ಸೇವಿಸುತ್ತಿದ್ದೀಯ ನಿನ್ನು

ಭಾಗ್ಯಶ್ರೀ:–(ತಡವರಿ ಸುತ್ತ) ಅದು ಅದು. ನನಗೆ ಸ್ವಲ್ಪ ಹುಷಾರೀಲ್ ರೀ. ಅದಕ್ಕೆ ಗುಳಿಗೆಯನ್ನು ಸೇವಿಸ್ತಾ ಇದ್ದೆ ಅಷ್ಟೇ

ಮಹೇಶ:– ಅಲ್ಲ ಭಾಗ್ಯಶ್ರೀ ಗುಳಿಗೆಯನ್ನು ಸೇವಿಸಿದರೆ ಹುಷಾರಾಗುವುದೇ. ನಿನಗೆ ಹುಷಾರಿಲ್ಲ ಅನ್ನುವ ವಿಷಯ ಮೈಲಾರನಿಗೆ ಏನಾದರೂ ಗೊತ್ತಾದರೆ. ಅವನು ನನ್ನನ್ನು ಬೈಯುತ್ತಾನೆ. ಬಾ ಭಾಗ್ಯಶ್ರೀ ಬೇಗನೆ ಆಸ್ಪತ್ರೆಗೆ ಹೋಗಿ ತೋರಿಸಿಕೊಂಡು ಬರೋಣ (ಕೈಹಿಡಿವನ್ನು) ಯಾಕೆ ಭಾಗ್ಯಶ್ರೀ ಸುಳ್ಳು ಹೇಳ್ತಾ ಇದ್ದೀಯ ನಿನ್ನು. ನಿನ್ನ ಮೈ

ಕೂಡ ಸ್ವಲ್ಪನೂ ಬಿಸಿ ಇಲ್ಲ. ಹಾಂ ಗುಳಿಗೆನ್ನು ಕೊಡು ಇಲ್ಲಿ (ಗುಳಿಗೆಯನ್ನು ಕಸಿದುಕೊಂಡು ನೋಡಿ ಗಾಬರಿಯಿಂದ) ಇದೇನು ಭಾಗ್ಯಶ್ರೀ ನೀನು ಮಾಡುತ್ತಿರುವ ಕೆಲಸ. ಇದು ಯಾವ ಗುಳಿಗೆ ಎಂದು ಗೊತ್ತಾ ನಿನಗೆ. ಹೇಳು ಭಾಗ್ಯಶ್ರೀ ಹೇಳು ಯಾಕೆ ಈ ಗುಳಿಗೆಯನ್ನು ಸೇವಿಸ್ತಾ ಇದ್ದೀಯ ನೀನು

ಭಾಗ್ಯಶ್ರೀ:–(ತಡವರಿಸುತ್ತಾ) ರೀ ಅದು ಅದು ಏನು ಇಲ್ಲ ರೀ

ಮಹೇಶ:– ಭಾಗ್ಯಶ್ರೀ ನನ್ನಿಂದ ಏನು ವಿಷಯವನ್ನು ಮುಚ್ಚಿ ಇಡತ್ತಾ ಇದ್ದೀಯ ನೀನು

ಭಾಗ್ಯಾಶ್ರೀ:– ಹಾಗೇನಿಲ್ಲರೀ ನಿಮ್ಮಿಂದ ನಾನು ಯಾವ ವಿಷಯವನ್ನು ಮುಚ್ಚಿ ಇಡುತ್ತಿಲ್ಲ. ನನಗೆ ಸ್ವಲ್ಪ ಜ್ವರ ಬಂದಿದ್ದವು ಅಷ್ಟೇ

ಮಹೇಶ:– ಭಾಗ್ಯಶ್ರೀ ಪದೇ ಪದೇ ಸುಳ್ಳು ಹೇಳ್ಳ ಬೇಡ. ಇದು ಶಿಶು ಹತ್ಯೆ ಮಾಡುವ ಗುಳಿಗಿ. ಈ ಗುಳಿಗೆಯನ್ನು ನೀನು ಸೇವಿಸ್ತಾ ಇದ್ದೀಯ ಎಂದರೆ. ಇದರ ಅರ್ಥ ಏನು. ಅಂದರೆ ನೀನು ತಾಯಿ ಆಗ್ತಾಯಿದ್ದೀಯ

ಭಾಗ್ಯಾಶ್ರೀ:– ಹೌದು ರೀ

ಮಹೇಶ:– ಹಾಗಿದ್ದರೆ ಈ ವಿಷಯವನ್ನು ಎಲ್ಲರಿಗೆ ಹೇಳಬೇಕು ತಾನೆ. ಅದನ್ನು ಬಿಟ್ಟು ಈ ಗುಳಿಗೆಯನ್ನು ಯಾಕೆ ಸೇವಿಸ್ತಾ ಇದ್ದೀಯಾ

ಭಾಗ್ಯಾಶ್ರೀ:– ಸ್ವಾಮಿ ದಯವಿಟ್ಟು ಆ ವಿಷಯ ಮಾತ್ರ ಕೇಳಬೇಡಿ ನಿಮ್ಮಗೆ ಕೈ ಮುಗಿಯುತ್ತೇನೆ

ಮಹೇಶ:– ಭಾಗ್ಯಶ್ರೀ ಆ ವಿಷಯವನ್ನು ನೀನು ಹೇಳದಿದ್ದರೆ ಈ ನಿನ್ನ ಮನೆ ದೇವ ಮೈಲಾರಲಿಂಗನ ಆಣೆಯಾಗಿದೆ ನಿನಗೆ

ಭಾಗ್ಯಾಶ್ರೀ:– (ದುಃಖದಿಂದ) ಹೌದು ರೀ. ನಾನೀಗ ತಾಯಿ ಆಗ್ತಾಯಿದ್ದೀನಿ. ನನ್ನ ಹೊಟ್ಟೆಯಲ್ಲಿ ಮೂರು ತಿಂಗಳ ಕೂಸು ಬೆಳಿತಾ ಇದೆ. ಆದರೆ ನಾಳೆ ನನ್ನ ಹೊಟ್ಟೆಯಲ್ಲಿ ಮಗು ಹುಟ್ಟಿಂದ ಆ ಮಗುವಿನ ಮೇಲೆ ಮಮತೆ ಹೆಚ್ಚಾಗಿ. ನನ್ನ ಮೈದುರನ್ನು ನಾನು ತಿರಸ್ಕರಿಸಿದರೆ. ಅವರೆಲ್ಲಿ ನನ್ನಿಂದ ದೂರವಾಗುತ್ತಾರೆ ಎಂದು ಭಯವಾಗಿ. ಅದಕ್ಕೆ ನನ್ನ ಹೊಟ್ಟೆಯಲ್ಲಿರುವ ಮಗು ಅಲ್ಲೇ ಸಾಯಲಿ ಅಂತ. ನಾನು ಈ ಗುಳಿಗೆಯನ್ನು ಸೇವಿಸ್ತಾ ಇದ್ದೀನಿ ರೀ

ಮಹೇಶ:– ಭಾಗ್ಯಶ್ರೀ. ಎಂತ ಹುಚ್ಚ ಕಣೇ ನೀನು. ಇದು ಎಂಥ ಸಂತೋಷದ ವಿಷಯ ಗೊತ್ತಾ. ಈ ವಿಷಯವನ್ನು ಎಲ್ಲರಿಗೆ ಹೇಳುವುದನ್ನು ಬಿಟ್ಟು ಈ ರೀತಿ ಶಿಶುಹತ್ಯೆ ಮಾಡೋದು ಸರಿಯಲ್ಲ

ಭಾಗ್ಯಾಶ್ರೀ:– ಬೇಡ ರೀ ಬೇಡ. ಈ ವಿಷಯವನ್ನು ಯಾರಿಗೂ ಹೇಳೋದು ಬೇಡ. ಮೇಲಾಗಿ ನನ್ನ ಮೈದುನರಿಗೆ ಏನಾದರೂ ನೀವು ಹೇಳಿದರೆ ನನ್ನ ಮೇಲೆ ಆಣೆಯಾಗಿದೆ ನಿಮಗೆ. ಯಾಕಂದ್ರೆ ನನ್ನ ಗರ್ಭದಲ್ಲಿರುವ

ಕುಸು ಗರ್ಭದಲ್ಲಿ ಸತ್ತು ಹೋಗಲಿ ಅಂತ. ಎರಡು ದಿನಗಳಿಂದ ನಾನು ಗುಳಿಗೆಯನ್ನು ಸೇವಿಸ್ತಾ ಇದ್ದೀನಿ ರೀ (ಅಷ್ಟರಲ್ಲಿ ಮೈಲಾರ ಕೊಡ್ಲಿ ಹಿಡಿದು. ಮಾಂತೇಶ ಸಾದಾ ಡ್ರೆಸ್ಸಿನಲ್ಲಿ ಬರುವರು)

ಮೈಲಾರ:– ಅಣ್ಣ ಅತ್ತಿಗೆ

ಭಾಗ್ಯಾಶ್ರೀ:– ಭಾ ಮೈದುನ

ಮೈಲಾರ:– ಯಾಕ ಅತ್ತಿಗೆ ನಿಮ್ಮ ಕಣ್ಣಲ್ಲಿ ನೀರು. ಅಣ್ಣ ಏನಾದರೂ ನಿಮ್ಮ ಮೇಲೆ ಕೈ ಮಾಡಿದನೇ ಯಾಕಣ್ಣ ನನ್ನ ಅತ್ತಿಗೆ ಮೇಲೆ ಏನಾದರೂ ಕೈ ಮಾಡಿದ್ಯಾ ನೀನು

ಮಾಂತೇಶ:– ಹಾಗೇನಾದರೂ ಇದ್ದರೆ ಹೇಳು ಅತ್ತಿಗೆ. ನಿಮ್ಮ ಕೈಯಲ್ಲಿ ಬಿಸಿ ಬಿಸಿ ಊಟ ತಿಂದು ತುಂಬಾ ಕೊಬ್ಬು ಬಂದಿದೆ ಇವನಿಗೆ. ಎರಡು ದಿನ ಊಟ ಕೊಡದೆ ಮನೆಯಿಂದ ಆಚೆ ಇಟ್ಟರೆ. ಅವಾಗ ಸರಿಯಾಗಿ ಬುದ್ಧಿ ಬರುತ್ತದೆ ಈ ಯಜಮಾನನಿಗೆ

ಮಹೇಶ:– ಏ ತಮ್ಮಂದಿರ ನನಗೆ ಊಟ ಕೊಡದಿದ್ದರೂ ಪರವಾಗಿಲ್ಲ. ಮೊದಲು ನಿಮ್ಮ ಅತ್ತಿಗಿನ ಕೇಳರೋ

ಮಾಂತೇಶ:– ಹೇಳು ಅತ್ತಿಗೆ ಏನಾಯ್ತಿ ಎಂದು

ಭಾಗ್ಯಾಶ್ರೀ:– ಅದು ಅದು. ಏನು ಇಲ್ಲ ಮಾಂತೇಶ

ಮೈಲಾರ:– ಯಾಕ ಅತ್ತಿಗೆ. ನಮುಂದೆ ಹೇಳದೆ ರಹಸ್ಯವಾಗಿ ಇಡುವಂತ ವಿಷಯ ಏನೋ ಅಡಗಿದೆ ನಿಮ್ಮಿಬ್ಬರಲ್ಲಿ. ನೀವು ಕಣ್ಣೀರು ಹಾಕಲು ಕಾರಣವಾದ ಆ ವಿಷಯವನ್ನು ನೀವು ಹೇಳದಿದ್ದರೆ. ಈ ನಿಮ್ಮ ಮೈದುನರ ಮೇಲೆ ಆಣೆಯಾಗಿದೆ

ಭಾಗ್ಯಶ್ರೀ:– ಬೇಡ ಮೈಲಾರ ಬೇಡ. ಆನೆಯನ್ನು ಹಾಕಬೇಡಪ್ಪ

ಮೈಲಾರ:– ಮತ್ಯಾಕ್ಕೆ ಸಂಕೋಚ ಅತ್ತಿಗೆ. ಹೇಳಿ ಏನು ವಿಷಯ ಅಂತ

ಮಹೇಶ:– ಅವಳೇಲಿ ಹೇಳುತ್ತಾಳೆ ಮೈಲಾರ. ಅವಳಿಗ ತಾಯಿಯಾಗುತ್ತಿದ್ದಾಳೆ

ಮಾಂತೇಶ:– ಇದೇನು ಅಣ್ಣ. ಈ ಸಂತೋಷದ ವಿಷಯವನ್ನು ಹೇಳೋದಕ್ಕೆ ಇಷ್ಟೊಂದು ಭಯವ ನಿಮಗೆ

ಮಹೇಶ:– ಆದರೆ ಏನು ಪ್ರಯೋಜನ ತಮ್ಮಂದಿರ. ನನಗೆ ಮಕ್ಕಳು ಬೇಡ ಅಂತ ಶಿಶು ಹತ್ಯೆ ಮಾಡುವ ಗುಳಿಗೆಯನ್ನು ಸೇವಿಸ್ತಾ ಇದ್ದಾಳೆ ಇವಳು

ಮೈಲಾರ:– ಅತ್ತಿಗೆ (ಚಿರಿ) ಇದೇನು ಅತ್ತಿಗೆ ಅಣ್ಣ ಹೇಳುತ್ತಿರುವ ಮಾತು. ಈ ಮಾತು ಸತ್ಯವೇ ಹೇಳು ಅತ್ತಿಗೆ ಹೇಳು

ಮಹೇಶ:– ಮೈಲಾರ ನೀವೆಷ್ಟು ಕೂಗಾಡಿ ಚಿರಾಡಿ ಕೇಳಿದರು. ಅವಳು ಹೇಳುವುದಿಲ್ಲ. ಯಾಕಂದರೆ. ನಾಳೆ ನನ್ನ ಹೊಟ್ಟೆಯಲ್ಲಿ ಮಕ್ಕಳು ಹುಟ್ಟಿದರೆ. ನನ್ನ ಮೊದಲನೆ ಮಕ್ಕಳಾದ ಮೈದುನರ ಮೇಲೆ ಮಮಕಾರ ಕಡಿಮೆ ಆಗುತ್ತೆ ಎಂಬ ಭ್ರಾಂತಿಯಲ್ಲಿ ಇದ್ದಾಳೆ ಇವಳು. ಹೀಗಿರುವಾಗ ಆ ವಿಷಯವನ್ನು ನಿಮಗೆ ಎಲ್ಲಿ ಹೇಳುತ್ತಾಳೆ

ಮಾಂತೇಶ:– ಅತ್ತಿಗೆ. ನಿಮಗೆ ಮಕ್ಕಳಾದರೆ. ನಮ್ಮ ಮನೆ ದೇವನಾದ ಆ ಮೈಲಾರಲಿಂಗನಿಗೆ. ಆ ಕೂಸಿನ ಜವಳವನ್ನು ತೆಗಿಸುತ್ತೇವೆ ನಾವಿಬ್ಬರು ಅಣ್ಣ ತಮ್ಮಂದಿರು ದಿನಮಸ್ಕಾರ ಹಾಕುತ್ತೇವೆ ಎಂದು. ನಾವು ಬೇಡಿಕೊಂಡಿದ್ದೇವೆ. ಆದರೆ ನಮ್ಮಿಂದ ಈ ವಿಷಯವನ್ನು ಮುಚ್ಚಿಟ್ಟು. ವಿಷದ ಗುಳಿಗೆಯನ್ನು ಸೇವಿಸಿ ನಮ್ಮ ಬೇಡಿಕೆಯನ್ನು ಸುಳ್ಳು ಮಾಡುತ್ತಿದ್ದೀಯಾ ಅತ್ತಿಗೆ ನೀನು

ಭಾಗ್ಯಾಶ್ರೀ:– ಹಾಗೇನು ಇಲ್ಲ ಮೈದುನರ. ನನ್ನ ಮಕ್ಕಳಾಗಿ ನೀವಿಬ್ಬರು ಇದ್ದಿರಲ್ಲ ನನಗೆ ಅಷ್ಟೇ ಸಾಕು. ನಾಳೆ ನಿಮಗೆ ಮದುವೆಯಾಗಿ ಮಕ್ಕಳಾಗ್ತರಲ್ಲ. ಅವೇ ನನ್ನ ಮಕ್ಕಳೆಂದು ತಿಳಿದು ನಾನು ಜೋಪಾನ ಮಾಡುತ್ತೇನೆ

ಮೈಲಾರ:– ಅತ್ತಿಗೆ ಎಂಥ ವಿಶಾಲವಾದ ಹೃದಯ ತಾಯಿ ನಿನ್ನದು. ಮದುವೆಯಾಗಿ ಮನೆಗೆ ಬಂದ ಮರುದಿನವೇ ಗಂಡನ ತಲೆಯನ್ನು ಕೆಡಿಸಿ. ನಾವು ಬೇರೆ ಹೋಗೋಣ ಅಂತ. ಮದುವೆಯಾದ ಮರುದಿನ ಬೇರೆ ಆಗುವ ಹೆಣ್ಣು ಮಕ್ಕಳೇ ತುಂಬಿದರೆ ಅತ್ತಿಗೆ ಈ ಸಮಾಜದಲ್ಲಿ. ಹಂತದರಲ್ಲಿ ನನ್ನ ಮೈದುನರು ನನ್ನ ಮಕ್ಕಳು ಎಂದು ಭಾವಿಸುವ ಈ ನಿನ್ನ ಗುಣಕ್ಕೆ ಆ ದೇವಾನು ದೇವತೆಗಳು ಸಾಟಿ ಇಲ್ಲ ಅತ್ತಿಗೆ ಸಾಟಿ ಇಲ್ಲ

ಭಾಗ್ಯಾಶ್ರೀ:– ಇರಲಿ ಬಿಡು ಮೈಲಾರ. ಅದು ಎಲ್ಲ ಯಾಕೀಗ. ಮೈಲಾರ ನನ್ನ ಚಿಕ್ಕಪ್ಪನ ಮಗಳು ಮಧು ಅಂತ ಇದ್ದಾಳೆ. ಅವಳನ್ನು ನಿನಗೆ ಮದುವೆ ಮಾಡಬೇಕೆಂದು ನಾನು ನಿಮ್ಮನ್ನ ನಿರ್ಧಾರ ಮಾಡಿದ್ದೇವೆ. ಮಧುನ ನೋಡೋದಕ್ಕೆ ನಿನ್ನನ್ನು ಕರೆದುಕೊಂಡು ಬರುತ್ತೇವೆ ಅಂತ ನಾನು ಮೊನ್ನೆ ಅವರಿಗೆ ಹೇಳಿದ್ದೇನೆ. ಇವತ್ತು ಒಳ್ಳೆ ದಿವಸ ಇದೆ ಅಂತೆ. ಅದಕ್ಕೆ ನೀನು ಬೇಗ ರೆಡಿಯಾಗು ನಾವೆಲ್ಲರೂ ಹೋಗಿ ಮಧುನನ್ನು ನೋಡಿಕೊಂಡು ಬರೋಣ. ಮಾಂತೇಶ ನೀನು ರೆಡಿಯಾಗಪ್ಪ. ರೀ ಯಜಮಾನ್ರೆ ನೀವು ಬೇಗ ರೆಡಿಯಾಗ್ರಿ

ಮಾಂತೇಶ:– ಯಾಕತ್ತಿಗೆ ನಮಗೆ ಬೇಗ ಮದುವೆನೂ ಮಾಡಿ ನಮ್ಮನ್ನು ದೂರ ಮಾಡಬೇಕೆಂದು ಅಂದುಕೊಂಡಿದ್ದೀರಾ ನೀವು. ಅದು ಈ ಜನ್ಮದಲ್ಲಿ ಸಾಧ್ಯವಿಲ್ಲ. ನಮಗೆ ಮದುವೆನೂ ಬೇಡ. ಈ ಸಂಸಾರ ಜೀವನದ ಜಂಜಾಟವು ಬೇಡ. ನಮ್ಮ ಕೊನೆ ಉಸಿರು ಇರೋವರೆಗೂ ನಿಮ್ಮ ಮಕ್ಕಳಿಗೆ ಇದ್ದು ಬಿಡುತ್ತೇವೆ

ಭಾಗ್ಯಶ್ರೀ:– ಯಾಕ್ರಪ್ಪಾ ಹಾಗಂತೀರಾ. ನಿಮ್ಮನ್ನು ಬಿಟ್ಟು ನಾವು ಎಲ್ಲಿ ಹೋಗೋದಿಲ್ಲ. ನಿಮ್ಮ ಜೊತೆಯಲ್ಲಿ ಇರುತ್ತೇವೆ ಐಯಿತೆ. ಇದರಲ್ಲಿ ದೂರ ಆಗುವ ಮಾತೇಕೆ.

ಮೈಲಾರ:– ಹೌದು ಅತ್ತಿಗೆ. ಮಾಂತೇಶ ಹೇಳುವ ಮಾತು ಸತ್ಯವಿದೆ. ಮದುವೆಯಾದ ಮರುಕ್ಷಣವೇ ಹೆಂಡತಿಯ ಮಾತು ಕೇಳಿ ಅಣ್ಣ–ಅತ್ತಿಗೆಯರನ್ನು ಬಿಟ್ಟು ಎಷ್ಟೋ ಜನ ಬೇರೆ ಹೋಗಿದ್ದಾರೆ ಈ ಸಮಾಜದಲ್ಲಿ. ಅಷ್ಟೇ ಯಾಕತ್ತಿಗೆ. ಹೆಂಡತಿಯ ಮಾತು ಕೇಳಿ ಹೆತ್ತ ತಂದೆ ತಾಯಿಗಳನ್ನು ರುದ್ರಶ್ರಮಕ್ಕೆ ಅನಾಥಾಶ್ರಮಕ್ಕೆ ಸೇರಿಸಿ. ಅವರಿಗೆ ಮಕ್ಕಳಿದ್ದರೂ ಕೂಡ. ಅವರು ಅನಾಥರಾಗಿ ಸಾಯುವಂತೆ ಮಾಡಿದ್ದರೆ ಎಷ್ಟು ಜನ ಈ ಸಮಾಜದಲ್ಲಿ. ಹೆಂಡತಿಯರ ಮಾತು ಕೇಳಿ ಒಡಹುಟ್ಟಿದ ಅಣ್ಣತಮ್ಮಂದಿರಿಗೆ ಅಂಗೈ ಅಗಲ ಆಸ್ತಿಯನ್ನು ಕೊಡದೆ. ಮನೆಯಿಂದ ಆಚೆ ಹಾಕಿದ್ದಾರೆ ಎಷ್ಟೋ ಜನ ಈ ಸಮಾಜದಲ್ಲಿ. ಮುಪ್ಪಿನ ಕಾಲದಲ್ಲಿ ನಾನು ಇವರ ಸೇವೆ ಮಾಡಬೇಕಾಗುತ್ತದೆ ಎಂದು ಹೊಂಚು ಹಾಕಿ. ಸಂಚು ಮಾಡಿ ಗಂಡನ ತಲೆಯನ್ನು ಕೆಡಿಸಿ. ಹೆತ್ತ ತಾಯಿ ತಂದೆಗಳನ್ನು ಮನೆಯಿಂದ ಹೊರಹಾಕಿಸ್ತಾರೆ ಈ ದುಷ್ಟ ಗುಣದ ಹೆಣ್ಣು ಮಕ್ಕಳು. ಅದರಂತೆ ನಾವು ಕೂಡ ಮದುವೆಯಾಗಿ ಹೆಂಡತಿಯ ಮಾತು ಕೇಳಿ ನಿಮ್ಮಿಬ್ಬರನ್ನು ಕಳೆದುಕೊಳ್ಳುವುದಕ್ಕೆ ನಮ್ಮಿಂದ ಸಾಧ್ಯವಿಲ್ಲ

ಮಾಂತೇಶ:– ಹೌದು ಅತ್ತಿಗೆ. ಹೆತ್ತ ಮಕ್ಕಳಿದ್ದರೂ ಕೂಡ ತಂದೆ ತಾಯಿಗಳು ತುತ್ತು ಅನ್ನಕ್ಕಾಗಿ ಬೀದಿ ಬೀದಿಯಲ್ಲಿ ಭಿಕ್ಷೆ ಬೇಡವಂತಾಗಿದೆ. ಎಷ್ಟು ತಂದೆ ತಾಯಿಗಳ ಪರಿಸ್ಥಿತಿ ಈ ಸಮಾಜದಲ್ಲಿ. ಎಲ್ಲರೂ ಅಣ್ಣ ತಮ್ಮಂದಿರು ಒಗ್ಗಟ್ಟಿನಿಂದ ಕೂಡಿ ಬಾಳಿದರೆ ಈ ಸಮಾಜವೇ ಸ್ವರ್ಗ ಲೋಕವಾಗುತ್ತಿತ್ತು. ತಮ್ಮ ತಂದೆ ತಾಯಿಗಳನ್ನು ತಾವು ಜೋಪಾನವಾಗಿ ನೋಡಿಕೊಂಡಿದ್ದರೆ. ಇವತ್ತು ಈ ಪ್ರಪಂಚದಲ್ಲಿ ಸಾವಿರಾರು ರುದ್ರಶ್ರಮಗಳು ಅನಾಥಾಶ್ರಮಗಳು ಇರುತ್ತಿರಲಿಲ್ಲ ಅತ್ತಿಗೆ. ಇದೊಂದು ಸ್ವಾರ್ಥ ತುಂಬಿದ ಕಲಿಯುಗ. ಇಂಥ ಕಲಿಯುಗದಲ್ಲಿ ಮೈದುನರಿಗಾಗಿ ಮಕ್ಕಳನ್ನು ಬೇಡಯನ್ನುವ ನಿನ್ನಂತ ತಾಯಿಯನ್ನು ಕಳೆದುಕೊಳ್ಳುವ ನತದೃಷ್ಟರು ನಾವಾಗೋದಿಲ್ಲ

ಮಹೇಶ:– ಅಂದರೆ ನೀವಿಬ್ಬರೂ ಮದುವೆ ಆಗೋದಿಲ್ಲವ (ಮುಗುಳು ನಗೆ ಇಂದ ಮೀಸೆ ಮೇಲೆ ಕೈ ಹಾಕಿ) ಹಾಗಾದ್ರೆ ಇರ್ಲಿ ಬಿಡ್ರಿ ನಾನೇ ಇನ್ನೊಂದು ಮದುವೆ ಆಗ್ತೀನಿ

ಭಾಗ್ಯಶ್ರೀ:– ಯಾಕ್ರೀ ಯಜಮಾನ್ರೆ. ನಾನೊಬ್ಬಳೇ ಸಾಕಾಗಿಲ್ವಾ. ನಿಮಗೆ ಇನ್ನೊಂದು ಮದುವೆ ಬೇಕಾ

ಮೈಲಾರ:– ಅಣ್ಣ ಅತ್ತಿಗೆ ಮಾತನಾಡುತ್ತಾ ನಿಂತು ಸಮಯ ಕಳೆಯುವುದು ಬೇಡ. ಬೇಗ ಆಸ್ಪತ್ರೆಗೆ ಹೋಗಿ ಮಗುವನ್ನು ಉಳಿಸಿಕೊಳ್ಳುವ ವ್ಯವಸ್ಥೆ ಮಾಡೋಣ ನಡೆಯಿರಿ (ಅಷ್ಟರಲ್ಲಿ ಮಧು ಬ್ಯಾಗ್ ಹಿಡುಕೊಂಡು ಬರುವಳು)

ಮಧು:– ಅಕ್ಕ ಅಕ್ಕ

ಭಾಗ್ಯಶ್ರೀ:– ಭಾ ತಂಗಿ. ಇದೇನು ಮಧು ಇದ್ದಕ್ಕಿದ್ದಾಗೆ ಫೋನ್ ಮಾಡಿದೆ ಹಾಗೆ ಬಂದು ಬಿಟ್ಟಿಯಲ್ಲ

ಮಧು:– (ದುಃಖಿಸುತ್ತ) ಅಕ್ಕ ಅದು ಅದು

ಭಾಗ್ಯಶ್ರೀ:– ಯಾಕೆ ಮಧು ದುಃಖಿಸುತ್ತಿರುವೆ

ಮಧು:–(ದುಃಖಿಸುತ್ತ) ಅಕ್ಕ ನಾನು ಕಾಲೇಜಲಿ ಇರುವಾಗ ಅಪ್ಪ ಅಮ್ಮ ಕಾರ ಎಕ್ಸಿಜೇಂಟಾನಲ್ಲಿ ತೀರಿ ಹೋದರು. ನನಗಂತ ಯಾರು ಇಲ್ಲ. ಅದಕ್ಕೆ ಇಲ್ಲಿಗೆ ಬಂದೆ ಅಕ್ಕ. ನಿಮ್ಮತ್ರ ನಾನು ಸ್ವಲ್ಪ ದಿನ ಇರಬಹುದ ಅಕ್ಕ

ಮಹೇಶ:– ಅದಕ್ಕೆ ಏನಾಯ್ತುತಮ್ಮ ಇಲ್ಲಿ ನೀನು ಆರಾಮವಾಗಿರಬಹುದು. ಇದು ನಿಮ್ಮ ಅಕ್ಕನ ಮನೆ ಅಲ್ಲವೇ. ಭಾಗ್ಯಶ್ರೀ ಯಾರು ಇವರು

ಭಾಗ್ಯಶ್ರೀ:– ರೀ ನಾನು ನಿಮಗೆ ಆವಾಗಲೇ ಹೇಳಿದಿನಲ್ಲ ಮಧು ಅಂತ. ಇವಳೇ ಅವಳು

ಮಹೇಶ:– ಹೌದೇ ಒಳ್ಳೆದಾಯಿತು. ಭಾಗ್ಯಶ್ರೀ ನಿನ್ನ ತಂಗಿ. ನನ್ನ ತಮ್ಮ ಮೈಲಾರನ ಮದುವೆ ಆಗಲು ಒಪ್ಪಿಗೆ ಇದೆಯಾ ಕೇಳು

ಭಾಗ್ಯಶ್ರೀ:– ಮಧು ನಿನ್ನ ಒಂದು ಮಾತು ಕೇಳಬೇಕು ಅಂದುಕೊಂಡಿದ್ದೇನೆ ಕೇಳಲೇ

ಮಧು:– ಅದೇನಂತ ಕೇಳು ಅಕ್ಕ

ಭಾಗ್ಯಶ್ರೀ:– ಮಧು ನಿನ್ನನ್ನು ನನ್ನ ಮೈದುನ ಮೈಲಾರನಿಗೆ ತೆಗೆದುಕೊಳ್ಳಬೇಕೆಂದು ನಿಮ್ಮ ಅಪ್ಪನ ಅಮ್ಮನ ಜೊತೆ ನಾನು ಮಾತನಾಡದೆ. ನಿನ್ನನ್ನು ನೋಡಿದಕ್ಕೆ ಸೈತ ಈ ವಾರದಲ್ಲಿ ನಿಮ್ಮೂರಿಗೆ ಬರಲು ರೆಡಿಯಾಗಿದ್ದೇವು ನಾವು. ಆದರೆ ಕಾರಣಾಂತರಗಳಿಂದ ನೀನು ಇಲ್ಲಿಗೆ ಬಂದುಬಿಟ್ಟಿದ್ದೀಯ. ಅದಕ್ಕೆ ನನ್ನ ಮೈದುನ ಮೈಲಾರನನ್ನು ಮದುವೆಯಾಗಲ್ಲು ಒಪಿಕೋಳ್ಳುತ್ತೀಯ ಎಂದು ಕೇಳಿದೆ

ಮಧು:– ಅಕ್ಕ ತಂದೆ ತಾಯಿಯನ್ನು ಕಳೆದುಕೊಂಡು ತಬ್ಬಲಿಯಾದ ಈ ಅನಾತೆಗೆ. ಈ ಮನೆಯ ಸೊಸೆಯಾಗುವ ಸೌಭಾಗ್ಯವನ್ನು ಕೊಟ್ಟು. ನನ್ನನ್ನು ಈ ಮನೆ ತುಂಬಿಸಿಕೊಳ್ಳುತ್ತೇನೆ ಅಂತ ಹೇಳುತ್ತಿಲ್ಲ ಎಂಥ ದೊಡ್ಡ ಮನಸ್ಸು ಅಕ್ಕ ನಿಮ್ಮಂದು. ಆಯಿತು ಅಕ್ಕ ನಿಮ್ಮ ಆಸೆಯಂತೆ ಆಗಲಿ. ನಿಮ್ಮ ಮೈದುನನು ನಾನು ಮದುವೆಯಾಗಲು ಒಪ್ಪಿಕೊಳ್ಳುತ್ತೇನೆ. ಆದರೆ ಅವರು ನನ್ನ ಮದುವೆಯಾಗಲು ಒಪ್ಪಿಕೊಳ್ಳಬೇಕಲ್ಲ

ಭಾಗ್ಯಶ್ರೀ:– ಮಧು ಅದರ ಬಗ್ಗೆ ಚಿಂತಿ ನಿನಗೆ ಬೇಡ. ನನ್ನ ಮೈದುನರು ಯಾವತ್ತು ನನ್ನ ಮಾತು ಮೀರುವುದಿಲ್ಲ. ಅವನಿಗೆ ನಾನು ಹೇಳುತ್ತೇನೆ. ಮೈದುನ ಈ ನನ್ನ ತಂಗಿ ಮದುವೆಯಾಗಲು ಒಪ್ಪಿಗೆ ಇದೆಯಾ ನಿನಗೆ

ಮೈಲಾರ:– ಆಯ್ತು ಅತ್ತಿಗೆ ನಿಮ್ಮಿಬ್ಬರಿಗೂ ಒಪ್ಪಿಗೆ ಇದ್ದರೆ ಸಾಕು. ನಿಮ್ಮ ಆದ್ನಂತೆ ಆಗಲಿ

ಮಹೇಶ:– ಮತ್ತೇಕೆ ತಡ. ಇವತ್ತು ತುಂಬಾ ಒಳ್ಳೆ ದಿನ ಏದೆ. ನಿಶ್ಚಿತರದ ಕಾರ್ಯ ಮಾಡಿ ಮುಗಿಸೋಣ. ಮಾಂತೇಶನಗು ಕನ್ಯಾ ಸಿಕ್ಕ ತಕ್ಷಣ ಒಂದು ಒಳ್ಳೆ ಮುಹೂರ್ತ ನೋಡಿ ಇಬ್ಬರಿಗೂ ಮದುವೆ ಮಾಡಿಬಿಡೋಣ ಸರಿನಾ. ಮಾಂತೇಶ ನಿಶ್ಚಿತಾರ್ಥ ಕಾರ್ಯಕ್ಕೆ ಬೇಕಾಗುವ ಎಲ್ಲಾ ಸಾಮಗ್ರಿಗಳನ್ನು ತಗೆದುಕೊಂಡು ಬಾ ಹೋಗು

ಮಾಂತೇಶ:– ಆಯ್ತು ಅಣ್ಣ. ನಾನು ಈಗಲೇ ಹೋಗಿ ಇಬ್ಬರಿಗೂ ಬಟ್ಟೆ ಉಂಗುರವನ್ನು ಮತ್ತು ಮಾಲೆಯನ್ನು ತೆಗೆದುಕೊಂಡು ಬರುತ್ತೇನೆ (ಹೋಗುವನು)

ಮಹೇಶ:– ಭಾಗ್ಯಶ್ರೀ ಹನಿ ಅಕ್ಕಿ ಕೂಡಿ ಬಂದರೆ ಹಡೆದವರು ಬೇಡ ಎನ್ನುವ ಗಾದೆ ಮಾತು ಸುಳ್ಳು ಆಗಲಿಲ್ಲ

ಭಾಗ್ಯಾಶ್ರೀ:– ಹೌದು ರೀ. ಅವರವರ ಋಣ ಕೂಡಿ ಬಂದರೆ ಯಾವುದು ನಿಲ್ಲೋದಿಲ್ಲ. ಎಲ್ಲಾ ತಾನಾಗಿ ನಡೆದು ಹೋಗುತ್ತದೆ (ಅಷ್ಟರಲ್ಲಿ ಮಾಂತೇಶ ಎಲ್ಲ ಸಾಮಾಗ್ರಿಗಳು ತೆಗೆದುಕೊಂಡು ಬರುವನು)

ಮಾಂತೇಶ:–ಹಾಂ ಬೇಗ ಬೇಗ ಮಾಲೆ ತಗೆದುಕ್ಕೊಳ್ಳಿ. ಮಾಲಿ ಬದಲಾಯಿಸಿರಿ ಉಂಗುರ ಬದಲಾಯಿಸಿರಿ. ಅಣ್ಣ ಅತ್ತಿಗೆ ತೆಗೆದುಕೊಳ್ಳಿ ಉಂಗುರವನ್ನು (ಮಧುನಿಗೆ ಮೈಲಾರನಿಗೆ ಮಾಲಿ ಉಂಗುರ ಕೊಡುವನು. ಇಬ್ಬರು ಉಂಗುರ ಮಾಲಿನ ಬದಲಾಯಿಸಿಕೊಳ್ಳುವರು)

ಮಾಂತೇಶ:– ಅಣ್ಣ ಅತ್ತಿಗೆ. ಈ ಜಗತ್ತಿನಲ್ಲಿರುವ ಎಲ್ಲಾ ಮಾನವರಿಗೂ ಒಬ್ಬಳೇ ತಾಯಿ ಇದ್ದರೆ. ನನಗೆ ಇಬ್ಬರು ತಾಯಂದಿರು. ಬನ್ನಿ ಎಲ್ಲರೂ ಸೇರಿ ಈ ಸಿಹಿ ಸಂಭ್ರಮದಲ್ಲಿ ಹಾಡಿನಲ್ಲಿಯೋಣ

ಮಹೇಶ:– ಭಾಗ್ಯಶ್ರೀ ಜೀವನ ಅನ್ನೋದು ಒಂದು ಸಮುದ್ರ ಸಾಗರ. ಆ ಸಾಗರದಲ್ಲಿ ಎಷ್ಟು ಚೆಂದಾಗಿ ನಮ್ಮನ್ನು ಸಾಗಿಸುತ್ತಿದ್ದಾನೆ ಮೈಲಾರಲಿಂಗೇಶ್ವರ ಬನ್ನಿ ಎಲ್ಲರೂ ಹಾಡಿ ನಲಿಯೋಣ ಒಂದು ಆನಂದದ ಸಾಗರ

ಭಾಗ್ಯಾಶ್ರೀ:– ಆಯ್ತು ರೀ ಬನ್ನಿ ಎಲ್ಲಾರು ಸೇರಿ ಹಾಡೋಣ ಬಾ ತಂಗಿ (ಗ್ರೂಪ್ ಸಾಂಗ್ ಇರುತ್ತದೆ ಹಾಡ ಮುಗಿದ ನಂತರ)

ಮೈಲಾರ:– ಅತ್ತಿಗೆ ಅಣ್ಣನನ್ನು ಕರೆದುಕೊಂಡು ಆಸ್ಪತ್ರೆಗೆ ಹೋಗಿ ಸರಿಯಾಗಿ ತೋರಿಸಿಕೊಂಡು ಬನ್ನಿ ನಾನು ಕುರಿ ದಡ್ಡಿಗೆ ಹೋಗಿ ಬರುತ್ತೇನೆ

ಭಾಗ್ಯಾಶ್ರೀ:– ಆಯ್ತು ಮೈದುನ. ಮಧು ಭಾ ಒಳಗೆ ಹೋಗೋಣ (ಅಷ್ಟರಲ್ಲಿ ಕ್ರಾಂತಿವೀರ ಸಾಧ ಡ್ರೆಸ್ ನಲ್ಲಿ ಬರುವನು)

ಕ್ರಾಂತಿವೀರ:– ಮೈಲಾರ ಗೆಳೆಯ ಮೈಲಾರ

ಮೈಲಾರ:– ಬಾ ಕ್ರಾಂತಿವೀರ. ಅಣ್ಣ ಇವನು ನನ್ನ ಸ್ನೇಹಿತ ಕ್ರಾಂತಿವೀರ ಅಂತ. ಕ್ರಾಂತಿವೀರ ಇವರು ನಮ್ಮಣ್ಣ ಮಹೇಶ ಅಂತ. ಇವನ್ನು ನನ್ನ ತಮ್ಮ ಮಾಂತೇಶ ಅಂತ ಪೊಲೀಸ್ ಅಧಿಕಾರಿ

ಕ್ರಾಂತಿವೀರ:– ನಮಸ್ಕಾರ್ ಗುರುಗಳೇ.. ಚೆನ್ನಾಗಿ ಇದ್ದೀರಾ

ಮಹೇಶ್:– ನಮಸ್ಕಾರ್ ಕಣಪ್ಪ ನಾನು ಚೆನ್ನಾಗಿದೇನೇ. ನೀನು ಹೇಗೆದಿಯ ಕಾರ್ತಿಕ್

ಕ್ರಾಂತಿವೀರ:– ನಾನು ಚನ್ನಾಗಿದೀನಿ ಗುರುಗಳೇ. ಇದು ನಿಮ್ಮ ಮನೆಯ ಗುರುಗಳೇ.

ಮಹೇಶ:– ಹೌದು ಕಾರ್ತಿಕ್ ಇವರಿಬ್ಬರೂ ನನ್ನ ತಮ್ಮಂದಿರು.

ಮೈಲಾರ:– ಅಣ್ಣ ಕಾರ್ತಿಕ್ ನಿನಗೆ ಮೊದಲೇ ಪರಚೆಯನ

ಮಹೇಶ:– ಹೌದು ಮೈಲಾರ. ಇವನು ನನ್ನ ಸ್ಕೂಲ್ ಸ್ಟೂಡೆಂಟ್. ಹಾಂ ಕಾರ್ತಿಕ್ ನೀನು ಇಲ್ಲಿ

ಕ್ರಾಂತಿವೀರ:– ಹಾಗೆ ಒಂದು ಕೆಲ್ಲಸದ ಮೇಲೆ ಬಂದ್ದಿದೆ ಗುರುಗಳೇ

ಮಹೇಶ:– ಇರಲಿ ಬಿಡು ಕಾರ್ತಿಕ್. ನಿನ್ ತಂಗಿ ಕೀರ್ತಿ ಹೇಗಿದಾಳಪ್ಪ

ಕ್ರಾಂತಿವೀರ:– (ಸ್ವ) ನನ್ನ ತಂಗಿ ಸತ್ತ ಸುದ್ದಿ ಇವರಿಗೆ ಹೇಳಬಾರದು. ಯಾಕಂದ್ರೆ ನನ್ನ ತಂಗಿ ಮೇಲೆ ತುಂಬಾ ಪ್ರೀತಿ ಇವರಿಗೆ. (ಪ್ರ) ಚನ್ನಾಗಿದಾಳೆ ಗುರುಗಳೇ. ನಿಮ್ಮ ಆಶೀರ್ವಾದಿಂದ ದೊಡ್ಡ ಕಾಲೇಜ್ ನಲ್ಲಿ ಓದುತಿದ್ದಾಳೆ

ಮಹೇಶ:– ಒಳ್ಳೇದಾಗಲಿ ಕಾರ್ತಿಕ್ ನಿನ್ ತಂಗಿಗೆ. ಅವಳಿಗೊಂದು ದೊಡ್ಡ ನೌಕರಿ ಸಿಗೋವರೆಗೂ ಅವಳನು ಓದಿಸು

ಕ್ರಾಂತಿವೀರ:– ಅಯ್ತಿ ಗುರುಗಳೇ ನಿಮ್ಮ ಅಸೆ ಅಂತೆ ಆಗಲಿ

ಮಹೇಶ:– ಕಾರ್ತಿಕ್ ಅಪರೂಪಕ್ಕೆ ನಮ್ಮ ಊರುಗೆ ಬಂದಿದಿಯ. ನಮ್ಮ ಮೆನೆಯಲ್ಲಿ ಊಟ ಮಾಡಿ ಹೋಗಬೇಕು ನೀನು

ಕ್ರಾಂತಿವೀರ:– ಅಯ್ತಿ ಗುರುಗಳೇ

ಮಾಂತೇಶ:– ಕಾರ್ತಿಕ್ ನೀನೇನ್ನು ಕೆಲಸ ಮಾಡತ್ತಾ ಇದ್ದೀಯ

ಕ್ರಾಂತಿವೀರ:– ಸಿಬಿ ಐ ಕೆಲಸಕ್ಕೆ ಅರ್ಜಿ ಹಾಕಿದ್ದೇನೆ ಮಾಂತೇಶ್. ಏನಾಗುತ್ತೆ ನೋಡಬೇಕು

ಮಾಂತೇಶ:– ಬಾ ಕಾರ್ತಿಕ್. ನಮ್ಮ ಜೊತೆ ನೀನು ಊಟ ಮಾಡಿ ಹೋಗುವಂತೆ (ಎಲ್ಲರೂ ಒಳಗಡೆ ಹೋಗುವರು)

ಪ್ರವೇಶ 7

ರಾಜೇಂದ್ರನ ಮಹಡಿ ಮನೆ.

(ರಾಜೇಂದ್ರ ಮಹಡಿ ಇಂದ ಇಳಿದು ಸಿಗರೇಟ್ ಹಚ್ಚಿ ನಕ್ಕು)

ರಾಜೇಂದ್ರ:– ಲೇ ಮಾಂತೇಶ (ಸಿಟ್ಟಿನಿಂದ ಹಲು ಕಡಿಯುತ್ತ) ಈ ರಾಜೇಂದ್ರನ ಭದ್ರ ಕೋಟೆಗೆ ನುಗ್ಗಿ ನನ್ನ ಬಲಗೈ ಬಂಟನಾದ ಮಹೇಂದ್ರನ ಕೈಗೆ ಬೇಡಿಯನ್ನು ಹಾಕಿ. ಎಳೆದುಕೊಂಡು ಹೋಗಿ ಆ ನಿನ್ನ ಸ್ಟೇಷನಲ್ಲಿ ಹಾಕಿಬಿಟ್ಟಿಯ ಮಗನೇ. ಇದುವರೆಗೂ ಈ ರಾಜೇಂದ್ರನ ಮನೆಯಿಂದ ಒಂದು ಹುಲ್ಲು ಕಡ್ಡಿ ಸಹಿತ ಒಯ್ಯೋದಕ್ಕೆ ಯಾವನು ಮುಂದೆ ಬಂದಿದ್ದಿಲ್ಲ. ಆದರೆ ಕಾಕಿ ಬಟ್ಟೆ ತೊಟ್ಟ ಮಾತ್ರಕ್ಕೆ ನಾನೇ ದೊಡ್ಡ ಗಂಡಸೆಂದು ಸವಾಲ್ ಹಾಕಿ ಸರದಾರಣಂತೆ ಎಳೆದುಕೊಂಡು ಹೋದೆಯಾ ಸೊಕ್ಕಿನ ನರಕುನ್ನಿ. ಇನ್ನು ನಿನ್ನ ಮೈ ಮೇಲೆ ಆ ಕಾಕಿ ಬಟ್ಟೆ ಇರಬಾರದು ಮಗನೆ. ನಿನ್ನ ಮೈ ಮೇಲಿದ್ದ ಆ ಕಾಕಿ ಬಟ್ಟೆಯನ್ನು ಕಳಚಿ. ನನ್ನ ಬಲಗೈ ಬಂಟನಾದ
ಮಹೇಂದ್ರನಿಂದ ನಿನ್ನನ್ನು ಗಲ್ಲಿ ಗಲ್ಲಿಯಲ್ಲಿ ಓಡಾಡಿಸಿ. ನಿನ್ನ ದೇಹದ ಅಂಗಾಗವನು ಕತ್ತರಿಸಿ ಹಾಕಿಸುವರಿಗೂ ನೆಮ್ಮದಿ ಇಲ್ಲ ಈ ರಾಜ್ ರಾಜೇಂದ್ರನ ಮನಸ್ಸಿಗೆ (ನಕ್ಕು) ಅಂದಾಗ ಮುಂದೆ ಕಾಕಿ ಬಟ್ಟೆ ತೊಟ್ಟು ನಾನು ಗಂಡೆದೆ ವೀರನೆಂದು ಬರುವ ಗಂಡೆದೆ ಗಾಂಡುಗಳಿಗೆ ಗೊತ್ತಾಗುತ್ತದೆ. ಈ ರಾಜಕೀಯ ರಣ ರಂಗದ ಹುಲಿ ರಾಜೇಂದ್ರನ ಕೈ ಚಳಕ (ನಕ್ಕು) ರಂಗ ಲೇ ರಂಗ

ರಂಗ:– ಹೇಳಿ ಸಾಹೇಬ್ರೆ ಏನು ಕೆಲಸವಿತ್ತು

ರಾಜೇಂದ್ರ:– ರಂಗಾ ಆ ಮಹೇಶನ ಮನೆಗೆ ಹೋಗಿ. ಮಹೇಶನನ್ನು ಕರೆದುಕೊಂಡು ಬಾ. ಅವರ ತಮ್ಮರ ಬಗ್ಗೆ ಅವರಿಗೆ ಸ್ವಲ್ಪ ಎಚ್ಚರಿಕೆ ಕೊಡೋಣ

ರಂಗ:– ಆಯ್ತು ಸಾಹೇಬ್ರೆ ಕರೆದುಕೊಂಡು ಬರುತ್ತೇನೆ (ಹೋಗುವನು. ಅಷ್ಟರಲ್ಲಿ ನಾಗೇಂದ್ರ, ಮಹೇಂದ್ರ ಪ್ರವೇಶಿಸಿ)

ನಾಗೇಂದ್ರ:– ಸಾಹೇಬ್ರೆ ನಮ್ಮ ಮಹೇಂದ್ರಣ್ಣನು ಬಿಡಿಸಿಕೊಂಡು ಬರಲು ಹೋದಾಗ. ಆ ಎಸಿಪಿ ಮಾಂತೇಶ ಬಾಳ ಹಾರಾಡಿದ. ಅವನನ್ನು ಕೋಟೆಗೆ ಸಬಿಟ್ ಮಾಡುತ್ತೇನೆ. ಅಲ್ಲೇ ಕೋರ್ಟ್ನಲ್ಲಿ ಬಿಡಿಸಿಕೊ ಎಂದು ನಿಗರಾಡಲು ಹತ್ತಿದ. ನಿಗರಾಡಿದ ಅವನನ್ನು ಅರಕ್ಷಣದಲ್ಲಿ ನಿಂಗಪ್ಪನ ಪಾದ ಸೇರಿಸಿಬಿಡುತ್ತಿದ್ದೆ. ಆದರೆ ನಿಮ್ಮನ್ನು ಒಂದು ಮಾತು ಕೇಳಬೇಕೆಂದು ಮಹೇಂದ್ರಣ್ಣನ್ನು ಕರೆದುಕೊಂಡು ಸುಮ್ನೆ ಬಂದು ಬಿಟ್ಟೆ ಸಾಹೇಬ್ರೆ. ಇಲ್ಲದಿದ್ದರೆ ಅವನ ಶೌರ್ಯವನ್ನು ಸಮಾಧಿ ಮಾಡಿ. ಅಧಿಕಾರದಿಂದ ಹಾರಾಡುವ ಆ ಹಕ್ಕಿಯನ್ನು ಆಕಾಶಕ್ಕೆ ಹಾರಿಸಿಬಿಡುತ್ತಿದ್ದೆ (ನಕ್ಕು)

ರಾಜೇಂದ್ರ:– ನಾಗೇಂದ್ರ ನಮ್ಮಗೆ ಎದುರಾಗಿ ನಿಂತ ಆ ಮಹಾಂತೇಶನನ್ನು ಯಮಲೋಕಕ್ಕೆ ಎತ್ತಿ ಹಾಕಿ. ಅವನ ದೇಹಕ್ಕೆ ಹಚ್ಚಲೇಬೇಕು ಬೆಂಕಿ. ಅಂದಾಗ ಶಾಂತಿ ಆಗುತ್ತೆದೇ ನನ್ನದೇ ಕ್ರೋದ್ದಗ್ನಿ (ನಕ್ಕು)

ಮಹೇಂದ್ರ:– ಸಾಹೇಬ್ರೆ ನಿಮ್ಮದೆಯಲ್ಲಿ ಕಂಗೊಳಿಸಿತ್ತಿರುವ ಆ ಕ್ರೋದಗ್ನಿಯನ್ನು ನಂದಿಸಿಕೊಳಬೇಕಾದರೆ. ಆ ಮಾಂತೇಶನ ಪ್ರಾಣವನ್ನು ಪತಂಗ ದ್ದಂತೆ ಹಾರಿಸಲೇಬೇಕು. ಅಂದಾಗ ಕಾಕಿ ಬಟ್ಟೆ ಹಾಕಿಕೊಂಡ ನಾನೆ ದೊಡ್ಡ ಗಂಡಸೆಂದು ಕಾಲು ಕೆದರುವ ಅವನ ಗಂಡಸ್ತನ ನಾಶವಾಗುತ್ತದೆ. ನೀವು ಹೂ ಅಂತ ಒಪ್ಪಿಗೆ ಕೊಟ್ಟರೆ. ಈಗಲೇ ಹೋಗಿ ಅವನಿರುವ ಜಾಗವನ್ನು ಹುಡುಕಿ. ಅವನನ್ನು ಗಲ್ಲಿ ಗಲ್ಲಿಯಲ್ಲಿ ಓಡ್ಯಾಡಿಸಿ. ಅವನ ಅಂಗಾಂಗವನ್ನು ಕೊಚ್ಚಿ ಹಾಕುತ್ತೇನೆ

ರಾಜೇಂದ್ರ:– ಮಹೇಂದ್ರ ಅವನನ್ನು ಇಷ್ಟು ಬೇಗ ಕೊಚ್ಚಿ ಹಾಕಬಾರದು. ಅವನ ಸಾವನ್ನು ಕಂಡು ಈ ನಮ್ಮ ಜಿಲ್ಲೆಯಲ್ಲಿ ಯಾವ ಅಧಿಕಾರಿ ಕೂಡ ನಮ್ಮ ಬಗ್ಗೆ ಉಸಿರು ಕೂಡ ಬಿಡಬಾರದು. ಹಾಗೆ ಮಾಡಬೇಕು.
ಅಂದಾಗ ಈ ರಣರಂಗದ ಹುಲಿಗಳಾದ ಈ ರಾಜೇಂದ್ರ ನಾಗೇಂದ್ರ ಮಹೇಂದ್ರಣ್ಣ ತಂಟೆಗೆ ಯಾವನು ಬರುವುದಿಲ್ಲ ಮಹೇಂದ್ರ:– ಹಾಗೇನಾದರೂ ನಾನೇ ಬಂಟನೆಂದು ತುಂಟತನ ಮಾಡಿದರೆ. ಅವರನ್ನು ತುಂಡು ತುಂಡಾಗಿ ಕಡಿದು ಹಾಕಿ ಬಿಡೋಣ ಆ ಕೊಬ್ಬಿದ ಮಾನವನ ದೇಹವನ್ನು

ನಾಗೇಂದ್ರ:– ದೇಹವನ್ನು (ನಕ್ಕು) ಸಾಹೇಬ್ರೆ ಸಾವಿನ ಜೊತೆ ಸರಸವಾಡಬಾರದು (ನಕ್ಕು) ಸಾವಣ್ಣಿ ಮೆಟ್ಟಿ ನಿಂತ ಈ ಸರದಾರರನ್ನು ಎದುರು ಹಾಕಿಕೊಳ್ಳಬಾರದು (ನಕ್ಕು) ಯಾವನಾದರೂ ನಮಗೆ ಎದುರಾಗಿ ನಿಂತರೆ ಈ ಪೃಥ್ವಿಯಲ್ಲಿ ಅವನ ಉಸಿರು ಇರಬಾರದು (ನಕ್ಕು)

ರಾಜೇಂದ್ರ:– ಓಕೆ ನಾಗೇಂದ್ರ. ನೀ ಹೇಳಿದಾಗೆ ಮಾಡೋಣ. ಈಗ ಆ ಮಾಂತೇಶನ ಹಿರಿಯ ಅಣ್ಣ ಮಹೇಶನ್ನನು ಬರಲು ಹೇಳಿದ್ದೇನೆ. ಅವನು ಬಂದ ತಕ್ಷಣ. ನಮ್ಮ ದಾರಿಗೆ ನಿನ್ನ ತಮ್ಮಂದಿರು ಮೈಲಾರ ಮಾಂತೇಶ ಅಡ್ಡ ಬರುತ್ತಿದ್ದಾರೆ. ಅವರಿಗೆ ಸ್ವಲ್ಪ ಬುದ್ಧಿ ಹೇಳು ಎಂದು ಮೊದಲು ತಿಳಿಸಿ ಹೇಳೋಣ. ಅವನು ನಮ್ಮ ಮಾತನ್ನು ಕೇಳಿ ತನ್ನ ತಮ್ಮಂದಿರಿಗೆ ತಿಳಿಸಿ ಹೇಳಿದರೆ ಸರಿ. ಇಲ್ಲ ಬೇರೆ ಮಾತುಗಳು ಉದ್ಭವಿಸಿದರೆ. ಮುಂದೆ ಅವರಿಗೊಂದು ಉಪಾಯ ಮಾಡೋಣ (ಅಷ್ಟರಲಿ ರಂಗ ಮಹೇಶನನ್ನು ಕರೆದುಕೊಂಡು ಬರುವನು)

ರಂಗ:– ಸಾಹೇಬ್ರೆ ಕರೆದುಕೊಂಡು ಬಂದಿದ್ದೇನೆ ನೋಡಿ ಮಹೇಶನನ್ನು

ಮಹೇಶ:– ನಮಸ್ಕಾರ ಎಂಎಲ್ಎ ಸಾಹೇಬರಿಗೆ

ರಾಜೇಂದ್ರ:– ಲೆ ಮಹೇಶ ಯಾವನಿಗೆ ಬೇಕಲೇ ನಿನ್ನ ನಮಸ್ಕಾರ. ನಿನ್ನ ತಮ್ಮ ಮೈಲಾರ ಮಾಂತೇಶ ನಮ್ಮ ಪ್ರತಿಯೊಂದು ಕಾರ್ಯದಲ್ಲಿ ಸುಂಟರಗಾಳಿಯಂತೆ ಬಂದು. ನಮ್ಮ ಕೆಲಸಕ್ಕೆ ಅಡ್ಡಗೋಡೆಯಾಗಿ ನಿಂತಿದ್ದಾರೆ. ಅವರಿಗೆ ನೀನೇ ಸ್ವಲ್ಪ ಬುದ್ಧಿ ಹೇಳಿದರೆ ಸರಿ. ಇಲ್ಲ ಮುಂದೆ ಪರಿಣಾಮ ಬೇರೆಯಾಗುತ್ತದೆ

ಮಹೇಶ:– ನೋಡಿ ಎಂಎಲ್ಎ ಸಾಹೇಬ್ರೆ. ನನ್ನ ದೊಡ್ಡ ತಮ್ಮ ಮೈಲಾರ ಯಾವ ಕಾರಣಕ್ಕಾಗಿ ನಿಮಗೆ ಅಡ್ಡ ಆಗಿದ್ದಾನೋ ನನಗೆ ಗೊತ್ತಿಲ್ಲ. ಆದರೆ ನನ್ನ ಸಣ್ಣ ತಮ್ಮ ಮಾಂತೇಶ ಅವನೊಬ್ಬ ನಿಷ್ಠಾವಂತ ಪೊಲೀಸ ಅಧಿಕಾರಿ. ಅವನು ನಿಮಗೆ ಎದುರಾಗಿ ನಿಂತಿದ್ದಾನೆಂದರೆ ಇದರಲ್ಲಿ ನಿಮ್ಮದೇ ಏನು ತಪ್ಪಿರಬೇಕು ಸ್ವಲ್ಪ ಯೋಚನೆ ಮಾಡಿ ನೋಡಿ

ನಾಗೇಂದ್ರ:– ತಪ್ಪು (ನಕ್ಕು) ಲೇ ಮಹೇಶ ತಪ್ಪು ಎಂಬ ತಾತ್ಕಾಲಿಕ ಪದವನ್ನು ಉತ್ತರಿಸಬೇಡ ಈ ದಾಂಡಿಗರ ಮುಂದೆ. ನಾವೇನ್ನು ಮಾಡಿದರೂ ನೀನ್ನ ತಮ್ಮೊಂದಿರಿಗೆ ಯಾಕೆ ಬೇಕಲೇ. ಏನು ಕಂಡರೂ ಕಾಣದ ಹಾಗೆ. ಏನು ಕೇಳಿದರೂ ಕೇಳಿದಾಗ ಮುಚ್ಕೊಂಡಿರೋದಕ್ಕೆ ನಿನ್ನ ತಮ್ಮಂದಿರಿಗೆ ಆಗೋದಿಲ್ಲ ಏನಲೇ ಹರಾಮ್ ಕೋರ

ಮಹೇಶ:– ಏನೆಂದಲೇ ಸೊಕ್ಕಿನ ಮಗನೇ ನಾಗೇಂದ್ರ. ಮೊದಲು ಮರ್ಯಾದೆ ಕೊಟ್ಟು ಮರ್ಯಾದೆ ತೆಗೆದುಕೋ. ಅವಿವೇಕೆಂತೆ ಹದ್ದು ಮೀರಿ ಹಾರಾಡಿದರೆ. ನನ್ನ ತಮ್ಮ ಮೈಲಾರನ ಕೈಯಲ್ಲಿ ನಿಮ್ಮ ದೇಹ ಆಗುವುದು ಸಂಹಾರ ತಿಳಿದುಕೊಳ್ಳರಲೇ ಮುಟ್ಠಾಳರ

ಮಹೇಂದ್ರ:– ಸಂಹಾರ (ನಕ್ಕು) ಲೆ ಮಹೇಶ ನಮ್ಮನ್ನು ಸಂಹಾರ ಮಾಡುವುದಕ್ಕೆ ಆ ನಿನ್ನ ತಮ್ಮ ನೇಣು ದೇವಲೋಕದ ದೇವ ಪುರುಷನ ಅಥವಾ ಹೇಮಲೋಕದ ಯಮ್ಮಧರ್ಮನ ಅಥವಾ ಸೂರ ಸಂಗೊಳ್ಳಿ ರಾಯಣ್ಣ ಸಿಂಧೂರ ಲಕ್ಷ್ಮಣನ ಅಲ್ಲಲೇ. ಅವನೇನಾದರೂ ಇನ್ನೊಂದು ಸಾರಿ ಈ ಅರಮನೆಗೆ ಕಾಲಿಟ್ಟರೆ ಅವನ ದೇಹವನ್ನು ಇಂಚಿಂಚಾಗಿ ಕೊಚ್ಚಿ ಹಾಕುತ್ತಾನೆ ಈ ಸಾವಿರಾಣಿ ಬಲದ ಸರದಾರ ಬಹದ್ದೂರ ಮಹೇಂದ್ರ(ನಕ್ಕು)

ಮಹೇಶ:– ಲೆ ಮಹೇಂದ್ರ ನನ್ನ ತಮ್ಮನ ದೇಹವನ್ನು ಇಂಚಿಂಚಾಗಿ ಕೊಚ್ಚಿ ಹಾಕೋದಕ್ಕೆ ನಿನಗೂ ಸಾಧ್ಯವಿಲ್ಲ. ನಿಮ್ಮಪ್ಪನಿಗೂ ಸಾಧ್ಯವಿಲ್ಲ. ನನ್ನ ತಮ್ಮನೇನು ನಿನ್ನ ಹಾಗೆ ಮತ್ತೊಬ್ಬರ ಮನೆಯಲ್ಲಿ ಎಂಜಲ ಕೂಳು ತಿಂದು ಬೆಳೆದಿಲ್ಲ. ಹಿಂಡು ಕುರಿ ಹಾಲು ಕುಡಿದು ಗರಡಿ ಮನೆ ತಾಲಿಂನ್ನು ಹೊಡೆದು. ನಿನ್ನಂತ ಸಾವಿರಾರು ಸರದಾರರನ್ನು ಕಣದಲ್ಲಿ ಮಣ್ಣು ಮೂಕಿಸಿದ ಗಂಡೆದೆ ಗುಂಡಗಿಯ ವೀರ ಸರ್ದಾರಲೇ. ನನ್ನ ತಮ್ಮ ಮೈಲಾರ. ಅವನ ವಿಷಯಕ್ಕೆ ಬರೋದನ್ನು ಬಿಟ್ಟು. ನಿಮ್ಮ ಕೆಲಸ ಎಷ್ಟಿದೆ ಅಷ್ಟೇ ನೋಡಿಕೊಳ್ಳಿ. ಇನ್ನು ನನ್ನ ಸಣ್ಣ ತಮ್ಮ ಮಾಂತೇಶ ಅವನೊಬ್ಬ ಸರಕಾರದ ಅಧಿಕಾರಿ ಅವನ ಮೇಲೆ ನಿಮ್ಮ ಸೂರತನ ಒಳ್ಳೇದಲ್ಲ. ನಿಮ್ಮ ತಪ್ಪನ್ನು ನೀವೇ

ತಿದ್ದುಕೊಂಡು ನಿಮ್ಮ ಪಾಡಿಗೆ ನೀವಿದ್ದರೆ ಅದು ನಿಮಗೆ ಒಳ್ಳೆಯದು. ಇಲ್ಲ ನಾವು ಹಾಗೆ ಹೀಗೆ ಎಂದು ಜಂಬ ಕೊಚ್ಚಿ ಕೊಂಡರೆ ನಿಮಗೆ ಕಂಠಕ ತಪ್ಪಿದ್ದಲ್ಲ

ರಾಜೇಂದ್ರ:– ಕಂಠಕ (ನಕ್ಕು) ಲೇ ಮಹೇಶ ಕಂಟಕ ತಪ್ಪಿದಲ್ಲ ಎಂದು ಬಂಟನಂತೆ ಸೂರತನ ತೋರಿಸುವುದಕ್ಕೆ ಮುಂದೆ ಅಡಿ ಇಟ್ಟರೆ. ಆ ನಿನ್ನ ತಮ್ಮನಂತ ಸಾವಿರಾರು ಶೂರರು ಬಂದರು. ನಮ್ಮನೇಣು ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ನನ್ನ ತಮ್ಮಂದಿರು ಶೂರರು ವೀರರೆಂದು ಹೇಳುತ್ತಿರುವೆಯಲ್ಲ ಮೊದಲು ನಿನಗೆ ಒದ್ದು ಬುದ್ಧಿ ಕಲಿಸಬೇಕು. ಮಹೇಂದ್ರ ಕಟ್ಟಿ ಹಾಕು ಈ ಬಡ್ಡಿ ಮಗನನ್ನು. ಇವನನ್ನು ಬಿಡಿಸಿಕೊಂಡು ಹೋಗೋದಕ್ಕೆ ಯಾವ ಸರ್ಕಾರದವನು ಬರುತ್ತಾನೋ. ಯಾವ ಸರ್ದಾರ ಬರ್ತಾನೋ ನೋಡೋಣ. ಮಹೇಂದ್ರ ಈ ಮಗನ ಕೊಬ್ಬು ಕರಗಬೇಕಾದರೆ ಚಾಟಿಯನ್ನು ತೆಗೆದುಕೊಂಡು ಬಂದು ಚಾಟಿಂದ ಚೆನ್ನಾಗಿ ಕರಗಿಸುವ ಈ ಮಗನ ಚರಿಬಿಯನ್ನು

ಮಹೇಂದ್ರ:– ಆಯ್ತು ಸಾಹೇಬರೇ (ಕಟ್ಟಹಾಕಿ ಚಾಟಿಯನ್ನು ತೆಗೆದುಕೊಂಡು ಬಂದು) ಲೆ ಮಹೇಶ ಈ ಚಾಟಿಯ ರುಚಿ ಹೇಗಿದೆ ನೋಡು ಮಗನೇ (ಹೊಡೆಯುವನು)

ಮಹೇಶ:– ಲೇ ಷಂಡ ನನ್ನ ಮಕ್ಕಳೇ ನನ್ನನ್ನು ಕಟ್ಟಿ ಹೊಡೆಯುತ್ತಿರುವ ವಿಷಯ ನನ್ನ ತಮ್ಮ ಮೈಲಾರನಿಗೆ ಏನಾದರೂ ಗೊತ್ತಾದರೆ. ಆ ಗುಡ್ಡದೊಡೆಯ ಮೈಲಾರಲಿಂಗನ ಪ್ರತಿರೂಪವಾಗಿ. ಕಾಲಭೈರವ ಮಾರ್ತಾಂಡನಾಗಿ ನಿಮಗೆ ಒದ್ದು ಬುದ್ಧಿ ಕಲಿಸಲು ಕಲಿಯುಗದ ಕಾಳಿಂಗ ನಾಗಿ. ನನ್ನ ತಮ್ಮ ಬಂದೇ ಬರುತ್ತಾನೆ (ಮಹೇಂದ್ರ ಹೊಡೆಯುವಾಗ. ಮೈಲಾರ ಕೊಡ್ಲಿ ಹಿಡಿದು ಸಿಟ್ಟಿನಿಂದ ಬರುವನು)

ಮೈಲಾರ:– ಲೆ ಮಹೇಂದ್ರ ನನ್ನ ಅಣ್ಣನನ್ನು ಕಟ್ಟಿ ಹಾಕಿ ಸೂರತನ ತೋರಿಸುತ್ತಿರುವೆಯಾ ಸುವರ್ಕ್ ಬಚ್ಚ ನನ್ನ ಮಗನೇ. ನಿಮ್ಮ ಬಿಸಿರಕ್ತವನ್ನು ಕುಡಿಯಬೇಕೆಂದು ಸಿದ್ದನಾಗಿ ಬಂದಿದೆ ಈ ರೊಚ್ಚಿಗೆದ್ದ ಹುಲಿ

ರಾಜೇಂದ್ರ:– ರೊಚ್ಚಿಗೆದ್ದ ಹುಲಿ (ನಕ್ಕು) ಲೇ ಮೈಲಾರ ರೊಚ್ಚಿಗೆದ್ದ ಹುಲಿಯಂದು ಗರ್ಜಿಸಲು ಬಂದರೆ. ನಿನ ಗರ್ಜನೆಗೆ ಹೆದರಿ ಹೋಗು ಹುಚ್ಚರು ಯಾರು ಇಲ್ಲ ಇಲ್ಲಿ. ನಿನ್ನಂತ ರೊಚ್ಚಿಗೆದ್ದ ಹುಲಿಯ ರಕ್ತವನ್ನು ಕುಡಿಯುವ ನರ ರಾಕ್ಷಸರು ನಾವಿರುವಾಗ ನಮ್ಮ ಮುಂದೆ ನಿನ್ನ ಆರ್ಭಟ ನಡೆಯೋದಿಲ್ಲ ಮಗನೇ. ನಮಗೆ ಎದುರಾಗಿ ನಿಂತಿದ್ದಕ್ಕೆ ತಪ್ಪಾಯ್ತು ಎಂದು ಕ್ಷಮೆ ಕೇಳಿ ಹೋಗು ನಿನ್ನ ಪ್ರಾಣ ಉಳಿಯುತ್ತದೆ. ಇಲ್ಲ ಹುಲಿ ಹುಲಿ ಅಂತ ಗಂಟಲು ಹರಿದುಕೊಂಡರೆ. ಉರುಳಿ ಹೋಗುವುದು ಈ ನಿನ್ನ ದೇಹ

ಮೈಲಾರ:– ಲೇ ಎಂ ಎಲೇ. ನಿನಗೆ ಆವತ್ತೇ ವಾರ್ನಿಂಗ್ ಕೊಟ್ಟಿದ್ದೆ ಮಗನೇ. ಅದೇ ವಾರ್ನಿಂಗ್ಗನು ಚಾಲೆಂಜ್ ಆಗಿ ತಗೆದುಕೊಂಡು. ನನ್ನ ಮೇಲಿರುವ ಸೇಡಿಗಾಗಿ ನನ್ನ ಅಣ್ಣನ ಮೇಲೆ ಕೈ ಮಾಡಿದ ನಿಮ್ಮ ಕೈಗಳನ್ನು ತುಂಡು ತುಂಡಾಗಿ ಕಡಿಯದಿಕ್ಕೆ ಬಂದ್ದಿದ್ದಾನೆ ಈ ಗಂಡೆದೆ ಪುಂಡ ಮೈಲಾರ

ನಾಗೇಂದ್ರ:– ಪುಂಡ ಮೈಲಾರ (ನಕ್ಕು) ಲೆ ಮೈಲಾರ ಪುಂಡ ನಾನೆಂದು ಪುಟದಾಡುತ್ತಿರುವ ನಿನ್ನ ಪುಂಡತನವನ್ನು ಪುಡಿಪುಡಿ ಮಾಡಿ ಹುಡಿ ಎಬ್ಬಿಸುವ ಹುಲಿಗಳು ನಾವಿರುವಾಗ. ನಮ್ಮ ಮುಂದೆ ನೀ ಯಾವ ಹುಲಿಲೇ ಮಳ್ಳ ಕುರಿ

ಮೈಲಾರ:– ಏನಂದಲೇ ಭಿಕಾರಿ. ಇದು ಮಳ್ಳ ಕುರಿಯಲಲೇ. ಸಿಡಿದೆದ್ದ ಹುಲಿಯ ಮರಿ. ಈ ಹುಲಿಯ ಮರಿ ಪಂಜದ ಹೊಡೆತಕ್ಕೆ ನಿಮ್ಮ ಒಬ್ಬಬ್ಬರು ಪ್ರಾಣ ಹೋಗಬೇಕು ಪರಮಾತ್ಮನ ಪಾದಕ್ಕೆ ಹಾರಿ. ಬರಲೇ ಬರ್ರಿ ನನ್ನ ಅಣ್ಣನನ್ನು ಮೋಟ್ರಲೇ ಇನ್ನೊಂದು ಸಾರಿ. ಕದನಕೆ ಸಿದ್ದನಾಗಿ ಬಂದೈತಲೇ ಈ ಹುಲಿ ಮರಿ

ಮಹೇಂದ್ರ:– ಹುಲಿಮರಿ (ನಕ್ಕು) ಲೇ ಮೈಲಾರ ಹುಲಿಮರೆಂದು ಹುಂಬನಂತೆ ಹಾರ್ಯಾಡಬೇಡಲೇ ಬಕಪಕ್ಷಿ. ನಿನ್ನಂತ ಎಷ್ಟೋ ಹುಲಿಮರಿಗಳು ನಮ್ಮಂತ ಶ್ರೀಮಂತರ ಸರಪಂಚದಲ್ಲಿ ಸಿಲುಕಿಕೊಂಡು. ಕೂಳು ಸಿಗದೆ ನರಳಿ ನರಳಿ ಸತ್ತು ಹೋಗಿದ್ದಾವೆ. ಇನ್ನು ನೀನ್ಯಾವ ಹುಲಿ ಮರೀಲೆ ಬಚ್ಚಾ

ಮೈಲಾರ:– ಲೇ ಲೂಚ್ಚಾ. ಹುಚ್ಚು ಹಿಡಿದ ನಾಯಿಯಂತೆ ಬೊಗಳ ಬ್ಯಾಡಲೇ ನರಸತ್ತ ನಾಮರಾದ್ದ ನನ್ನ ಮಗನೆ. ನಿಮ್ಮಂತ ಬಂಡ ಶ್ರೀಮಂತರಿಗೆ ಬಂಟಗಿ ಸಾರುವ ಪುಂಡ ಪುಡಾರಿ ಲೇ ಈ ಮೈಲಾರ

ರಾಜೇಂದ್ರ:– ಪುಂಡಾರಿ ಮೈಲಾರ (ನಕ್ಕು) ಲೇ ಮೈಲಾರ ನಿನಂತ ಪುಡಾರಿಯರ ಪುಂಡತನವನ್ನು ಬಂಸಮ್ ಮಾಡುವ. ಪವಾಡ ಪುರುಷ ನನ್ನಾಗಿರುವಾಗ. ಇನ್ನು ನಿನ್ನು ಯಾವ ಪುಂಡಲೇ ಬಂಡ

ಮೈಲಾರ:– ಪವಾಡ ಪುರುಷ (ನಕ್ಕು) ಲೆ ರಾಜೇಂದ್ರ ಪವಾಡ ಪುರುಷ ಅಂದರೆ ಯಾರು ಗೊತ್ತಾ ನಿನಗೆ ಸತ್ತು ಹೋದ ಕುರಿಯನ್ನು ಮರಳಿ ಬದುಕಿಸಿದರಲ್ಲ ಆ ಗೊಲ್ಲಾಳೇಶ್ವರ. ಅವರು ಪವಾಡ ಪುರುಷರು. ಸಾವಿರಾರು ವರ್ಷದ ಕಾಲಜ್ಞಾನ ಬರೆದಿಟ್ಟು. ಮುಂದೆ ಬರುವ ಕೆಟ್ಟ ಕಾಲದ ಬಗ್ಗೆ ಭಕ್ತರಿಗೆ ತಿಳಿಹೇಳಿ ಸರ್ವಭಕ್ತರನು ಸಮನಾಗಿ ಕಂಡರೆಲ್ಲಾ. ಆ ಬಬಲಾದಿ ಒಡೆಯ ಅವರು ಪವಾಡ ಪುರುಷರು. ಕಷ್ಟ ಎಂದು ಕಣ್ಣೀರು ಹಾಕುತ್ತ ಬಂದ ಭಕ್ತರು ಕಷ್ಟವನ ನಿವಾರಿಸಿ. ಮುಂದಿನ ಕೆಟ್ಟ ದಿನಮಾನಗಳ ಬಗ್ಗೆ ಭಕ್ತರಿಗೆ ಎಚ್ಚರಿಕೆ ಕೊಟ್ಟು ತನ್ನ ಹಂಗಾರ ದಿಂದ ಭಕ್ತರ ಬಾಳನು ಬಂಗಾರ ಗೊಳಿಸಿದ. ಆ ಹೆಬ್ಬಳ್ಳಿ ದೊಡ್ಡ ಲಾಲಸಾಬ ಅಜ್ಜನವರು. ಅವರು ಪವಾಡ ಪುರುಷರು. ಗದಗ್ ಜಿಲ್ಲೆ ರೋಣ ತಾಲೂಕು ರೋಣದ ಗ್ರಾಮದಲ್ಲಿ ಇಡೀ ಗ್ರಾಮವೇ ಹುಚ್ಚನೆಂದು ಕರೆದರೂ. ಭಕ್ತರ ಹೇಳಿಗಾಗಿ ಸಾಕ್ಷತಾ ಶಿವನ ಅವತಾರ ಪುರುಷನಾಗಿ. ಈ ಧರೆಗೆ ಇಳಿದು ಬಂದು ಅವರು ಮುಟ್ಟಿದ್ದನ್ನೆಲ್ಲಾ

ಬಂಗಾರಗೊಳಿಸಿದರಲ್ಲ. ಆ ಮಲ್ಲಯ್ಯಜ್ಜನವರು ಅವರು ಪವಾಡ ಪುರುಷರು. ಗುಪ್ತ ಭಕ್ತನಾಗಿ ಮನೇಲೆ ಕುಳಿತು ಭಕ್ತಿ ಮಾಡುವದನು ಕಂಡು. ಸಾಕ್ಷತಾ ಶಿವನೆ ಧರೆಗಿಳಿದು ಬಂದು. ಅವನ ಮನೆಯಲ್ಲಿ ಅಂಬಲಿ ಸವಿವಂತೆ ಭಕ್ತಿ ಮಾಡಿದನಲ್ಲ. ಆ ಮಾದರ ಚೆನ್ನಯ್ಯ. ಅವರು ಪವಾಡ ಪುರುಷರು. ಲೆ ರಾಜೇಂದ್ರ ನಿನ್ನಷ್ಟಕ್ಕೆ ನೀನೆ ಪವಾಡ ಪುರುಷ ಎಂದು ಹೇಳಿ ಕೊಳ್ಳುವುದಕ್ಕೆ ನಿನಗೇನು ಯೋಗ್ಯತೆ ಇದೆ ಲೆ. ಅವರ ಎಡಗಾಲ ದೂಳಿಗೂ ಸಮ ಇಲ್ಲದ ನಾಯಿ ನೀನು. ಪವಾಡ ಪುರುಷನೆಂದು ಬಾಯ್ ಬಡಿದು ಕೊಳ್ಳಬೇಡ ಲೇ. ಮರ್ಯಾದೆ ಕೊಟ್ಟು ಹೇಳುತ್ತೇನೆ ನನ್ನ ಅಣ್ಣನನ್ನು ಬಿಟ್ಟು ಕಳಿಸು. ಇಲ್ಲ ನಿಮ್ಮ ಮೂವರನ್ನು ಹೋತಾಕಿ ಬಿಡುತ್ತೇನೆ ಈ ರುದ್ರ ಭೂಮಿಯಲ್ಲಿ

ರಾಜೇಂದ್ರ:– ರುದ್ರ ಭೂಮಿಯಲ್ಲಿ (ನಕ್ಕು) ಲೆ ಮೈಲಾರ ಈ ರುದ್ರ ಭೂಮಿಯ ಮೇಲೆ ರೌದ್ರಮಯ ಸರದಾರನಾದ ಈ ರುದ್ರ ತಾಂಡವನನ್ನು ನಿಮ್ಮಿಂದ ಏನು ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಇವತ್ತು ನಮ್ಮ ಕೈಯಿಂದ ನಿನ್ನ ಅಣ್ಣನನ್ನು ಬಿಡಿಸಿಕೊಂಡು ಹೋದ ಮಾತ್ರಕ್ಕೆ ನಿನೆನ್ನು ದೊಡ್ಡ ಗಂಡಸಲ. ನಿನಾಡಿದ ಪ್ರತಿಯೊಂದು ಮಾತುಗಳಿಗೆ ಉತ್ತರ ಕೊಡದೆ ಬಿಡುವದಿಲ್ ಕುಮಾರ ಹೇಮಂತ್ ಎನ್ ಕಡಿಯವರ ಕೃತಿಯಲ್ಲಿ ಸೃಷ್ಟಿಯಾಗಿರುವ ಈ ಶ್ರೀಮಂತ ಸರ್ದಾರ ರಾಜ ರಾಜೇಂದ್ರ ಬಹದ್ದೂರ್ (ನಕ್ಕು) ಮಹೇಂದ್ರ ಬಿಟ್ಟು ಕಳಿಸು ಆ ಬಡಪಾಯನ್ನು

ಮಹೇಂದ್ರ:– ಆಯ್ತು ಸಾಹೇಬ್ರೆ (ಬಿಚ್ಚುವನು)

ಮೈಲಾರ:– ಲೆ ರಾಜೇಂದ್ರ, ಅದೇ ಕುಮಾರ ಹೇಮಂತ್ ಎನ್ ಕಡಿಯವರ ಸಾ॥ ಹುನಗುಂಡಿ ಅವರು ರಚಿಸಿರುವ ಈ ಕಲಾ ಕೃತಿಯಲ್ಲಿ. ನಿಮ್ಮಂತ ಶ್ರೀಮಂತರ ಅಟ್ಟಹಾಸ ಹೆಚ್ಚಾಗಿರಬೋವುದು. ಆದರೆ ಅಟ್ಟಹಾಸದಿಂದ ಮೆರೆಯುವ ನಿಮ್ಮಂತ.... ಸೊಕ್ಕಿನ ಶ್ರೀಮಂತರಿಗೆ ಮಿಕ್ಕಿದ ಮೈಲಾರ.....ನಾನಾಗದಿದ್ದೆರೆ ನನ್ನ ಹೆಸರು ಕಾಲಭೈರವ ಮಾರ್ತಾಂಡನಾದ ಆ ಮೈಲಾರಲಿಂಗನ ವರ ಪುತ್ರ ಮೈಲಾರನೇ ಅಲ್ಲ ಬಾ ಅಣ್ಣ ಹೋಗೋಣ (ಹೋಗುವರು)

ರಾಜೇಂದ್ರ:– ಲೇ ಮಹೇಶ ಮೈಲಾರ ಮಾಂತೇಶ (ನಕ್ಕು) ನಮಗೆ ಎದುರಾಗಿ ನಿಂತ ನಿಮ್ಮ ಮೂರು ಮಂದಿ ಅಣ್ಣ–ತಮ್ಮಂದಿರನ್ನು ಮಣ್ಣು ಪಾಲು ಮಾಡಿ. ನನ್ನೆದೆಯಾ ಕ್ರೋಧಾಗ್ನಿಯನ್ನು ನಂದಿಸಿಕೊಳ್ಳಲಿಲ್ಲ ನನ್ನ ಹೆಸರು ಕಲಿಯುಗದ ರಾವಣ ರಾಜೇಂದ್ರನೆ ಅಲ್ಲ (ನಕ್ಕು) ಲೆ ಮೈಲಾರ ನನಗೆ ಎದುರು ಉತ್ತರ ಕೊಟ್ಟ ಸೇಡಿಗಾಗಿ. ಸುಂದರ ಸುಕನ್ಯಾನಾದ ಆ ನಿನ್ನ ಅತ್ತಿಗೆ ಭಾಗ್ಯಶ್ರೀಯ ಭವ್ಯವಾದ ಶೀಲದ ಬುತ್ತಿಯನ್ನು ಸವಿಯದೆ ಬಿಡಲಾರ ಈ ಕಾಮ ತುಂಬಿದ ಖಳನಾಯಕ ರಾಜ್ ರಾಜೇಂದ್ರ (ನಕ್ಕು)

ನಾಗೇಂದ್ರ:– ಸಾಹೇಬ್ರೆ ಇನ್ನು ಈ ಮೈಲಾರನ್ನು ಹಾಗೆ ಬಿಟ್ಟರೆ ನಮಗೆ ತಪ್ಪಿದಲ್ಲ ಆಪತ್ತು. ಹೊತ್ತು ನೋಡಿ ಕಡಿಯಬೇಕು ಅವನ ಕತ್ತು. ಅಂದಾಗ ಈ ನಮ್ಮೂರ ಜನರಿಗೆ ತಿಳಿಯುತ್ತದೆ ಈ ಖಳನಾಯಕರ ಕಸರತ್ತು (ನಕ್ಕು)

ಮಹೇಂದ್ರ:– ಹೌದು ಸಾಹೇಬ್ರೆ ಇನ್ನು ಸಮಯ ವ್ಯರ್ಥ ಮಾಡೋದು ಬೇಡ. ಸರಿಯಾಗಿ ಸಮಯ ಸಾಧಿಸಿ ಆ ಮಹೇಶ ಅವನ ಹೆಂಡತಿಯನ್ನು ನೀವು ನೋಡಿಕೊಳ್ಳಿ ಇನ್ನು ಮೈಲಾರ ಮಾಂತೇಶನನ್ನು ನಾವು ಇಬ್ಬರು ನೋಡಿಕೊಳ್ಳುತ್ತೇವೆ. ಲೇ ಮಾಂತೇಶ ಇನ್ನು ಮುಂದೆ ಶುರು ಆಯ್ತು ಮಕ್ಕಳೇ ಈ ನಾಟಕದ ಜೀವನ ರಕ್ತರಾತ್ರಿ (ನಕ್ಕು) ಬನ್ನಿ ಸಾಹೇಬರೇ ಹೋಗೋಣ (ಹೋಗುವರು)

ಪ್ರವೇಶ 8

ರಸ್ತಾ ಪರದೇ

(ಕ್ರಾಂತಿವೀರ ಮಚು ಹಿಡಿದು ಸಿಗರೇಟ್ ಹಚ್ಚುತ್ತಾ ಬಂದು)

ಕ್ರಾಂತಿವೀರ:– ಸೇಡು (ನಕ್ಕು) ನನ್ನ ಸೇಡಿನ ಸಿಡಿಲಿನ ಹೊಡೆತಕ್ಕೆ ಸುಟ್ಟು ಸಮಾಧಿಯಾಗಬೇಕು ನನ್ನ ತಂಗಿಗೆ ಅನ್ಯಾಯ ಮಾಡಿದ ಆ ಹರಾಮ್ ಕೋರ ನನ್ನ ಮಗ. (ಸಿಟಿನಿಂದ) ಲೆ ಕೆಟ್ಟ ರಕ್ತಕ್ಕೆ ಹುಟ್ಟಿದ ಹಲಕ ನನ್ನ ಮಗನೇ..... ನೀನು ಯಾವ ದೇಶದಲ್ಲಿ ಅಡಿಗೆ ಕುಳಿತರು ನಿನ್ನನ್ನು ಹುಡುಕಿ ತಂದು ಈ ನಾಟಕದ ಕೊನೆಯ ಪರದೆ ಜಾರುವ ಮುನ್ನ ನಿನ್ನ ಜೀವನದ ನಾಟಕಕ್ಕೆ ನಾಂದಿ ನನಾಹಾಡದಿದ್ದರೆ ನನ್ನ ಹೆಸರು ಸಹೋದರಿ ಸೇಡಿಗಾಗಿ ಕತ್ತಿ ಹಿಡಿದ ಕ್ರಾಂತಿವೀರನೆ ಅಲ್ಲ(ನಕ್ಕು ಒಂದು ಕಡೆ ನೋಡಿ) ಈ ದಟ್ಟಣೆ ದಾರಿಯಲ್ಲಿ ಯಾರೋ ಒಬ್ಬಳು ಯುವತಿ ಬರುತ್ತಿದ್ದಾಳೆ. ಯಾರಿರಬಹುದು (ಮತ್ತೊಮ್ಮೆ ನೋಡಿ) ಓಹೋ ಇವಳು ನನ್ನ ಸ್ನೇಹಿತ ಮೈಲಾರನ ಹೆಂಡತಿ. ಬರಲಿ ಬರಲಿ ಇವಳಿಗೆ ದುಡ್ಡಿನ ಆಸೆಯನ್ನು ತೋರಿಸಿ ಇವಳ ಮನಸ್ಸು ಹೇಗಿದೆಯೆಂದು ಪರೀಕ್ಷೆ ಮಾಡಲೇಬೇಕು (ಮಧು ಬುತ್ತಿ ಹೊತ್ತುಕೊಂಡು ಬರುವಳು)

ಕ್ರಾಂತಿವೀರ:– ಎ ಹುಡುಗಿ ನಿಂತ್ಕೋ ನಿನ್ನ ಹೆಸರು

ಮಧು:– ಯಾರು (ಹೊಳಿ ನೋಡಿ) ನನ್ನ ಹೆಸರು ಮಧು ಅಂತ. ಹೌದು ನನ್ನನ್ನು ತಡೆದು ನಿಲ್ಲಿಸಿ ನನ್ನ ಹೆಸರಿನ್ ಅವಶ್ಯಕತೆ ನಿಮಗೇಕೆ

ಕ್ರಾಂತಿವೀರ:– ಅವಶ್ಯಕತೆ (ನಕ್ಕು) ಅವಶ್ಯಕತೆ ಅಷ್ಟೇ ಅಲ್ಲ ಅಪ್ಸರೆ. ನೀನು ಹೆಸರಿನ ತಕ್ಕಂತೆ ಸುರಲೋಕದ ಸುಂದರಿ. ನಿಮ್ಮಂತ ಸುಂದರಿಯರ ಸೀರೆಯನ್ನು ಬಿಚ್ಚಿ. ನಿನ್ನ ದೇಹದ ಅಂಗಾಂಗವನ್ನು ನಾ ಮುಟ್ಟಿ ಮುದ್ದಾಡಿ. ಚುಕ್ಕಿಯಂತೆ ಮಿನುಗುತ್ತಿರುವ ನಿನ ಕೆಂಪಾದ ಕೆನ್ನೆಗೆ ಮುತ್ತಿನ ಮಳೆಯನು ಸುರಿಸಿ. ಮೃದುವಾದ ನಿನ್ನ

ದೇಹದ ಸುಖ ಪಡುವುದಕ್ಕೆ ನಿಲ್ಲಿಸಿದ್ದೇನೆ. ಈ ನಿನ್ನ ದೇಹದಿಂದ ಐದು ನಿಮಿಷ ನನಗೆ ಸುಖ ಕೊಟ್ಟರೆ ನಿನಗೆ ಎಷ್ಟು ದುಡ್ಡು ಬೇಕು ಕೇಳು ಕೊಡುತ್ತೇನೆ

ಮಧು:– ಏ ಲೂಚ್ಚ. ಬಾಯ್ ಬಿಗಿ ಹಿಡಿದು ಮಾತನಾಡು. ನಿನ್ನ ಚ್ಲಿರೆ ಕಾಸಿನಾಸೆಗೆ ಚಿತ್ತ ಚಂಚೇಲಾ ಮಾಡಿಕೊಂಡು. ನಿನಗೆ ಸೆರಗು ಆಸುದ್ದವಕ್ಕೆ ನಾನೇನು ಸೊಳೆಯಲ. ಪವಿತ್ರವಾದ ಭಾರತ ಮಾತೆ ಮಡಿಲಲ್ಲಿ ಹುಟ್ಟಿ. ಗಂಡುಗಚ್ಚಿನು ಹಾಕಿ. ದುಡ್ಡಿನ ದುರಂಕಾರದಿಂದ ಮೇರೆಯುತ್ತಿರುವ ನಿಮ್ಮಂತ ಬಂಡ ಶ್ರೀಮಂತರ ಎದೆಗೆ ಒದ್ದು. ಉತ್ತರ ಕೊಡುವ ಗಂಡೆದೆ ಗರತಿ ನಾನು

ಕ್ರಾಂತಿವೀರ :– ಗಂಡೆದೆ ಗರತಿ (ನಕ್ಕು) ಕೇಳಲೇ ಇಂದಿನ ಗರತಿರ ಇತಿಹಾಸವನು. ಗಂಡನ ಎದುರು ಗರತಿ ಗಂಗವನಂತೆ ನಟಿಸಿ. ಗಂಡನೀಲದಾಗ ಮಿಂಡನಿಗೆ ಪೋನ ಹಚ್ಚಿ ಮನೆಗೆ ಕರಿಸಿಕೊಂಡು. ಮಿಂಡನಿಗೆ ಗಾದಿ ಮೇಲೆ ಸುಖ ಕೊಡುವ ಸೊಗಲಾಡಿಯಾರ ಎಷ್ಟಿಲ್ ಇಂದಿನ ಗರತಿಯರ ಇತಿಹಾಸದಲಿ. ಗಂಡನ ಗೆಳೆಯ ತುಂಬಾ ಹಣವಂತ ಇದ್ದರೆ. ಗಂಡನ ಎದುರು ಅಣ್ಣ ಎಂದು ಕರೆದು. ಯಾರು ಇಲ್ಲದ ಸಮಯದಲ್ಲಿ ಗಂಡನ ಗೆಳೆಯ ಮನೆಗೆ ಬಂದರೆ. ಅವನನ್ನು ಒಳಗಡೆ ಕರೆದು. ನಿನ್ನ ಮೇಲೆ ಮನಸಾಗಿದೆ ಎಂದು ಮಾತನಾಡಿ ಮರಳು ಮಾಡಿ. ಅವನೊಂದಿಗೆ ಸುಖಪಡುತ್ತಿರುವಾಗ ಗಂಡ ಬಂದರೆ. ಬಾಗಲ ತೋಳ್ನಲ್ಲಿ ಮಿಂಡನನ್ನು ಬಚ್ಚಿರಿಸಿ. ಗಂಡ ಒಳಗಡೆ ಬಂದ ತಕ್ಷಣ ಮಿಂಡನಿಂದ ಗಂಡನನ್ನು ಕೊಲೆ ಮಾಡಿಸಿ. ಚಿಲ್ಲದಲಿ ಮೂಟೆಕಟಿ ಹರಿಯುವ ಹೊಳೆಯಲ್ಲಿ ಬಿಸಾಕಿದಾರಲೇ. ಇಂದಿನ ಗರತಿಯರು. ಚಿಕ್ಕಪ್ಪ ದೊಡ್ಡಪ್ಪನ ಮಗ ಅಣ್ಣ ಆಗುತ್ತಾನೆ ಎಂದು ಗೊತ್ತಿದ್ದು. ಅದೇ ಅಣ್ಣನ ಮೇಲೆ ಮನಸ್ಸು ಮಾಡಿ. ನನ್ನ ಪ್ರೀತಿಯನ್ನು ಒಪ್ಪಿಕೊಳ್ಳದಿದ್ದರೆ ನಿನ್ನ ಹೆಸರು ಬರೆದಿಟ್ಟು ನಾನು ಸುಸೈಡ್ ಮಾಡಿಕೊಳ್ಳುತ್ತೇನೆ ಎಂದು ಬ್ಲಾಕ್ ಮೇಲ್ ಮಾಡಿ. ಅವನೊಂದಿಗೆ ತಮ್ಮ ಕಾಮದ ತಿಂಡಿ ತೀರಿಸಿಕೊಳ್ಳುವಾ ತೀಟಾನಗಿತ್ತಿಯರು ಎಷ್ಟಿಲ್ಲಲೆ ಈ ಸಮಾಜದಲ್ಲಿ. ಕೆಚ್ಚದೆ ಕನ್ನಡತಿ ಎಂದರೆ ಯಾರು ಗೊತ್ತಾ 18ನೆ ಶತಮಾನದಲ್ಲಿ ನಮ್ಮ ದೇಶಕ್ಕೆ ಮಸಾಲೆ ಮಾರದಕ್ಕೆ ಬಂದು. ಇಲ್ಲಿನ ಕಾನೂನು ಚೌಕಟ್ಟನ್ನು ತಿಳಿದುಕೊಂಡು. ನಮ್ಮ ದೇಶದಲ್ಲಿ ರಾಜ್ಯಭಾರ ಮಾಡುತ್ತಿರುವ ಬಂಡ ಬ್ರಿಟಿಷರು ಎದುರು ಗಂಡುಗಚ್ಚನ್ನು ಹಾಕಿ. ಕೈಯಲ್ಲಿ ಕ್ರಾಂತಿಯ ಕಡ್ಗವನು ಹಿಡಿದು. ಎದುರಾಳಿಯ ರುಂಡ ಚಂಡಾಡಿದಳ ಅಲ್ಲ ಆ ಮಹಾಮಾತೆ ಕಿತ್ತೂರ್ ರಾಣಿ ಚೆನ್ನಮ್ಮ. ಆ ತಾಯಿ ನಿಜವಾದ ಕನ್ನಡತಿ. ಆ ಸ್ಟೇಷನ್ ಮಾಸ್ತರ ಮಾತಿಗೆ ಮರುಳಾಗದೆ ತನ್ನ ಶೀಲವನ್ನು ಉಳಿಸಿಕೊಂಡು ಹೋಗಬೇಕೆಂದು. ಅವನ ರೂಮಿನಿಂದ ಹೊರಗಡೆ ಬಂದು ನಿಂತಾಗ. ತನ್ನ ಕರುಳಿನ ಕುಡಿಯನ್ನು ತುಂಡು ತುಂಡಾಗಿ ಕತ್ತರಿಸಿ ಹಾಕಿದರು. ಆ ಕೂಸಿನ ಅಂಗಾಂಗವನ್ನು ಉಡಿಯಲ್ಲಿ ತುಂಬಿಕೊಂಡು ಅವನ ಮಾತಿಗೆ ಹೆದರದೆ ತಕ್ಕ ಉತ್ತರವನ್ನು ಕೊಟ್ಟು. ಅವನಿಗೆ ಶಿಕ್ಷೆ ಆಗುವಂತೆ ಮಾಡಿದಳಲ್ಲ. ಆ ಕಡ್ಲಿಮಟ್ಟಿ ಕಾಶಿಬಾಯಿ. ಅವಳು

ನಿಜವಾದ ಗಂಡೆದೆಯ ಗರತಿ. ದಿನಕ್ಕೆ ಒಬ್ಬನಿಗೆ ಸೈಲ್ ಮಾಡಿ. ತಾಸಿಗೆ ಒಬ್ಬನಿಗೆ ಹುಬ್ಬು ಹಾರಿಸಿ ಬರುವ ನಿಮ್ಮಂತ ಚಿಲ್ಲರೆ ಹೆಣ್ಣುಗಳಲ್ಲಲೇ ಗರತಿಯರು. ಸುಮ್ಮನೇ ನಾನು ಹೇಳಿದಾಗೆ ಸೆರಗು ಆಸೆ ಸುಖ ಕೊಡ್ತೀಯಾ. ಇಲ್ಲ ನನ್ನ ಕೈಯಲ್ಲಿ ಸಾಯ್ತಿಯ ಹಾಂ ಹೇಳು

ಮಧು:– ಯಲು ಕಪಟ ಗುಣದ ಕೆಟ್ಟ ಮೃಗದಂತವ್ನೆ ನಿನಗೆ ಮಾನವೇತೆ ಅನ್ನೋದೇ ಇಲ್ಲವೇನೋ. ಥೂ ಚಿಮಾರಿ ಗಂಡಸೆ ನನ್ನ ಪ್ರಾಣ ಕಳೆದುಕೊಳ್ಳುತ್ತೇನೆ ವಿನಹ ನಿನಗೆ ಸೆರಗಾಸುವುದಿಲ್ಲ. ನೋಡು ನನ್ನ ದೇಹದ ಆಸೆಯನ್ನು ಬಿಟ್ಟು. ಬೇರೆ ಏನೆ ಹೇಳು ಕೇಳುತ್ತೇನೆ

ಕ್ರಾಂತಿವೀರ :– ಹಾಗಾದರೆ ನನ್ನ ಕೈ ಹಿಡಿದು ಒಂದು ಹಾಡನ್ನು ಹಾಡು

ಮಧು :– ಆಯ್ತು ನೀನು ಹೇಳಿದಂತೆ ಕೇಳುತ್ತೇನೆ. ಆದರೆ ನೀನು ನನ್ನ ಮಾತ್ರ ಮುಟ್ಟಬಾರದು.

ಕ್ರಾಂತಿವೀರ:– ಓಕೆ ಆಯ್ತು (ಹಾಡು ಹಾಡುವರು ಹಾಡು ಮುಗಿದ ನಂತರ)

ಮಧು:– ನಾನಿನ್ನು ಬರುತ್ತೇನೆ

ಕ್ರಾಂತಿವೀರ:– ಎ ಹುಡುಗಿ ನಿಂತುಕೋ. ನಿನ್ನ ಹಾಡು ಕೇಳಿದ ತಕ್ಷಣ ನಿನ್ನ ದೇಹದ ಮೇಲಿರುವ ಮೋಹ ಕಡಿಮೆಯಾಗುವುದಿಲ್ಲ. ಮೋಹದ ಮೊಬ್ಬಿನಲ್ಲಿ ಮುಳುಗಿದ ನಾನು. ನಿನ್ನನ್ನು ಮುಟ್ಟಿ ಮುಟ್ಟಿ ಮುದ್ದಾಡಲೇಬೇಕು ಬಾರಲೇ ಬಾ (ಕೈ ಹಿಡಿದು ಎಳೆಯುವನು)

ಮಧು:– ಕೈ ಬಿಡೊ ಪಾಪಿ ನನ್ನ ಪ್ರಾಣ ಕಳೆದುಕೊಳ್ಳುತ್ತೇನೆ ವಿನಹ ನನ್ನ ದೇಹವನ್ನು ಆರ್ಪಿಸುವುದಿಲ್ಲ. (ಕ್ರಾಂತಿವೀರಣ್ಣ ಕೈಯಲ್ಲಿರುವ ಮಚ್ಚನ ಕಸಿದುಕೊಂಡು ಕುತ್ತಿಗೆಗೆ ಹಿಡಿದುಕೊಳ್ಳುವಳು)

ಕ್ರಾಂತಿವೀರ:– ಬೇಡ ತಂಗಿ ಬೇಡ

ಮಧು:– (ಆಚಾರ್ಯದಿಂದ) ನಿನ್ನ ಬಾಯಲ್ಲಿ ತಂಗಿಯನ್ನು ಶಬ್ದವೇ

ಕ್ರಾಂತಿವೀರ:– ಹೌದು ತಂಗಿ ಈಗಿನ ಕಾಲದ ಹೆಣ್ಣುಗಳು ದುಡ್ಡಿನ ಆಸೆಗಾಗಿ ಎಂತೆಂಥ ಹೇಸುಕೃತ್ಯಗಳು ಮಾಡುತ್ತಿದ್ದಾರೆ. ಅವರಂತೆ ನೀನು ಇರಬಹುದೆಂದು ಈ ರೀತಿ ನಡೆದುಕೊಂಡೆ ಅಷ್ಟೇ

ಮಧು:– ಅಂದರೆ ನೀನು ಇಷ್ಟೊತ್ತು ನಡೆದುಕೊಂಡಿರುವ ರೀತಿ

ಕ್ರಾಂತಿವೀರ:– ಅದು ಈ ನಾಟಕದ ಒಂದು ಕರಾಳ ಸನ್ನಿವೇಶ. ಕವಿ ಕಲ್ಪನೆಯ ಸನ್ನಿವೇಶ ತಕ್ಕಂತೆ ನಡೆಸದಿದ್ದರೆ ಈ ನಾಟಕ ರಚಿಸಿರುವ ಕುಮಾರ್ ಹೇಮಂತ್ ಏನ್ ಕಡಿಯವರ ಕಟ್ಟಿದ ಕಲ್ಪನೆಯ ಕನಸಿಗೆ ಕಲ್ಲು ಹೋಗದಂತೆ ಆಗುತ್ತದೆ

ಮಧು:– ಅಂದರೆ ನಿನ್ನ ಹೆಸರು ಏನು ಅಣ್ಣ

ಕ್ರಾಂತಿವೀರ:– ನನ್ನ ಹೆಸರು ಕ್ರಾಂತಿವೀರ ಅಂತ. ನೀನು ನನ್ನ ಸ್ನೇಹಿತ ಮೈಲಾರನ ಹೆಂಡತಿ ಮಧು ತಾನೇ

ಮಧು:– ಹೌದು ಅಣ್ಣ

ಕ್ರಾಂತಿವೀರ:– ನಿನ್ನ ಬಗ್ಗೆ ಎಲ್ಲಾ ತಿಳಿದುಕೊಂಡೆ ಈ ರೀತಿ ನಟಿಸಿದೆ. ಯಾಕಂದರೆ ಈಗಿನ ಕಾಲದಲ್ಲಿ ಒಂಟಿ ಹೆಣ್ಣು ಸಿಕ್ಕರೆ. ಹೇಸಗಿ ಮಾಡೋ ಜಾಗದಲ್ಲಿ ಹಾಸಿಗೆ ಹಾಸೋ. ಕಚ್ಚೆ ಹರಕ ನನ್ನ ಮಕ್ಕಳು ಹೆಚ್ಚಾಗಿದ್ದರೆ ಈ ಸಮಾಜದಲ್ಲಿ. ಒಂಟಿಯಾಗಿ ನಿಮ್ಮಂತ ಹೆಣ್ಣು ಮಕ್ಕಳು ಅಡಿವಿ ಅರಣ್ಯದಲ್ಲಿ ತಿರುಗಾಡಬಾರದು. ಹಾಂ ತಂಗಿ ನಿನ್ನನ್ನು ಮನೆಯವರಿಗೆ ಕಳಿಸಿ ಬರುತ್ತೇನೆ ನಡೆಯಮ್ಮ

ಮಧು:– ಅಣ್ಣ ನಾನು ಕುರುದಡ್ಡಿಗೆ ಹೋಗಿ ಮರಿಗಳಿಗೆ ನೀರು ಕುಡಿಸಿ ಬರುತ್ತಿದೆ. ಅಷ್ಟರಲ್ಲಿ ನೀನು ಬಂದೆ ಅಣ್ಣ. ನಡೆ ಅಣ್ಣ ನಮ್ಮ ಮನೆಯಲ್ಲಿ ನೀನು ಊಟ ಮಾಡಿ ಹೋಗುವಂತೆ (ಹೋಗುವರು)

(ಅದೇ ಮಾರ್ಗವಾಗಿ ನವೀನ ಗ್ಯಾರೇಜ್ ಸಾಮಾಗ್ರಿಗಳೊಂದಿಗೆ ಹಾಡುತ್ತ ಪ್ರವೇಶಿಸಿ)

ನವೀನ:– ಅಲ್ರಿ ದುಡ್ಡೇ ದೊಡ್ಡಪ್ಪ ಎಂದು ಬದುಕುತಿರುವ ಈ ಸಮಾಜದಗ. ನಾವು ಹಿಂಗ ಇದ್ರ ಈ ಜನ್ಮದಾಗ ನನಗ ಮದುವೆ ಆಗೋದಿಲ್ಲ ಅಂತ ವಿಚಾರ ಮಾಡಿ. ಯಾವದೋ ಉದ್ಯೋಗ ಮಾಡಿದ್ರು ಪರವಾಗಿಲ್ಲ ವಟ್ಟ ದುಡ್ಡು ಮಾಡಬೇಕತೆಂಳಿ. ಹೋಗಿ ಗಜೇಂದ್ರಗಡದಾಗ ದೊಡ್ಡದಾಗಿ ಗ್ಯಾರೇಜ್ ಸುರುಮಾಡಿದೆ. ಎಲ್ಲ ಖರ್ಚ ತಗದ ಒಂದಿನಕ್ಕ ಎರಡರಿಂದ ಮುರುಸಾವಿರ ಲಾಭ ಸಿಗತಿತ್ತು. ಅದೇನೋ ಹಂತರಲ್ಲಲ್ರಿ ಮಳಿ ಹೆಚ್ಚಾದ್ರ ಕಸ ಬೆಳಿತೈತಂತ. ರೊಕ್ಕ ಹೆಚ್ಚಾದ್ರ ಸೊಕ್ಕು ಬರ್ತೈತಂತ. ಹಂಗ್ ರೊಕ್ಕ ಹೆಚ್ಚಾದ ಕೂಡಲೇ ನನಗೂ ಸ್ವಲ್ಪ ಸೋಕು ಬಂದ ಬಿಟ್ಟಿತ್ತು. ಯಾವದರ ಚಂದನ ಹುಡಿಗಿ ಗ್ಯಾರೇಜಿಗೆ ಬಂದು. ಗಾಡಿ ಕೆಲಸ ಮಾಡಿಸಿಕೊಂಡ ನನ್ನತ್ರ ಈಗ ರೋಕ್ಕಿಲ್ ಇನೊಮೆ ಬಂದಾಗ ಕೊಡುತ್ತೀನಂತ ಮೇತ್ತಾಗ ಮಾತಾಡಿದ್ರ ಸಾಕು. ಬಿಟ್ಟ ಕಳಸತಿದ್ಯಾ. ಹಿಂಗಾಗಿ ದಿನ್ ಒಂದು ಹುಡಿಗ್ಯಾರ್ ಬಣ್ಣದ ಮಾತ್ತು ಕೇಳಿ. ಇದ್ದ ಒಂದು ಗ್ಯಾರೇಜ್ ಮಾರಿ. ಕೈಯಾಗ ಸ್ವಾಮನ ಹಿಡಕೊಂಡು ತಿರಗಾಡುದು ಆಗೇತ್ರಿ ನನ್ನ ಜೀವನ. ಅದಕ್ಕ ಹೇಳ್ಯಾರಿ ಕವಿಗಳು ಹುಡಿಗ್ಯಾರ್ ಸಾವಾಸ ಜೀವನ ಪೂರ್ತಿ ವನವಾಸ ಅಂತ. ಇಷ್ಟು ದಿವಸ ಹಾಳಾದಂಗ ಇನಮುಂದ ಹುಡಿಗ್ಯಾರ್ ಮಾತ್ತು ಕೇಳಿ ಹಾಳ್ಳು ಆಗುದು ಬ್ಯಾಡ. ಆ ನಯನ ಟೀಚರ್ ನನಗ ಫ್ರೆಂಡ್ ಆಗಿ ಬಾಳ ಸಲಿಗಿಲೆ ಅದಾಳ. ಅಕಿಗೆ ಪ್ರಪೋಸ್ ಮಾಡತೀನಿ. ಹಾಕಿ ನನ್ನ ಪ್ರೀತಿಯ ಒಪ್ಕೊಂಡ್ರೆ ಆಕ್ಕಿನ ಮದುವೆ ಆಗಿಬಿಡುತ್ತೇನೆ (ನಯನ ಹಾಡುತ್ತ ಪ್ರವೇಶಿಸಿ)

ನಯನ:– ಆ ನವೀನ ಪ್ರವೀಣ ಫ್ರೆಂಡ್ ಆಗಿ ನನ್ನ ಜೋಡಿ ಬಾಳ ಸಲಗಿಲೆ ಅದರ. ಇಬ್ರೂ ಒಳ್ಳೆಯ ಹುಡುಗುರ ಅದಾರ ಇವರಿಬ್ಬರಿಗೆ ಪ್ರೀತಿ ಪ್ರೇಮದ ಹುಚ್ಚು ಹಿಡಿಸಿ ತಲೆ ಕೆಡಿಸಿ ಇವರಿಬ್ಬರದಾಗ ಯಾರ್ ಜಾಸ್ತಿ ರೊಕ್ಕ ಮಾಡುತ್ತಾರ ಅವನ ಮದುವೆ ಆಗಿಬಿಡತೀನಿ. ಹೌದ್ರೀ ಬದುಕಕ್ಕ ರೊಕ್ಕ ಬೇಕ. ರೊಕ್ಕ ಇದ್ರೆ ಒಳ್ಳೆ ಹೈಫೈ

ಜೀವನ ಮಾಡಬಹುದು. ಇವತ್ತು ಸಂಡೆ ಶಾಲೆ ರಜಾ ಐತಿ ಆ ನವೀನಗ ಪ್ರವೀಣಗ ಭೇಟಿಯಾಗಿ ಇವತ್ತು ಫುಲ್ ಎಂಜಾಯ್ ಮಾಡಿದ್ರಾಯ್ತು (ಒಂದು ಕಡೆ ನೋಡಿ) ಅಲೆ ನವೀನ ಇಲ್ಲಿ ನಿಂತಾನ. ಹಾಯ್ ಹಲೋ ನವೀನ

ನವೀನ:– ಬರ್ರಿ ಟೀಚರ್ ನಿಮ್ಮ ದಾರಿ ಕಾಯಿಕೂತ ನಿಂತಾನ್ರಿ ನಿಮ್ಮ ಲವ್ವರ್

ನಯನ:– ಹಾಂ ಏನೆಂದೂ ಹರಕ್ ಪಂಚರ

ನವೀನ:– ನಾ ಏನ್ ಅಂದಿಲ್ರಿ ಟೀಚರ. ಮತ್ತೇನರ ಐತಿನ್ರಿ ಹೊಸ ಸಮಾಚಾರ

ನಯನ:– ನಂದೇನ ಕೇಳತ್ತೀಯೋ ಸಮಾಚಾರ ನಮ್ಮ ಲೈಫ್ ಐತಿ ಬಾಳ ಸೂಪರ್

ನವೀನ:– ಅದಕ್ಕ ಅಂತೀನ್ರೀ ಟೀಚರ. ನಿಮ್ ಲೈಫ್ ಐತಿ ಸೂಪರ್. ನಿಮ್ಮಿಂದ ಬಿದ್ದ ಹುಡುಗುರ್ ಲೈಫ್ ಆಗೈತ್ರಿ ಪಾಪರ ಅದಕ್ಕಂತಾರ್ರೀ ಹಿರಿಯರು. ಶಾಲೆ ಕಲಿತ ಹುಡುಗಿಯರು ಬಾಳ ಡೇಂಜರ್

ನಯನ:– ನೀವೇನ್ ಹಗರಿದಿರೋ ಹುಡುಗರ ನಿಮ್ಮ ಬುದ್ಧಿ ಬಾಳ ಸುಮಾರು. ನಿಮ್ಮ ಲವರ್ ಇದ್ರೆನು ಎಷ್ಟು ಸುಂದರ. ಬ್ಯಾರೆ ಹುಡುಗಿಯರ ಮೇಲೆ ಇರತೈತಿ ನಿಮ್ಮ ನೆದರ

ನವೀನ:– ಸುತ್ತಿ ಬಳಸಿ ಮಾತಾಡೋದು ಬ್ಯಾಡ್ರಿ ಟೀಚರ್. ನಿಮ್ಮನ್ನ ಪ್ರೀತಿ ಮಾಡಾಕತ್ತಿನ್ರಿ ನಾ ಮನಸ್ಸಾರ. ನೀವು ಆಕಿರೇನ್ರಿ ನನ್ನ ಬಾಳಿನ ಫ್ಯೂಚರ್. ನನ್ನ ನಿನ್ನ ಜೋಡಿ ಅಕೈತ್ರಿ ಬಲ್ಲು ಸೂಪರ್

ನಯನ:– ಹಗಲಗನಸು ಕಾಣಬೇಡ ಜೋಕುಮಾರ. ನನಗೈತಿ ತಿಗಳ **25,000** ಪಗಾರ್. ನನ್ನ ಮದುವಿ ಅಕ್ಕಿನಂತಿಯಲ್ಲ. ನಿನಗೆ ಎಷ್ಟ ಐತಿ ಪಗಾರ

ನವೀನ:– ನನ್ನ ಪಗಾರ್ ಬಗ್ಗೆ ನೀವೇನ್ ಚಿಂತೆ ಮಾಡಬ್ಯಾಡ್ರಿ ಟೀಚರ್. ಒಂದಿನಕ್ಕ ಎರಡ ಸಾವಿರ ರಿಂದ ಹಿಡಿದ. ಮೂರು ಸಾವಿರ ತನಕ ಐತ್ರಿ ನನಗ ಪಗಾರ

ನಯನ:– ಅಂದ್ರ ಒಂದು ದಿನಕ್ಕೆ ಎರಡು ಸಾವಿರ. ಒಂದು ತಿಂಗಳಿಗೆ ಅರವತ್ತು ಸಾವಿರ. ಹಂಗಂದ್ರ ನಿನ್ನ ಮದುವೆ ಆಗಾಕ್ ನಾ ತಯಾರ

ನವೀನ:– ಹಂಗಂದ್ರ ಮತ್ಯಾಕ ತಡ ಹುಡುಗಿ. ಇದ ಖುಷಿಯಾಗ ಶುರು ಮಾಡು ಒಂದು. ಮನ ಕುಣಿಯುವಂತ ಮದರಂಗಿ ಡ್ಯಾನ್ಸ್

ನಯನ:– ಆಯ್ತು ಬಾರೋ ಹುಡುಗ. ನನ್ನ ಮನ ಕದ್ದ ತುಡುಗ. ನಮ್ಮ ಡ್ಯಾನ್ಸ್ ನೋಡಿ ಮುಂದ ಕುಂತು ಹುಡುಗುರ್ಗೆ ಬಿಟ್ಟು ಹೋಗಬೇಕು ನಡಗ (ಜೋಡಿ ಪದ ಮುಗಿದ ನಂತರ)

ನವೀನ:– ಹಾಂ ಹುಡುಗಿ ಇವತ್ತು ರವಿವಾರ ಗ್ಯಾರೇಜ್ ಗೆ ಗಾಡಿ ಬಾಳ ರಿಪೇರಿಗೆ ಬಂದಿರ್ತವು ನಾನು ಬರಲ್ಯಾ. ಹಾಂ ಅದೇ ಹುಡುಗಿ ನನ್ನ ನಿನ್ನ ಭೇಟಿ ಇನ್ ಯಾವಾಗ

ನಯನ:– ಯಾವಾಗ ಅಂತ ಕೇಳುತ್ತಿಯಲ್ಲೊ ಹುಡುಗ. ಅಲ್ಲಿ ಇಲ್ಲಿ ಭೇಟಿಯಾಗೋದು ಬೇಡ ನಾಳೆ ರಾತ್ರಿ **12** ಗಂಟೆ ಮ್ಯಾಗ ನಮ್ಮ ಮನೆ ಹತ್ತಿರ ಬಾ. ಅಲ್ಲೇ ಭೇಟಿಯಾಗುನಂತ

ನವೀನ:– ಹಂಗಾದ್ರ ನಾ ಇನ್ ಬರಲ್ಯಾ ಹುಡುಗಿ ಟಾಟಾ (ಹೋಗುವನು)

ನಯನ:– ಆಯ್ತು ಹುಡುಗ ಹೋಗಿ ಬಾ. ನಾನು ಸ್ವಲ್ಪ ಪಾರ್ಕಿಗೆ ಹೋಗಿ ಸುತ್ತಾಡಿಕೊಂಡು ಬಂದ್ರಾಯ್ತಿ (ಹೋಗುವಾಗ ಅಷ್ಟರಲ್ಲಿ ಪ್ರವೀಣ ಹಾಡುತ್ತಾ ಪ್ರವೇಶಿಸಿ)

ಪ್ರವೀಣ:– ಅಲ್ರೀ ಈ ಅಂಗಡಿ ವ್ಯಾಪಾರದಾಗ್ ಬರೆ ಉದ್ರಿನ ಅದ್ರ. ನಮ್ಮ ಜೀವನ ನಡೆಸುವುದು ಹೆಂಗ ಅಂತೀನಿ. ಮಧ್ಯಾಹ್ನ **3** ಗಂಟೆಯಿಂದ ಹಿಡಿದ. ಸಂಜೆ **6** ಗಂಟೆ ತನಕ ಬಲೇ ಚಂದ ಇರ್ತೈತ್ರಿ ನಮ್ ವ್ಯಾಪಾರ. **6:00** ಗಂಟೆಗೆ ಶುರು ಆಕೈತಿ ನೋಡ್ರಿ ನಮಗ ರಾಹುಕಾಲ. ಆ ಕಡೆಯಿಂದ ಬರುತ್ತವು ನೋಡ್ರಿ ನಮ್ಮಎಣ್ಣೆ ಮ್ಯಾಳ. ಬಂದರ ಏ ನನಗೊಂದು ಗೋಬಿ ಒಂದು ಪಾನಿಪುರಿ ಅಂತ ಹೇಳಿ ತಗೊಂಡು ತಿಂತಾರ. ತಿಂದ ಮೇಲೆ ರೊಕ್ಕ ಕೇಳಿದರೆ ನಾಳೆ ಕೊಡ್ತೀನಿ ಅಂತಾರ. ಉದ್ರಿ ಕೊಡಂಗ್ ಇಲ್ಲ ಅಂದ್ರ ಜಗಳಕ್ಕ ಬರತಾರ. ಹಿಂಗಾಗಿ ಕುಡುಕರ ಕೈಯಾಗ ಸಿಕ್ಕ ನಮ್ಮ ತಲೆ ಕೆಟ್ಟ ಹೋಗಿತ್ರೀ. ಇವತ್ತು ಹ್ಯಾಂಗಿದ್ರು ರವಿವಾರ ಐತಿ ಕಾಲೇಜು ರಜೆ ಇರುತ್ತಾವು ಯಾವ್ ಹುಡುಗಿಯರು ಬರುದಿಲ್ಲ ಅಂತೇಳಿ. ಅಂಗಡಿ ಬಂದ್ ಮಾಡಿ ಈ ಕಡೆ ಬಂದೀನಿ. ಇವತ್ತ ಏನರ ಆ ನಯನ ಟೀಚರ್ ಬೇಟಿಯಾದ್ರ ಅಕ್ಕಿಗೆ ಪ್ರಪೋಸ್ ಮಾಡಿ ನನ್ನ ಪ್ರೀತಿ ಹೇಳಿಬಿಡ್ತೀನಿ. ಮುಂದೇನಕೈತಿ ನೋಡೋಣ (ಒಂದ್ ಕಡೆ ನೋಡಿ) ಅಲೆ ನಾ ಅಂದಂಗ ಇಲ್ಲೇ ಹೊಂಟೈತಲ್ರೀ ಕನ್ನಡ ಸಾಲಿ ಟೀಚರ್. ನನ್ನ ಫೇವರೆಟ್ ಫಿಗರ್. ನಿಂದರಿ ಟೀಚರ್ ಎಲ್ಲಿಗೆ ನಡೆಸಿರಿ ಪ್ರಯಾಣ ಜೋರಾ

ನಯನ:– ಇಂವ ಯಾವ ಬಂದ್ನಾ ಅಂತೀನಿ (ಹೊಳಿ ನೋಡಿ) ಓಹೋ ಪಾನಿಪುರಿ ಫೇಸಲಿಸ್ಟ್ ಪ್ರವೀಣ ನೀನೇನೋ ಈ ಕಡೆ ಹೊಂಟಿಯಲ್ಲ

ಪ್ರವೀಣ:– ದಿನಾ ಅಂಗಡಿ ಕೆಲಸ ಮಾಡಿ ಮಾಡಿ ಬ್ಯಾಸರಾಗೈತ್ರಿ. ಅದಕ್ಕ ಇವತ್ತೊಂದು ದಿನ ಅಂಗಡಿ ಬಂದ ಮಾಡಿ ಈ ಕಡೆ ಬಂದೀನಿ ನೋಡ್ರಿ. ನೀವು ಎಲ್ಲಿಗೆ ಹೊಂಟ್ರೆಲ್ರಿ ಟೀಚರ್

ನಯನ:– ನಾ ಎಲ್ಲಿಗೋಲೋ ಪ್ರವೀಣ. ಇವತ್ತು ಸಂಡೆ ಅಲ್ಲ ಅದಕ್ಕ ಶಾಲೇ ಸೂಟಿ ಐತಿ. ಮನ್ಯಾಗ ಕುಂತು ಕುಂತು ಬ್ಯಾಸರಾಗಿತ್ತಾ ಅದಕ್ಕ ಸ್ವಲ್ಪ ಹೊರಗಡೆ ಸುತ್ತಾಡ್ಕೊಂಡು ಬರೋಣ ಅಂತ ಪಾರ್ಕಿನ್ ಕಡೆ ಹೊಂಟಿನಿ ನೋಡು ಪ್ರವೀಣ

ಪ್ರವೀಣ:– ಬ್ಯಾಸರ ಅಕೈತ್ರಿ ಮತ್ತ. ಉಪ್ಪುಕಾರ ತಿಂದ ಜೀವ. ಸಿಂಗಲ್ ಆಗಿದ್ರ ಬ್ಯಾಸರ ಆಗಲೇ ಇರುತ್ತೀನ್ರೀ ಟೀಚರ್. ಸಿಂಗಲ್ ಆಗಿರೋದ್ ಬಿಡ್ರಿ ಯಾರ್ ಜೋಡಿಯರ ಮಿಂಗಲ್ ಆಗ್ರಿ

ನಯನ:– ನಾನು ಮಿನ್ಗಲ್ ಆಗ್ಬೇಕಂತ ಹೇಳಿ ಭಾಳ ಹುಡುಕ್ಯಾಡಕತ್ತಿನೋ ಹುಡುಗ. ಆದರ ನನ್ನ ಮನಸ್ಸಿಗೆ ಬರುವಂಥ ಒಂದು ಹುಡುಗರು ನನಗ ಸಿಗೋವಲ್ರು

ಪ್ರವೀಣ:– ನಿಮ್ಮ ಮನಸ್ಸಿಗೆ ಬರುವಂಥ ಹುಡುಗರ ಹೆಂಗಿರಬೇಕು ಹೇಳ್ರಿ ಟೀಚರ್

ನಯನ:– ನೋಡ ಹುಡುಗ ನಾನು ಮದುವೆಯಾಗೋ ಹುಡುಗ. ಗೋರ್ಮೆಂಟ್ ನೌಕ್ರಿ ಮಾಡುತ್ತಿರಬೇಕು. ತಿಂಗಳು 20 ರಿಂದ 30 ಸಾವಿರ ಪಗಾರ ಇರಬೇಕು. ಅಂತ ಹುಡುಗುಣ ಮದುವಿ ಹಾಕಿನಿ ನೋಡು

ಪ್ರವೀಣ:– ನೌಕ್ರಿ ಮಾಡು ಹುಡುಗ ಬ್ಯಾಡ್ರಿ. ನನ್ನಂತ ಬಿಜಾನೆಸ್ ಮಾಡು ಹುಡುಗನ ಮದಿವ್ಯಾಗ್ರಿ ನಿಮ್ಮ ಜೀವನ ಹ್ಯಾಪಿಯಾಗಿ ಇರತೈತಿ. ನನ್ನಗೂ ನಿಮ್ಮ ಮ್ಯಾಗ ಬಾಳ ಮನಸೈತಿ
ನೀವು ನನ್ನ ಪ್ರೀತಿ ಒಪ್ಪಕೊಂಡ್ರ ನಿಮ್ಮನ ಸುಖದಾಗ ಇಡತೀನಿ

ನಯನ:– ನನ್ನ ನೀ ಏನ ಸುಖದಾಗ ಇಡುತ್ತೀಯೋ ಜೋಕುಮಾರ. ನಾ ಹೇಳಿದಷ್ಟ ಐತೆನ ನಿನಗ ಪಗಾರ

ಪ್ರವೀಣ:– ನನ್ನ ಪಗಾರ ಕೇಳಿದ್ಯಾ ಹುಡುಗಿ. ದಿನ ನನ್ನ ಅಂಗಡಿಯ ವ್ಯಾಪಾರದಾಗ ದುಡಿತೀನಿ ನಾಲ್ಕು ಐದು ಸಾವಿರ. ನೀ ನನ್ನ ಮದುವೆಯಾಗಿರ ನೋಡು ನಿನ್ನ ಸುಖದಾಗ ಇಡ್ತೀನಿ ಪೂರ

ನಯನ:– ನನ್ನ ನೀ ಸುಖದಾಗ್ ಇಡ್ತಿಯಾ. ಅದೆಂಗ್ ಇಡ್ತಿ ಹೇಳ ನನಗ

ಪ್ರವೀಣ:– ನೋಡು ಹುಡುಗಿ. ನಿನಗೇನಾರ ಬ್ಯಾಸರ ಆಗಿ ಕೆಳಗಡೆ ಮಲಕೊಂಡೇಂದ್ರ. ನಿನ್ ಎತ್ಕೊಂಡ್ ಹೋಗಿ ಕಾಟದ ಮ್ಯಾಗ ಹಾಕಿ. ನಿನವು ಎರಡು ಹಿಡಿದ ಹಿಚಿಗಿ ಹಿಚಿಗಿ. ಮತ್ತ ನಿನ್ನವು ಎರಡು ಕಾಲ ಮ್ಯಾಕೆತ್ತಿ ಕಾಟಕ ಹಾಕಿ ತಿಕ್ಕ ಹತ್ತಿನೇಂದ್ರ. ದಮ್ ಹತ್ತಿ ಬೆವರು ಬರೋದು ನೋಡಿ. ನೀನ ಸೆರಗಿಲೆ ಬೆವರು ಒರೆಸಿ ಸಾಕು ಸಾಕಂದಿರಬೇಕು ಹಂಗ ಮಾಡ್ತೀನಿ

ನಯನ:– ಎ ಎ ನಿಮ್ಮೌನ್ ಏನದು ಮಾಡೋದು

ಪ್ರವೀಣ:– ನಿನ್ನ ಬಾಡಿ ಮಸಾಜ್ ಹುಡುಗಿ

ನಯನ:– ಮತ್ತೆ ನೀನು ಎರಡು ಹಿಡಿದು ಹಿಚಿಗತೀನಿ ಅಂದಿಯಲ್ಲ ಅವು ಏನು

ಪ್ರವೀಣ:– ಅದ ಹುಡುಗಿ ನಿನ್ ಎರಡು ಕೈ ಅಂದ್ಯಾ

ನಯನ:– ಮತ್ತೆರಡು ಕಾಲು ಮ್ಯಾಲೆ ಎತ್ತಿ. ಕಟಕ್ ಹಾಕಿ ಮಾಡ್ತೀನಿ ಅಂದ್ಯಲ್ಲ ಅದೇನು

ಪ್ರವೀಣ:–ಏ ಹುಡುಗಿ ನೀನು ಕೆಲಸ ಮಾಡಿ ಸುಸ್ತಾಗಿ ಬಂದಿರ್ತೀಯಲ್ಲ. ಆಗ ನೀನ ಎರಡು ಕಾಲಿಗೆ ಕೊಬರಿ ಎಣ್ಣಿ ಹಚ್ಚಿ ಮಸಾಜ್ ಮಾಡ್ತೀನಿ ಅಂದ್ಯಾ

ನಯನ:– ಹಂಗದ್ಯಾ ಉಳಕೊಂಡಿ ಮಗನ (ಸ್ವ) ಅಲ್ರಿ ಇಂವ ನಾ ಅಂದಂಗ ನನ್ನ ಬಾಳ ಪ್ರೀತಿಯಿಂದ ನೋಡ್ಕೊಂತಾನ. ನಾ ಇವನ ಮದುವೆಯಾಗಿ ಬಿಡ್ತೀನಿ (ಪ್ರ) ಆಯ್ತು ಹುಡುಗ ನಿನ್ನ ಪ್ರೀತಿ ಮೆಚ್ಚಿ ಮದುವೆಯಾಗಾಕ ಒಪ್ಕೊಂಡಿನಿ. ಆದ್ರ ನಂದು ಒಂದು ಕಂಡೀಶನ್ ಇಗಿಂದ ದೀಗ ಮದುವೆಯಾಗೋದು ಬೇಡ. ಸ್ವಲ್ಪ ದಿನ ಪ್ರೀತಿ ಮಾಡ್ಕೊಂತ ಇರುನು. ಮುಂದೊಂದು ದಿನ ಒಳ್ಳೆ ದಿವಸ ನೋಡಿ ಮದುವೆಯಾಗ್ಬಿಡೋಣ. ನಾ ಇನ್ ಬರಲ್ಯಾ

ಪ್ರವೀಣ:– ನಿಂದ್ರ ನನ್ನ ಮನ ಕದ್ದ ಚೋರಿ. ಹೋಗ್ಬೇಡ ನೀ ಪಾರಿವಾಳದಂಗಾ ಹಾರಿ. ನೀ ನನ್ನ ಮದುವೆಯಾಗಕ್ಕ ಒಪ್ಪಿಕೊಂಡ ಈ ಖುಷಿಯಾಗ. ಈ ನಿನ್ನ ಗೆಳೆಯನ ಕೈ ಹಿಡಿದ ನವಿಲು ನಂತೆ ನಾಟ್ಯ ಮಾಡುಬಾರ ನನ್ನ ನಾಟ್ಯ ಮಯೂರಿ

ನಯನ:– ಆಯ್ಯೋ ನನ್ನ ಬಾಳಿನ ಸರದಾರ. ಮತ್ಯಾಕ ತಡ. ಶುರು ಮಾಡೇ ಬಿಡು ಫುಲ್ ಜೋರಾ

(ಜೋಡಿ ಪದ. ಮುಗಿದ ನಂತರ ಇಬ್ಬರು ಜೊತೆಯಾಗಿ ಹೋಗುವರು)

ಪ್ರವೇಶ 9

ರಸ್ತೆ ಪರದೆ

(ಮಾಂತೇಶ ರೌಡಿ ವೇಷದಲ್ಲಿ ಮಚ್ಚು ಹಿಡಿದು ಪ್ರವೇಶಿಸಿ ಸಿಗರೇಟ್ ಹಚ್ಚಿ ಸಿಟ್ಟಿನಿಂದ)

ಮಾಂತೇಶ:– ಸರ್ಕಾರ (ನಕ್ಕು) ಲಂಚ ಎಂಬ ಮಂಚ ಹತ್ತಿದ ಈ ಲಜ್ಜೆಗೆಟ್ಟ ಸರ್ಕಾರದಲ್ಲಿ. ನ್ಯಾಯ ನೀತಿ ನಿಷ್ಠೆ ಇಂದ. ಸತ್ಯ ಧರ್ಮದಿಂದ. ಕರ್ತವ್ಯ ಮಾಡುವ ನನಂತ ನಿಷ್ಠಾವಂತ. ಅಧಿಕಾರಿಗಳಿಗೆ ಎಲ್ಲಿದೆ ಬೆಲೆ. ದಿನ್ ನಿತ್ಯ ಶ್ರೀಮಂತರ ಕೈಯಲ್ಲಿ ಲಂಚಯನ್ನುವ ಹುಚ್ಚೇ ಕುಡಿಯೋ ಲೂಚ್ಚಾ ನನ್ನ ಮಕ್ಕಳಿಗೆ ಇದೆ ಈ ಸರ್ಕಾರದಲ್ಲಿ ಬೆಲೆ. ತಮ್ಮ ಹೆಂಡರ ಮಕ್ಕಳನ್ನು ಬಿಟ್ಟು. ಕರ್ತವ್ಯನೆ ದೇವರು ಎಂದು. ಸರ್ಕಾರದ ಕೆಲಸ ದೇವರ ಕೆಲಸ ಎಂದುಕೊಂಡು. ದಿನ್ ನಿತ್ಯ ತಮ್ಮ ಜೀವನ ಮೂಡಿಪಾಗಿ ಇಟ್ಟಿರುವ ನಮ್ಮಂತ ನಿಷ್ಠಾವಂತ ಅಧಿಕಾರಿಗಳಿಗೆ ಮೊಟ್ಟ ಮೊದಲು ಸಿಗುವ ಬಹುಮಾನ ಯಾವದು ಗೊತ್ತ. ಪದೇ ಪದೇ ಸ್ಟಾನ್ಸರ್ ಕೊನೆಗೆ ಒಂದು ದಿನ್ ಸಸ್ಪೆಂಡ ಪೆಂಡ. ದೊಡ್ಡ ದೊಡ್ಡ ಶ್ರೀಮಂತರು ತಾವು ಮಾಡಿದ ಹೇಸಿ ಕೃತ್ಯವನ್ನು ಮುಚ್ಚಿ ಹಾಕೋಕ್ಕೆ. ಲಂಚದ ಸೂರಿ ಮಳೆಯನ್ನು ಸುರಿಸುತ್ತಾರೆ. ಅವರ ಹೆಂಜಲ್ಲದ ದುಡ್ಡಿನ ಆಸೆಗೆ ಕೈಚಾಚುವಂತ ಲೂಚ್ಚ ಅಧಿಕಾರಿಗಳು ಹೆಚ್ಚಾಗಿದ್ದಾರೆ ಈ ನಮ್ಮ ಸರ್ಕಾರದಲ್ಲಿ. ಇಂತವರು ಇರುವರೆಗೂ ನಮ್ಮಂತವರಿಗೆ ಎಲ್ಲಿದೆ ಬೆಲೆ (ಸಿಟ್ಟಿನಿಂದ) ಲೇ ರಾಜೇಂದ್ರ. ನನ್ನ

ಮೇಲಿನ ಅಧಿಕಾರಿಗಳನ್ನು ನಿನ್ನ ಕೈ ಗುಲಾಮರಾಗಿ ಮಾಡಿಕೊಂಡು. ನನ್ನನ್ನು ಸಸ್ಪೆಂಡ ಮಾಡಿಸಿ ನೀನ್ನ ದಾರಿ ಸರಳವಾಯ್ತು ಎಂದು ನೀನು ತಿಳಿದಿರಬಹುದು. ಆದರೆ ನೀನೆಗೇನು ಗೊತ್ತುಲೇ. ಈ ಮಾಂತೇಶನ ಅಸಲಿ ಆಟ ಈಗ ಸೂರುವಯ್ತಿ ಅಂತ. ಲೇ ರಾಜೇಂದ್ರ ನಿನ್ನ ಪ್ರತಿಯೊಂದು ದೋಣ ನಂಬರ್ ದಂದೆಯನ್ನು ಬೈಲಿಗೆ ಎಳೆಯದು. ನೀನು ಯಾವ ಕೆಲಸ ದಿಂದ ಸರ್ಕಾರದ ಕಣ್ಣಿಗೆ ಮಣ್ಣು ಏರಿಚಿದಿಯೋ. ಅದೇ ಸರ್ಕಾರದಿಂದ ನಿನಗೆ ತಕ್ಕ ಪಾಠ ಕಲಿಸದ್ದಿರೆ. ನನ್ನ ಹೆಸರು ಮಹೇಶ ಮೈಲಾರನ ಸಹೋದರ ಮಾಂತೇಶನ ಅಲ್ಲ (ನಕ್ಕು ಹೋಗುವಾಗ. ಕ್ರಾಂತಿವೀರ ಪ್ರವೇಶಿಸಿ)

ಕ್ರಾಂತಿವೀರ:– ಇದೇನು ಮಾಂತೇಶ್. ಮೈ ಮೇಲೆ ಕಾಖಿ ಬಟ್ಟೆ ಹೆಗಲ ಮೇಲೆ ತ್ರಿಬಲ್ ಸ್ಟಾರ್. ಕೈಯಲ್ಲಿ ಪೊಲೀಸ್ ಲಾಠಿ. ತಲೆ ಮೇಲೆ ಸಿಂಹ ಲಾಂಛನದ ಟೋಪಿಯನ್ನು ಹಾಕಿಕೊಳ್ಳೋದು ಬಿಟ್ಟು. ಈ ರೀತಿ ರೌಡಿ ವೇಷ ಧರಿಸಿ ಕೈಯಲ್ಲಿ ಮಚ್ಚು ಹಿಡಿದು ಬಲ್ಲು ಕೊಪ್ಪದಿಂದ ಎಲ್ಲಿಗೆ ಹೊರಟಿದಿಯಾ ಮಾಂತೇಶ್. ಕಾನ್ನುನ್ನು ಕಾಯಬೇಕಾದ ನಿನಂತ ನಿಷ್ಠಾವಂತ ಅಧಿಕಾರಿ ಕಾಖಿ ಬಟ್ಟೆಯನ್ನು ಬಿಚ್ಚಿ ರೌಡಿ ವೇಷ ತೊಟ್ಟು ಹೋದರೆ. ಬಂಡ ರೌಡಿಗಳನ್ನು ಮಟ್ಟ ಹಾಕೋರ್ಯಾರು

ಮಾಂತೇಶ:– ಕಾಖಿ ಬಟ್ಟೆ (ನಕ್ಕು) ಕ್ರಾಂತಿವೀರ ಕಾಖಿ ಬಟ್ಟೆಯನ್ನು ತೊಟ್ಟು ನ್ಯಾಯ ನೀತಿ ನಿಷ್ಠೆ ಇಂದ ಸರ್ಕಾರದ ಕೆಲಸ ಮಾಡೋದಕ್ಕೆ ಹೋದರೆ ನಮ್ಮನ್ನು ಎಲ್ಲಿ ಬಿಡುತ್ತಾರೆ ಈಗಿನ ದುಷ್ಟ ರಾಜೀರ್ಕಾಣಿಗಳು

ಕ್ರಾಂತಿವೀರ:– ಅಂದರೆ ನಿನ್ನ ಮಾತ್ತಿನ ಅರ್ಥ

ಮಾಂತೇಶ:– ಕ್ರಾಂತಿವೀರ ಒಬ್ಬ ದುಷ್ಟ ನನ್ನ ಮಗ ರಾಜರ್ಕಾನಿ ತನ್ನ ಹಾಳುಗಳಿಂದ ಒಬ್ಬ ಅಮಾಯಕ ಹರೀಶ್ ಕಾಟ್ಟಿಕ್ರರ್ ಎಂಬ ವ್ಯಕ್ತಿಯನ್ನು ಕೋಲೆ ಮಾಡಿಸಿದ. ಆ ಕೇಸಿನ ವಿಚಾರಕಾಗಿ ಅವನ್ನನ್ನು ನಾನು ಅರೆಸ್ಟ್ ಮಾಡಿದೆ. ಆದಕ್ಕೆ ಅವನ್ನು ನನ್ನನ್ನು ಆರು ತಿಂಗಳ ಸಸ್ಪೆಂಡ ಮಾಡಿಸಿದ್ದಾನೆ. ನಾವು ಅಧಿಕಾರದಲ್ಲಿ ಇದ್ದರೆ. ನಮ್ಮ ಮೇಲಿನ ಅಧಿಕಾರಿಗಳು ತಮ್ಮ ಅಧಿಕಾರವನ್ನು ಛಲಾಯಿಸುತ್ತಾರೆ. ಅವರಾಕುವ ತಾಳಕ್ಕೆ ತಕ್ಕಂತೆ ನಟಿಸಬೇಕೆಂದು ಆರ್ಡರ್ ಮಾಡುತ್ತಾರೆ. ಅದಕ್ಕೆ ಅವರ ಕೈಗೊಂಬೆಯಾಗಿ ಆಗೋಕಿಂತ. ಈ ರೌಡಿ ವೇಷ ಧರಿಸಿ ಕೈಯಲ್ಲಿ ಮಚ್ಚು ಹಿಡಿದು. ರೌಡಿಗಳಿಗೆ ರೌಡಿ ಆಗಿ. ಪುಂಡರಿಗೆ ಮಹಾ ಪುಂಡನಾಗಿ. ಬಡವರ ಮೇಲೆ ದರ್ಬಾರ್ ಮಾಡುವ ಬಂಡ ಶ್ರೀಮಂತರಿಗೆ. ಗಂಡನಾಗಿ. ದುಷ್ಟ ರಾಜರ್ಕಾನಿಗಳ ಸಂಹಾರಕಾಗಿ ರಾಕ್ಷಸನಾಗಬೇಕೆಂದು ನಿರ್ಧಾರ ಮಾಡಿದೆನೇ

ಕ್ರಾಂತಿವೀರ:– ಮಾಂತೇಶ ನೀನು ಹೇಳುವ ಪ್ರತಿಯೊಂದು ಮಾತ್ತಿನಲಿ ಸತ್ಯವಿದೆ. ಆದರೆ ಅಧಿಕಾರ ಎಂಬ ಅಯೋಧ ಕೈಯಲ್ಲಿದ್ದರೆ ಏನು ಬೇಕಾದ್ರೂ ಮಾಡಬಹುದು. ಯಾಕಂದರೆ ಪಂಜರದಲ್ಲಿ ಇರುವ ಸಿಂಹಕು. ಕಾಡಿನಲ್ಲಿ ರಾಜ್ ರೋಷವಾಗಿ ತಿರುಗಾಡುವ ಸಿಂಹಕು ಬಾಳ ವೆತ್ಯಾಸವಿದೆ ಮಾಂತೇಶ್. ಅದಕ್ಕೆ ನೀನು

ಅಧಿಕಾರದಲ್ಲಿದ್ದರೆ. ಕಾಡಿನಲ್ಲಿರುವ ಸರ್ಕಾರದ ಸಿಂಹ ಇಂದ್ದಂತೆ ನೀನು. ಮಾಂತೇಶ ನಿನನ್ನು ಸಸ್ಪೆಂಡ ಮಾಡಿಸಿದ ಆ ರಾಜರ್ಕಾನಿ ಯಾರು

ಮಾಂತೇಶ:– ಕ್ರಾಂತಿವೀರ ಅವನ್ನು ಈ ತಾಲೂಕಿನ ಎಂ ಎಲೆ ರಾಜೇಂದ್ರ ಅಂತ

ಕ್ರಾಂತಿವೀರ:– ಇರಲಿ ಬಿಡು ಮಾಂತೇಶ. ನೀನು ನಿನ್ನ ಅಧಿಕಾರದ ಕಡೆ ಗಮನ ಕೊಡು. ನಿನಗೇನಾದರೂ ಸಹಾಯ ಬೇಕಾದರೆ ನನಗೊಂದು ಫೋನ್ ಮಾಡು ತಕ್ಷಣ ಬರುತೇನೆ

ಮಾಂತೇಶ:– ಓಕೆ ಕ್ರಾಂತಿವೀರ ನೀ ಹೇಳಿದಂತೆ ಆಗಲಿ. ಮುಂದೆ ಒಂದು ದಿನ್ ಸಮಯ ಬಂದಾಗ ನಾವಿಬ್ರು ಜೋಡಿ ಹುಲಿಗಳಾಗಿ ಆ ದುಷ್ಟ ಶ್ರೀಮಂತರನ್ನು ದ್ವಂಶ ಮಾಡೋಣ (ನಕ್ಕು) ಕ್ರಾಂತಿವೀರ ನಾನಿನ್ನು ಬರುತೇನೆ (ಹೋಗವನು. ಹೋದ ಮೇಲೆ ಕ್ರಾಂತಿವೀರ ಸಿಗರೇಟ್ ಹಚ್ಚಿ)

ಕ್ರಾಂತಿವೀರ:– ಎಂ ಎಲೆ ರಾಜೇಂದ್ರ (ನಕ್ಕು) ಲೇ ರಾಜೇಂದ್ರ. ನಾನೇ ಕಲಿಯುಗದ ಕರ್ನನೆಂದು ಕಂಡವರ ಮೇಲೆ ಕರಿ ಕಾಳಿಂಗ ಸರ್ಪದಂತೆ ಬೋರಗರಿತಿದಿಯ ಕತ್ತೆ ನನ್ನ ಮಗನೆ. ಆ ನಿನ್ನ ಕುಟ್ಟಿಲ್ ಕಾರಸ್ತಾನವನ್ನು ಕಡೆಗಣಿಸುವದ್ದಕ್ಕೆ ಸಿದ್ದನ್ನಾಗಿ ಬಂದಿದ್ದಾನೆ. ಈ ಕರ್ತನಕ ಕೀಲರ್ ಕ್ರಾಂತಿವೀರ (ನಕ್ಕು) ಲೆ ರಾಜೇಂದ್ರ ನನ್ನನು ನೀವು ಕರೆಸಿಕೊಂಡಿದು ಆ ಮೈಲಾರನ ಸಂಹಾರ ಮಾಡುದಕಲ್ಲ. ನನ್ನ ಕೈಯಲ್ಲಿ ನಿವು ಸಂಹಾರ ಆಗೋಕ್ಕೆ (ನಕ್ಕು) ಈ ಕ್ರಾಂತಿವೀರನ ಸಿದ್ಧಾಂತ ನಿಮಗೆ ಗೊತ್ತಿರಬೇಕಲ್. ಒಳೆವರಣ ಕಂಡ್ರೆ ಪ್ರಾಣ್ಣ ಕೊಡತ್ತಾನೆ. ಕೆಟ್ಟವರಣ ಕಂಡ್ರೆ ಪ್ರಾಣ್ಣ ತಗಿತ್ತಾನೆ ಇದೆ ಈ ಕ್ರಾಂತಿವೀರನ ಸ್ಪೆಷಲಿಟಿ ಬರುತೇನೆ (ನಗುತ್ತ ಹೋಗುವನು)

ಮಹೇಶನ ಮನೆ

(ಮೈಲಾರ ಹೊರಗಿನಿಂದ ಬರುವನು)

ಮೈಲಾರ:– ಅಣ್ಣ ಅತ್ತಿಗೆ

ಮಧು:– (ಪ್ರವೇಶಿಸಿ) ಬನ್ನಿ ರಿ

ಮೈಲಾರ:– ಅಣ್ಣ ಅತ್ತಿಗೆ ಮಾಂತೇಶ. ಯಾರು ಮನೆಯಲ್ಲಿ ಇಲ್ಲವೇ

ಮಧು:– ಇಲ್ಲ ರಿ ಮಾವನವರು ಹೊರಗಡೆ ಹೋಗಿದ್ದಾರೆ. ಮಾಂತೇಶ ಅಣ್ಣ ಡ್ಯೂಟಿಗೆ ಹೋದವನ್ನು ಬಂದಿಲ್ಲ. ಇನ್ನು ಅಕ್ಕ ಒಳಗಡೆ ಅಡುಗೆ ಮಾಡುತ್ತಿದ್ದಾಳೆ. ನೀವು ಬೇಗ ಕೈ ಕಾಲು ಮುಖ ತೊಳೆದುಕೊಂಡು ಬನ್ನಿ. ಊಟ ಮಾಡುವರಂತೆ. ನಾನು ನಿಮಗೆ ಊಟಕ್ಕೆ ರೆಡಿ ಮಾಡುತೇನೆ (ಹೋಗುವಾಗ)

ಮೈಲಾರ:–(ತಡೆದು) ನಿಂತ್ತಕೊಳ್ಳಿ ಮಧುವರೇ

ಮಧು:- ಯಾಕ್ರಿ

ಮೈಲಾರ:- ನೋಡಿ. ಅವತ್ತು ನನ್ನ ಅಣ್ಣ ಅತ್ತಿಗೆ ಮಾತ್ತಿಗೆ ಕಟ್ಟು ಬಿದಿದು. ನಾನು ಮದುವೆ ಆಗಲು ಒಪ್ಪಿಕೊಂಡೆ. ಆದರೆ ಅವತ್ತು ನಿಮ್ಮ ಒಪ್ಪಿಗೆಯನ್ನು ಕೇಳಲಿಲ್ಲ. ನಿಮಗೆ ನನ್ನನು ಮದುವೆಯಾಗಲು ಒಪ್ಪಿಗೆ ಇದೆಯಾ. ಯಾಕಂದ್ರೆ ನಾನೊಬ್ಬ ಕುರಿ ಕಾಯೋ ಹಳಿಯ ಹುಂಮ್. ನೀವು ಸಾಕಷ್ಟು ಶಿಕ್ಷೆಣ ಕಲಿತ ವಿದ್ಯಾವಂತಿ

ಮಧು:- ನೋಡಿ. ತಂದೆ ತಾಯಿಯನ್ನು ಕಳಿದುಕೊಂಡು ಅನಾಥಳದ ಈ ತಬ್ಬಲಿಗೆ. ತಾಯಿಯ ಪ್ರೀತಿಯನ್ನು ಕೊಟ್ಟು. ಈ ಮನೆ ಸೊಸೆಯಾಗುವ ಸೋಭಾಗ್ಯವನ್ನು ಕೊಟ್ಟು. ನನ್ನನ್ನು ನಿಮ್ಮಂತ ಗುಣವಂತನ ಮಾಡದಿಯಾಗಿ ಮಾಡಿದ್ದಾಳೆ ಆ ನನ್ನ ಅಕ್ಕ. ಅವಳಿಗೆ ಒಪ್ಪಿಗಿದೆಯಲ್ಲ ನನಗೆ ಯಾವ ಅಭ್ಯಂತರವೂ ಇಲ್ಲ. ನಿಮ್ಮನ್ನು ಮದುವೆಯಾಗಲು ನನ್ನ ಮನಸ್ಸು ಪೂರ್ತಿಯಾಗಿ ಒಪ್ಪಿಕೊಂಡಿದ್ದೆನೆ

ಮೈಲಾರ:- ಮೆಚ್ಚಿದೆ ಮಧು ನಿನ್ನ ನಿಚ್ಚಳವಾದ ಮಾತಿಗೆ ಯಾಕಂದರೆ ವಿದ್ಯಾವಂತಿಯರ ಆವಿದ್ಯಾ ವಂತರ ಮದ್ಯ ಗೊಂದಲಗಳು **108** ಆಗಿದ್ದವೇ ಈ ಸಮಾಜದಲ್ಲಿ. ಅದಕ್ಕಾಗಿ ನಿನ್ನನ್ನು ಈ ರೀತಿ ಕೇಳಿದೆ. ಮಧು ನಿನ್ನಂತ ಬುದ್ಧಿವಂತಿ ಹೆಂಡತಿಯನ್ನು ಪಡೆದ ನಾನೇ ಪುಣ್ಯವಂತ

ಮಧು:- ಹಾಂ ಹಾಂ ಸಾಕು ಬಿಡ್ರಿ. ನನ್ನನ್ನು ಅಷ್ಟೊಂದು ಹೊಗಳಬೇಡಿ. ನಾನೇನು ಅಷ್ಟೊಂದು ದೊಡ್ಡವಳಲ್ಲ. ವೇಳೆ ಮಧ್ಯಾಹ್ನವಾತು ಬನ್ನಿ ಊಟ ಮಾಡೋಣ

ಮೈಲಾರ:- (ತಡೆದು) ನಿಂತ್ಕೋ ಮಧು. ಮನಸ್ಸು ಪೂರ್ತಿಯಾಗಿ ಒಪ್ಪಿಕೊಂಡ ಈ ನಿನ್ನ ಮನದರ್ಶನಿಗೆ. ಒಂದು ಪ್ರೇಮದ ಮುತ್ತು ಕೊಟ್ಟು ಒಂದು ಗೀತೆಯನ್ನು ಹಾಡಬಾರದೇ

ಮಧು:- ಅಯ್ಯೋ. ಹಾಡಬೇಕ. ನನಗೆ ಹಾಡೋದಿಕ್ಕೆ ಬರುವುದಿಲ್ಲ ರೀ. ಅದೆಲ್ಲ ಬೇಡ ಊಟ ಮಾಡೋಣ ಬರ್ರಿ

ಮೈಲಾರ:- ಮಧು. ಮೊದಲು ಗಂಡ ಹೆಂಡತಿಯ ಪ್ರೇಮದ ಆಟ. ಆಮೇಲೆ ಹೊಟ್ಟಿಗೆ ಊಟ. ಬಾ ಮಧು ಹಾಡು ಒಂದು ಗೀತೆಯನ್ನು

ಮಧು:- ಆಯ್ತು ರೀ. ಪ್ರೀತಿಯ ಪತಿ ಕೇಳುವದು ಹೆಚೊ. ಅಥವಾ ಸತಿ ಆದವಳು ಹಾಡುವದು ಹೆಚ್ಚೋ. ಬನ್ನಿ ಇಬ್ಬರು ಸೇರಿ ಹಾಡೋಣ (ಜೋಡಿಪದ ಮುಗಿದ ನಂತರ)

ಮೈಲಾರ:- ಮಧು ಮದುವೆಗಾಗಿ ಹೊಸ ಡ್ರೆಸನ್ನು ತೆಗೆದುಕೊಂಡು ಬರೋಣ ಬಾ. ಅಲ್ಲಿ ಅಣ್ಣ ಅತ್ತಿಗಿಗೆ ನಾವೇ ಬಟ್ಟೆ ತರೋಣ ಬಾ ಹೋಗೋಣ

ಮಧು:- ಆಯ್ತು ರೀ ನಡಿರಿ ಹೋಗೋಣ (ಇಬ್ಬರು ಹೊರಗಡೆ ಹೋಗುವರು).

(ಒಂದು ಕಡೆ ರಾಜೇಂದ್ರ ಬಂದೂಕು ಹಾಕಿಕೊಂಡು ಸಿಗರೇಟ್ ಹಚ್ಚುತ್ತಾ ಪ್ರವೇಶಿಸಿ)

ರಾಜೇಂದ್ರ:- ಮಹೇಶ ಲೇ ಮಹೇಶ (ಭಾಗ್ಯಶ್ರೀ ಪ್ರವೇಶಿಸಿ)

ಭಾಗ್ಯಶ್ರೀ:- ಯಾರು ನೀವು. ನಮ್ಮ ಯಜಮಾನರೂ ಮನೆಯಲ್ಲಿಲ್ಲ. ಅವರು ಬಂದ ಮೇಲೆ ಹೇಳ್ತೀನಿ ನೀವಿನ್ನು ಹೊರಡಬಹುದು ರಾಜೇಂದ್ರ:- ಹೋರಡಬಹುದು (ನಕ್ಕು) ಹಾಗೆ ಹೋಗೋದಕ್ಕೆ ಬಂದಿಲ್ಲ ಭಾಗ್ಯಶ್ರೀ. ನಿಮ್ಮ ಮನೆಯಲ್ಲಿ ಯಾರಿಲ್ಲದ ಸಮಯ ಸಾಧಿಸಿ ನನ್ನ ಸೇಡು ತೀರಿಸಿಕೊಳ್ಳಬೇಕೆಂದು ಬಂದಿದ್ದಾನೆ ಈ ಎಂಎಲ್ಎ ರಾಜೇಂದ್ರ (ನಕ್ಕು)

ಭಾಗ್ಯಶ್ರೀ:- ನೋಡಿ ಅದೇನೇ ಇದ್ರೂ ನಮ್ಮ ಯಜಮಾನರು ಬಂದ್ಮೇಲೆ ಮಾತನಾಡಿ. ಈಗ ಹೊರಟು ಹೋಗಿ

ರಾಜೇಂದ್ರ:- ಹೊರಟು ಹೋಗಿ (ನಕ್ಕು) ಲೇ ಭಾಗ್ಯಶ್ರೀ ಯಾರು ಇಲ್ಲ ಹೊರಟು ಹೋಗಿ ಎಂದ ತಕ್ಷಣ. ಹೊರಟು ಹೋಗುವುದಕ್ಕೆ ನಾನೇನು ಭಿಕ್ಷುಕನಲ್ಲ. ಕಣ್ಣಿಗೆ ನಟ ಹೆಣ್ಣಿನ ಶೀಲವನ್ನು ಬಗೆದು ತಿನ್ನುವ ನರಭಕ್ಷಕ ನಾನು. ಆ ಸೂರ್ಯನ ಕಿರಣಕ್ಕೆ ಪಳಪಳನಾಗಿ ಹೊಳಿಯುತ್ತಿರುವ ನೀನೆಲ್ಲ ಸೌಂದರ್ಯವನ್ನು ಕಣ್ಣಿನಿಂದ ಸವಿದು. ಅಂದ ಚಂದದಿಂದ ತುಂಬಿದ ಈ ನಿನ್ನ ಆರಡಿ ದೇಹವನ್ನು ನನ್ನ ಬವುಬಂಧನದಲ್ಲಿ ಅಪ್ಪಿಹಿಡಿದುಕೊಂಡು ಮುದಾಡೋಕೆ ಬಂದ್ದಿದೆನೆ ಭಾಗ್ಯಾಶ್ರೀ

ಭಾಗ್ಯಾಶ್ರೀ:- ಏ ರಾಜೇಂದ್ರ. ಮೈ ಮೇಲೆ ಎಚ್ಚರವಿದೆ ತಾನೆ. ಎಚ್ಚರ ತಪ್ಪಿ ಯಾರದೋ ಮನೆಗೆ ಹೋಗಬೇಕಾದ ನೀನು.ದಾರಿ ತಪ್ಪಿ ಇಲ್ಲಿಗೆ ಬಂದಂತೆ ಕಾಣುತ್ತದೆ. ಯಾರ ಮನೆಗೆ ಹೋಗಬೇಕೆನ್ನುವುದು ಸರಿಯಾಗಿ ತಿಳಿದುಕೊಂಡು ಹೋಗು. ಯಾಕೆಂದರೆ ನೀನು ತಿಳಿದುಕೊಂಡಿರುವ ಹಾಗೆ ತೋಳ ತೆಕ್ಕೆಯಲ್ಲಿ ಸುಖ ಪಡುವುದಕ್ಕೆ. ಇದು ಏನು ಸೂಳೆಯರ ಮನೆಯಲ್ಲ. ಇದು ಮಾನವಂತರ ಮನೆತನ. ಗರತಿ ಹೆಣ್ಣು ಮಕ್ಕಳಿರುವ ಮನೆತನ. ಹೆಚ್ಚಿಗೆ ಮಾತನಾಡದೆ ಇಲ್ಲಿಂದ ಜಾಗ ಕಾಲಿ ಮಾಡು. ಇಲ್ಲ ಗರತಿಯರ ಕಾಲಲ್ಲಿರುವ ಮೆಟ್ಟು ಕೈಯಲ್ಲಿ ಬರುತ್ತದೆ ಎಚ್ಚರ

ರಾಜೇಂದ್ರ:- ಗರತಿ ಗರತಿ ಗರತಿ (ನಕ್ಕು) ಲೇ ಭಾಗ್ಯಶ್ರೀ ಗರತಿ ಎಂದು ಗರ್ವದ ಗದ್ದಿಗೆ ಏರಿದ ನಿನ್ನಂತ ಗರತಿಯರ ದೇಹದ ಮೇಲೆ ಕಾಮದ ಗೆರೆ ಎಳೆದು. ಗರತಿ ಎಂದು ಗದ್ದಿಗೆ ಮೇಲೆ ಕುಳಿತಿರುವ ಆ ನಿನ್ನ ಗರತಿ ಪಟ್ಟಕ್ಕೆ ಚಟ್ಟ ಕಟ್ಟಿ. ಹದವಾದ ನಿನ್ನ ದೇಹ ಎಂಬ ಹಣ್ಣನ್ನು ಮನ ಬಂದಂತೆ ಎರಚಿಕೊಂಡು ತಿನ್ನಲು ಸಿದ್ದನಾಗಿ ಬಂದಿದ್ದಾನೆ ಈ ನಟ ರಾಕ್ಷಸ ರಾವಣ ಕುಲದ ರಾಜಾ ರಾಜೇಂದ್ರ (ನಕ್ಕು)

ಭಾಗ್ಯಶ್ರೀ:– ಎ ರಾಜೇಂದ್ರ ಗರತಿಯರ ಶೀಲ ಹರಿದು ತಿನ್ನಲು ಸಿದ್ಧನಾಗಿ ನೀನು ಬಂದರೆ. ಒನಕೆ ಓಬವ್ವನಂತೆ ಗಂಡುಗಚ್ಚಿಯನ್ನು ಹಾಕಿ. ಕೈಯಲ್ಲಿ ಆಯುಧ ಹಿಡಿದು. ಮಾನಕ್ಕಾಗಿ ಪ್ರಾಣ ಒತ್ತೆ ಇಟ್ಟು ಹೋರಾಡುತ್ತಾಳೆ ಈ ಗಂಡೆದೆ ಗರತಿ. ಪ್ರಸಂಗ ಬಂದರೆ ಪ್ರಾಣ ಕಳೆದುಕೊಳ್ಳುತ್ತಾಳೆ ವಿನಹ ಮಾನ ಕಳೆದುಕೊಳ್ಳುವುದಿಲ್ಲ. ನಿನ್ನಂತ ಲುಚ್ಚಾಗಳ ಮಾತಿಗೆ ಹೆದರಿ ನಿನಗೆ ಸೆರಗು ಹಾಸೋದಕ್ಕೆ ನಾನೇನು ವ್ಯವಿಚಾರಿ ಅಲ್ಲ. ಈ ಕನ್ನಡ ನಾಡಿನ ಪವಿತ್ರ ಪತಿವೃತೆ ಹೆಣ್ಣು ನಾನು

ರಾಜೇಂದ್ರ:– ಪವಿತ್ರ ಪತಿವೃತೆ (ನಕ್ಕು) ಲೇ ಪವಿತ್ರ ಪ್ರತಿವೃತ್ತಿ ಎಂದು ಪಾರಿವಾಳ ದಂತೆ ಹಾರಾಡುವ ಪಾತರಗಿತ್ತಿ. ಕೇಳಲೇ ನಿನ್ನಂತ ಪತಿವೃತಿಯರ ಚರಿತ್ರೆಯನ್ನು ಚಿತ್ತಕೊಟ್ಟು ಕೇಳು. ಪಕ್ಕದಲ್ಲಿ ಪತಿ ಮಲಗಿದ್ದರು ಕೂಡ ಅರ್ಧ ರಾತ್ರಿಲ್ಲಿ ಎದ್ದು ಬಂದು ಪಕ್ಕದ ಮನೆಯವನ ಜೊತೆಯಲ್ಲಿ ಮಲಗಿ ಬರುವ ಮಾನಗಿತ್ತಿಯರ ಎಷ್ಟಿಲ್ಲ. ಈ ನಿನ್ನ ಪತಿವೃತ್ತಿಯರ ಪಟ್ಟದಲ್ಲಿ. ನಾನು ಪತಿವೃತಿಯಾಗಿರುತ್ತೇನೆಂದು ಪತಿಯ ಮೇಲೆ ಸುಳ್ಳು ಪ್ರಮಾಣ ಮಾಡಿ. ಅದೇ ಪತಿಯನ್ನು ಹರಿಯುವ ಹೊಳೆಯಲ್ಲಿ ತಳ್ಳಿ ಬಂದಿರುವ ಪತಿವೃತೆಯಾರು ಎಷ್ಟಿಲ್ಲ. ಈ ನಿನ್ನ ಹೆಣ್ಣು ಜಾತಿಯಲ್ಲಿ. ಮಿಂಡನ ಸಲುವಾಗಿ ಮಾಡಿಕೊಂಡ ಗಂಡನನ್ನು ತುಂಡು ತುಂಡಾಗಿ ಕತ್ತರಿಸಿ. ಮನೆ ಬಾತ್ರೂಮ್ನಲ್ಲಿ ಹುತಾಕದ ನಿನ್ನಂತ ಗರತಿಯರ ಚರಿತ್ರೆಯನ್ನು ಎಷ್ಟು ನೋಡಿಲ್ಲ. ಇಂದಿನ ಸೋಶಿಯಲ್ ಮೀಡಿಯಾದಲ್ಲಿ. ಮಿಂಡನಿಗಾಗಿ ಗಂಡನಿಗೆ ಡ್ರೈವರ್ಸ್ ಕೊಟ್ಟು. ತವರು ಮನೆಯಲ್ಲಿ ಇದ್ದುಕೊಂಡು. ಪ್ರತಿದಿನ ಮದ್ಯ ರಾತ್ರಿಯಲ್ಲಿ ಮಿಂಡನನ್ನು ಮನೆಗೆ ಕರೆಸಿಕೊಂಡು. ಅವನೊಂದಿಗೆ ಸುಖಪಡುವ ಸುವ್ವಾಲಿಯರ ಎಷ್ಟಿಲ್ಲ. ಈ ನಿನ್ನ ಗರತಿಯರ ಲಿಸ್ಟಿನಲ್ಲಿ ತಾನು ಫೋನಲ್ಲಿ ಮಾತನಾಡುತ್ತಿರುವಾಗ ಅಣ್ಣನು ತಮ್ಮನು ಬಂದು ಯಾರ ಜೊತೆ ಮಾತಾಡ್ತಿದ್ದೀಯಾ ಎಂದು ಕೇಳಿದರೆ. ನಿಮ್ಮ ಮಾಮ ನನ್ನ ಗಂಡ ಫೋನ್ ಹಚಾನ ಎಂದು ಹೇಳಿ. ಮಿಂಡನ್ ಜೊತೆ ಫೋನಿನಲ್ಲಿ ಲಲ್ಲೆ ಹೊಡೆಯುವ ಲಜ್ಜೆಗೆಟ್ಟ ಹೆಣ್ಣುಗಳು ಎಷ್ಟಿಲ್ಲ. ಈ ನಿನ್ನ ಹೆಣ್ಣು ಕುಲದಲ್ಲಿ. ಮದುವೆಯ ವಯಸ್ಸಿಗೆ ಬಂದ ಮೈದುನ ಮನೆಯಲ್ಲಿದ್ದರೆ. ಇವನಿಗೆ ಬೇರೆ ಮದುವೆ ಮಾಡಿದರೆ. ಇವನಿಗು ಆಸ್ತಿಯಲ್ಲಿ ಭಾಗ ಕೊಡಬೇಕಾಗುತ್ತದೆ ಎಂದು ಸಂಚು ಮಾಡಿ. ಸರಿಯಾದ ಸಮಯ ಸಾಧಿಸಿ. ಅವನಿಗೆ ತನ್ನ ದೇಹದ ಅಂಗಾಂಗವನ್ನು ತೋರಿಸಿ ಮರಳು ಮಾಡಿ. ಅವನನ್ನು ತನ್ನ ಬುಟ್ಟಿಯಲ್ಲಿ ಹಾಕಿಕೊಂಡು. ಗಂಡ ಇಲ್ಲದ ಸಮಯದಲ್ಲಿ ಊಟಕ್ಕೆ ಕೊಡುವ ನೆಪದಲ್ಲಿ ಒಳಗಡೆ ಕರೆದು. ಅದೇ ಮೈದುನ ಒಡನೆ ಮಲಗಿ ಅವನಿಗೆ ಸುಖವನ್ನು ಕೊಟ್ಟು ತನ್ನ ಕಾಮದ ದಾಹವನ್ನು ತೀರಿಸಿಕೊಳ್ಳುವ ತೀಟಾನ್ ಗಿತ್ತಿಯರು ಈ ಪ್ರಪಂಚದಲ್ಲಿ. ನೋಡು ಸುಮ್ಮನೆ ಅವರ ಇವರ ಚರಿತ್ರೆಯನ್ನು ಹೇಳಿ ಸಮಯ ವ್ಯರ್ಥ ಮಾಡೋದು ಬೇಡ. ಈ ನಿನ್ನ ದುಂಡಾದ ದೇಹದಿಂದ ನನಗೆ ಸುಖ

ಕೊಟ್ಟರೆ ಸರಿ. ಇಲ್ಲ ನಿನ್ನ ದುಂಡಾದ ದೇಹವನ್ನು ದಂಡಿಸಿದೆ ಬಿಡಲಾರ ಈ ದಾಂಡಿಗ ಬಾರಲೇ ಬಾ (ಕೈಹಿಡಿದು ಎಳೆಯುವನು)

ಭಾಗ್ಯಶ್ರೀ:– ಕೈಬಿಡು ಕಚ್ಚೆ ಹರಕ ನನ್ನ ಮಗನೇ. ನಿನ್ನಿಷ್ಟೊತ್ತು ಹೇಳಿದ್ಯಲ್ಲ. ಅಂತ ನೀಚಗೆಟ್ಟ ಹೆಣ್ಣಿನ ಜಾತಿಯಲ್ಲಿ ಹುಟ್ಟಿದವಳಲ್ಲ ನಾನು. ಇನ್ನೊಂದು ಮಾತು ಹೆಚ್ಚಿಗೆ ನೋಡಿದರೆ. ನಿನ್ನ ರುಂಡ ಕಡಿಯೋದಕ್ಕೆ ಚಂಡಿ ಚಾಮುಂಡಿ ಆಗಬೇಕಾಗುತ್ತದೆ

ರಾಜೇಂದ್ರ:– ಚಂಡಿ ಚಾಮುಂಡಿ (ನಕ್ಕು) ಲೇ ಭಾಗ್ಯಶ್ರೀ. ಚಂಡಿ ಚಾಮುಂಡಿ ಎಂದು ಚಂದ ಚಂದ ಚಲುವೇಯರ ಜೊತೆ ಚೆಲ್ಲಾಟ ಆಡದೆ ಬಿಡುವನಲ್ಲ. ಕಾಮ ತುಂಬಿದ ಈ ಕಳನಾಯಕ ಬಾರಲೇ ಬಾ (ಮೈ ಮೇಲೆ ಏರಿ ಹೋಗುವನು)

ಭಾಗ್ಯಶ್ರೀ:– ದೂರ ಸರಿಯೋ ದುರಾತ್ಮ (ಸ್ವ) ಅಯ್ಯೋ ದೇವರೆ ಬೆನ್ ಹತ್ತಿದ ಬೇತಾಳ ದಂತೆ ಕಾಡುತ್ತಿದ್ದಾನೆ ಇವನು. ನಾನೇನು ಮಾಡಲಿ ಈಗ (ಪ್ರ) ನೋಡಿ ನಿಮಗೆ ಕೈ ಮುಗಿಯುತ್ತೇನೆ ಬೇಕಾದರೆ ನಿಮ್ಮ ಕಾಲಿಗೆ ಬೀಳುತ್ತೆನೆ ಇಲ್ಲಿಂದ ಹೊರಟು ಹೋಗಿಬಿಡಿ (ಕಾಲಿಗೆ ಬೀಳೋದಕ್ಕೆ ಹೋಗುವಳು)

ರಾಜೇಂದ್ರ:– ಲೇ ಭಾಗ್ಯಶ್ರೀ. ಕಾಲಿಗೆ ಬೀಳುತ್ತೇನೆ ಎಂದ ತಕ್ಷಣ ಕರುಣೆ ತೋರಿ ಬಿಟ್ಟು ಹೋಗೋದಕ್ಕೆ ನಾನೇನು ಕಥನಾಯಕನಲ್ಲ ಖಳನಾಯಕ. ಈ ಖಳನಾಯಕನ ಕೈಯಲ್ಲಿ ಕಥನಾಯಕಿಯಾಗಿ ಬಂದು ಸಿಕ್ಕಿದ್ದೀಯ. ನನಗೆ ಸೆರಗು ಹಾಸಿ ಸುಖ ಕೊಡಲೇಬೇಕು. ಇಲ್ಲ ನಿನಗಿನ್ನು ಒಂದು ಚಾನ್ಸ್ ಕೊಡುತ್ತೇನೆ. ನನ್ನನ್ನು ಆಪ್ಪಿಕೊಂಡು ಒಂದು ಗೀತೆಯನ್ನು ಹಾಡು

ಭಾಗ್ಯಶ್ರೀ:– ಅಯ್ಯೋ. ನಿಮ್ಮ ಜೊತೆಯಲ್ಲಿ ನಾನು ಹಾಡುವುದನ್ನು ಯಾರಾದರೂ ನೋಡಿದರೆ. ನನ್ನ ಬಗ್ಗೆ ತಪ್ಪು ತಿಳಿದುಕೊಳ್ಳುತ್ತಾರೆ

ರಾಜೇಂದ್ರ:– ನೋ ಯಾರು ಬರುವುದಿಲ್ಲ. ಬಂದರು ನಾನು ನೋಡಿಕೊಳ್ಳುತ್ತೇನೆ. ಮೊದಲು ಒಂದು ಗೀತೆಯನ್ನು ಹಾಡು

ಭಾಗ್ಯಶ್ರೀ:– ಆಯ್ತು ನೀವು ಹೇಳಿದಂತೆ ಹಾಡುತ್ತೇನೆ. ಆದರೆ ನನ್ನನ್ನು ಮಾತ್ರ ಏನು ಮಾಡಬಾರದು (ಹಾಡುವಳು ಜೋಡಿ ಪದ ಮುಗಿದ ನಂತರ)

ಭಾಗ್ಯಶ್ರೀ:– ಹಾಂ ನೋಡಿ ನೀವು ಹೇಳಿದಂತೆ ನಾನು ಹಾಡಿದ್ದೇನೆ. ನೀವಿನ್ನು ಹೊರಟು ಹೋಗಿಬಿಡಿ

ರಾಜೇಂದ್ರ:– ಹೋಗು ಹೋಗು ಎಂದು ಯಾಕೆ ಒಟ್ಟುಗೂಡುತ್ತೀಯ ಒಲವೇ ಚಲುಮುಕದ ಚೆಲುವೆ. ನೀನು ಹಾಡುವಾಗ ನಿನ್ನ ಕೈಗಳ ಸ್ಪರ್ಶ ದಿಂದ. ನಿನ್ನ ದೇಹದ ಆಗಾಗ ನನ್ನ ದೇಹಕ್ಕೆ ತಾಕಿದಾಗಿಂದ. ನಿನ್ನ ಮೈ

ಬೆವರಿನ ಸುವಾಸನೆಗೆ ನನ್ನ ಕಾಮದ ಉತ್ತೇಕ ಹೆಚ್ಚಾಗುತ್ತಿದೆ. ಬಾರಲೇ ಬಾ ನನ್ನ ಕಾಮದ ಹಸಿವಿಗೆ ಬಡಿಸು ಬಾ ನಿನ್ನ ದೇಹದ ಅಡುಗೆ ಬಾರಲೇ ಬಾ (ಕೈ ಹಿಡಿದು ಎಳೆದುಕೊಂಡು ಒಳಗಡೆ ಹೋಗುವನು ಸಲ್ಪ ಸಮಯದ ನಂತರ. ಭಾಗ್ಯಶ್ರೀ ಅಮ್ಮ ಎಂದು ಜೋರಾಗಿ ಕಿರುಚುಗಳು. ರಾಜೇಂದ್ರ ಶರ್ಟ್ ಬಿಚ್ಚಿ ಮೈ ಮೇಲೆ ಹಾಕಿಕೊಂಡು ಸಿಗರೇಟ್ ಹಚ್ಚುತ್ತಾ ಬರುವನು) ಭಾಗ್ಯಶ್ರೀ ನಿನ್ನ ದೇಹ ಎಂಬ ಭೂಮಿಯಲ್ಲಿ ಈ ರಾಜೇಂದ್ರ ಉಳುಮೆ ಮಾಡಿ ಆಯಿತು. ಇನ್ನು ಕೆಲವೇ ದಿನಗಳಲ್ಲಿ ನಾ ಬಿತ್ತಿದ ಬೀಜದಿಂದ ಮತ್ತೊಬ್ಬ ರಾಜೇಂದ್ರನ ನಾಗಮನ (ನಗುವಾಗ ಭಾಗ್ಯಶ್ರೀ ವಿಕಾರವಾಗಿ ಬರುವಳು)

ಭಾಗ್ಯಶ್ರೀ:– ಏ ಚಂಡಾಲ ನನ್ನ ಮಗನೇ. ನನ್ನ ಗಂಡ ಮೈದುನೂರು ಬರಲಿ. ಅವರಿಗೆ ಈ ವಿಷಯವನ್ನು ಹೇಳಿ ನಿನ್ನನ್ನು ತುಂಡು ತುಂಡಾಗಿ ಕಡಿದು ಹಾಕಿಸುತ್ತೇನೆ

ರಾಜೇಂದ್ರ:– ತುಂಡು ತುಂಡಾಗಿ (ನಕ್ಕು) ಲೇ ಭಾಗ್ಯಶ್ರೀ. ನನ್ನನ್ನು ತುಂಡು ತುಂಡಾಗಿ ಕಡಿದು ಹಾಕಿಸುವುದಕ್ಕೆ. ನೀನು ಬದುಕಿದ್ದರೆ ತಾನೇ ಮುಗಿತು ನಿನ್ನ ಕಥೆ (ಗುಂಡು ಹಾರಿಸುವನು ಭಾಗ್ಯಶ್ರೀ ಅಮ್ಮ ಎಂದು ಬೀಳುವಳು) ಭಾಗ್ಯಶ್ರೀ ನಿನ್ನ ಮೈದುನರು ನನಗೆ ಎದುರಾಗಿ ನಿಂತಿದ್ದಕ್ಕೆ ನಿನಗೆ ಈ ಗತಿ ಬಂದಿದೆ. ಇಷ್ಟಕ್ಕೆ ತಿಳಿದುಕೊಂಡು ಈ ಸಾಹುಕಾರನ ಸವಾಸಕ್ಕೆ ಬರುವುದನ್ನೇ ಬಿಟರೆ ಸರಿ. ಇಲ್ಲ ಮತ್ತೆ ನನ್ನ ಜೋಡಿ ಸಮರಕ್ಕೆ ಸಿದ್ದನಾಗಿ ನಿಂತರೇ. ಅವರನ್ನು ಸಹಿತ ಕತ್ತರಿಸಿ ಹಾಕದೆ ಬಿಡಲಾರ. ಈ ಖಾದಿ ತೊಟ್ಟ ಕತರ್ನಾಕ್ ರಾಜಕಾರಣಿ. ಕಲಿಯುಗದ ರಾವಣ ರಾಜ ರಾಜೇಂದ್ರ ಬರುತ್ತೇನೆ (ನಗುತಾ ಹೋಗುವನು.) (ಒಂದು ಕಡೆಯಿಂದ ಮಹೇಶ ಕೈಚೀಲದಲ್ಲಿ ಹೊಸ ಸೀರೆ ಮತ್ತು ಮಲ್ಲಿಗೆ ಹೂವು ತೆಗೆದುಕೊಂಡು ಬರುವನು)

ಮಹೇಶ:– ಭಾಗ್ಯಶ್ರೀ ಭಾಗ್ಯಶ್ರೀ ಸೊಸೆ ಮಧು. (ಅಕಡೆ ಈಕಡೆ ನೋಡಿ) ಯಾರು ಮನೇಲಿ ಇಲ್ಲವಲ್ಲ. ಎಲ್ಲಿಗೆ ಹೋದರು (ಒಳಗಡೆ ಹೋಗುವಾಗ ಬಾಗಿಲದಲ್ಲಿ ಬಿದ್ದಿರುತ್ತಾಳೆ. ಭಾಗ್ಯಶ್ರೀಯನ್ನು ನೋಡಿ ಗಾಬರಿಯಿಂದ ಚೀರುವನು) ಭಾಗ್ಯಶ್ರೀ (ದುಃಖದಿಂದ) ಏನಾಯ್ತು ಹೇಳು ಭಾಗ್ಯಶ್ರೀ ಹೇಳು. ಯಾಕೆ ಈ ರೀತಿ ವಿಕಾರವಾಗಿ ಮಲಗಿಕೊಂಡಿರುವೆ ಮಾತನಾಡುವ ಭಾಗ್ಯಶ್ರೀ ಮಾತನಾಡು. ಭಾಗ್ಯಶ್ರೀ ನನ್ನ ತಮ್ಮಂದಿರು ಬಂದು ನನ್ನ ಅತ್ತಿಗೆ ಏನಾಯ್ತು ಎಂದು ಕೇಳಿದರೆ ನಾನೇನು ಹೇಳಲಿ ಭಾಗ್ಯಶ್ರೀ ನಾನೇನು ಹೇಳಲಿ. ನಿನ್ನ ತಂಗಿ ಬಂದು ನನ್ನ ಅಕ್ಕ ಎಲ್ಲಿ ಎಂದು ಕೇಳಿದರೆ ನಾನೇನು ಹೇಳಲಿ ಭಾಗ್ಯಶ್ರೀ. ಮಾತನಾಡು ಭಾಗ್ಯಶ್ರೀ ಮಾತನಾಡು (ಅಷ್ಟರಲ್ಲಿ ಮಾಂತೇಶ ಪ್ರವೇಶಿಸಿ)

ಮಾಂತೇಶ:– ಅಣ್ಣ ಅತ್ತಿಗೆ ಯಾಕಣ್ಣ ಮೌನವಾಗಿ ನಿಂತಿದ್ದೀಯ. ನನ್ನ ಅತ್ತಿಗೆ ಎಲ್ಲಿ ಹೋಗಿದ್ದಾಳೆ ಕಾಣುತ್ತಿಲ್ಲ

ಮಹೇಶ:– (ದುಃಖದಿಂದ) ಏನೆಂದು ಹೇಳಲಿ ಸೋದರ ನಿನಗೆ. ನಿಮ್ಮತ್ತಿಗೆ ನನ್ನ ಜೊತೆ ಮಾತನಾಡುತ್ತಿಲ್ಲ. ನೋಡು ಅಲ್ಲಿ ಮಲಗಿದ್ದಾಳೆ ನೀನಾದ್ರೂ ಮಾತಾಡ್ಸಪ್ಪ ನಿನ್ನ ಅತ್ತಿಗೆಯನ್ನು

ಮಾಂತೇಶ:– (ಹತ್ತಿರ ಹೋಗಿ ನೋಡಿ ಗಾಬರಿಯಿಂದ ಚೀರುವನು) ಅತ್ತಿಗೆ (ದುಃಖದಿಂದ) ಏನಾಯ್ತು ಹೇಳು ಅತ್ತಿಗೆ ನಿಮಗೆ. ಅಣ್ಣ ನೀನಾದರೂ ಹೇಳ ಅಣ್ಣ ನನ್ನ ಅತ್ತಿಗೆ ಏನಾಯಿತು ಎಂದು

ಮಹೇಶ:– ಮಾಂತೇಶ ನಾನು ಬಜಾರಕ್ಕೆ ಹೋಗಿದ್ದೇನಪ್ಪ. ನಾನು ಹೋಗಿ ಬರುವಷ್ಟರಲ್ಲಿ. ನಿನ್ನ ಅತ್ತಿಗೆ ಈ ರೀತಿಯಾಗಿ ಬಿದ್ದಿದ್ದಾಳೆ (ಮೈಲಾರ ಮಧು ಪ್ರವೇಶಿಸಿ)

ಮೈಲಾರ:– ಅಣ್ಣ ಮಾಂತೇಶ ಯಾಕೆ ಏನಾಯ್ತು. ಇಬ್ಬರು ಮುಖ ಸಪ್ಪಾಗಿದೆ ಯಾಕೆ. ಅಣ್ಣ ಅತ್ತಿಗೆ ಎಲ್ಲಿದ್ದಾಳೆ

ಮಹೇಶ:– (ನಿರ್ಗಸ್ತಿಕನಾಗಿ) ನಿನ್ನ ಅತ್ತಿಗೆ ಎಲ್ಲಿದ್ದಾಳೆ ಸೋದರ. ಅವಳು ನಮ್ಮನ್ನು ಬಿಟ್ಟು ಬಹು ದೂರ ಹೋಗಿದ್ದಾಳೆ

ಮೈಲಾರ:– ಅಣ್ಣ ಏನು ಹೇಳುತ್ತಿದ್ದೀಯ ನೀನು. ಮಾಂತೇಶ ನೀನಾದ್ರೂ ಹೇಳು ಏನಾಯಿತು ಎಂದು

ಮಾಂತೇಶ:– (ದುಃಖದಿಂದ) ಅಣ್ಣ ನಮ್ಮ ಅತ್ತಿಗೆ ನಮ್ಮನ್ನು ಬಿಟ್ಟು ಬಲ್ಲು ದೂರ ಹೋಗಿದ್ದಾಳೆ ಅಣ್ಣ. ಅಲ್ಲಿ ನೋಡೋಣ ನಮ್ಮ ಅತ್ತಿಗೆ ಸ್ಥಿತಿಯನ್ನು

ಮೈಲಾರ:– (ಹತ್ತಿರ ಹೋಗಿ ನೋಡಿ ಗಾಬರಿಯಿಂದ ಚೀರುವನು) ಅತ್ತಿಗೆ (ದುಃಖದಿಂದ) ಮಾಂತೇಶ ಏನಾಯ್ತು ನಮ್ಮ ಅತ್ತಿಗೆಗೆ. ಅಣ್ಣ ನಮ್ಮತ್ತಿಗೆ ಏನಾಯ್ತು ಎಂದು ಹೇಳು ಅಣ್ಣ ಹೇಳು

ಮಧು:– ಮಾವ ಏನಾಯ್ತು ನನ್ನ ಅಕ್ಕನಿಗೆ. ನಾನು ನಿಮ್ಮ ತಮ್ಮ ಹೊರಗಡೆ ಹೋಗುವಾಗ ಒಳಗಡೆ ಅಡುಗೆ ಮಾಡುತ್ತಿದ್ದಳು. ಈಗ ಇದ್ದಕ್ಕಿದ್ದಂತೆ ಈ ರೀತಿ ಏನಾಯ್ತು ಹೇಳು ಮಾವ

ಮಹೇಶ:– (ದುಃಖದಿಂದ) ಎಲ್ಲರೂ ನನ್ನನ್ನು ಈ ರೀತಿ ಪ್ರಶ್ನೆ ಕೇಳಿದರೆ ಏನೆಂದು ಉತ್ತರಿಸಬೇಕು ಈ ಹುಚ್ಚು ಮಾನವ. ತಮ್ಮಂದಿರ ನಾನು ಕೂಡ ಬಜಾರಕ್ಕೆ ಹೋಗಿದ್ದೆ ನಾನು ಹೋಗಿ ಬರುವಷ್ಟರಲ್ಲಿ ಈ ಘಟನೆ ನಡೆದು ಹೋಗಿದೆ. (ದುಃಖದಿಂದ) ಭಾಗ್ಯಶ್ರೀ ಬಜಾರದಿಂದ ಬರುವಾಗ ನನಗೂ ನನ್ನ ತಂಗಿಗೆ ಮಲ್ಲಿಗೆ ಹೂವು ತಗೆದುಕೊಂಡು ಬನ್ನಿ ಅಂತ ಹೇಳಿದ್ಯಲ್ಲ. ತಗೆದುಕೊಂಡು ಬಂದಿದ್ದೇನೆ ನೋಡು ಭಾಗ್ಯಶ್ರೀ ಅದರ ಜೊತೆ ನಿನಗೊಂದು ಹೊಸ ಸೀರೆಯನ್ನು ಕೂಡ ತಂದಿದ್ದೇನೆ. ಈ ಸೀರೆಯನ್ನು ಉಟ್ಟಿಕೋ ಎದ್ದೇಳು ಭಾಗ್ಯಶ್ರೀ ಎದ್ದೇಳು. ಮಾತನಾಡು ಭಾಗ್ಯಶ್ರೀ. ನನ್ನನ್ನು ಬಿಟ್ಟು ಹೋಗಬೇಡ ಭಾಗ್ಯಶ್ರೀ ಹೋಗಬೇಡ

ಮೈಲಾರ:– (ದುಃಖದಿಂದ) ಅತ್ತಿಗೆ ನಿಮ್ಮ ಕೈಯಾರ ಕೈ ತುತ್ತು ತಿನಿಸಿ ಬೆಳೆಸಿದ. ಈ ಎರಡು ಮಕ್ಕಳನ್ನು ಪರದೇಶಿ ಮಾಡಿ ಹೋದೆಯಾ ತಾಯಿ ನೀನು

ಮಾಂತೇಶ:– (ದುಃಖದಿಂದ) ಅತ್ತಿಗೆ ತಂದೆ ತಾಯಿ ಪ್ರೀತಿ ಸಿಗದೇ ಅನಾಥರಾಗಿ ಬೆಳೆದ ನಮಗೆ. ತಂದೆ ತಾಯಿ ಪ್ರೀತಿ ಮಮತೆ ವಾತ್ಸಲ್ಯವನ್ನು ಕೊಟ್ಟು. ನಿನ್ನ ಕೈಯಾರ ಕೈ ತುತ್ತು ತಿನಿಸಿ ಬೆಳೆಸಿ ದೊಡ್ಡವರನ್ನಾಗಿ ಮಾಡಿ. ಈಗ ಈ ರೀತಿ ನಮ್ಮಿಂದ ದೂರವಾಗಿ ಮತ್ತೆ ನಮ್ಮನ್ನು ಅನಾಥರಾಗಿ ಮಾಡಿ ಹೋದೆಯಾ ತಾಯಿ ನೀನು

ಮೈಲಾರ:– (ದುಃಖದಿಂದ) ಮಾಂತೇಶ ನಾವು ದುಡಿದು ದನಿದು ಬಂದು. ಬೇಸರ ಆಗಿ ಊಟ ಮಾಡದೆ ಹಾಗೆ ಮಲಗಿದರೆ. ನಮ್ಮ ಪಕ್ಕದಲ್ಲಿ ಕುಳಿತುಕೊಂಡು ಕೈ ತುತ್ತು ಮಾಡಿ ನಮಗೆ ತಿನಿಸಿದ. ಆ ಪವಿತ್ರ ಕೈಗಳು ಇಂದು ನಮ್ಮಿಂದ ದೂರವಾಗಿ ಹೋದವು ಮಾಂತೇಶ. ದೂರವಾಗಿ ಹೋದವು. ಮತ್ತೆ ನಾವು ಅನಾಥರುವಾದೆವು ಮಾಂತೇಶ ಅನಾಥರಾದೆವು

ಮಧು:– (ದುಃಖದಿಂದ) ಅಕ್ಕ ತಂದೆ ತಾಯಿಯನ್ನು ಕಳೆದುಕೊಂಡು ಅನಾಥಳಾಗಿದ್ದೆ. ನೀನು ಸಿಕ್ಕ ಮೇಲೆ ಮತ್ತೊಬ್ಬಳು ತಾಯಿ ಸಿಕ್ಕಳಂದು ಸಂತೋಷಪಟ್ಟೆ. ಆದರೆ ನೀನು ನಮ್ಮಿಂದ ದೂರವಾಗಿ ಅಗಲಿ ಹೋದೆಯಾ ತಾಯಿ ನೀನು

ಮಹೇಶ:– (ದುಃಖದಿಂದ) ಭಾಗ್ಯಶ್ರೀ ಮೈದುನೂರು ನನ್ನ ಮಕ್ಕಳು ಎಂದು ಹೇಳುತ್ತಿದ್ದೀಯಲ್ಲಾ. ಆ ನಿನ್ನ ಮಕ್ಕಳು ನಿನಗೋಸ್ಕರ ಕಣ್ಣೀರು ಹಾಕುತ್ತಿದ್ದಾರೆ ಭಾಗ್ಯಶ್ರೀ ಅವರಿಗೋಸ್ಕರ ಒಂದೆರಡು ಮಾತುಗಳನ್ನಾದರೂ ಆಡು ಭಾಗ್ಯಶ್ರೀ ಆಡು. (ದುಃಖದಿಂದ) ಈ ನಿನ್ನ ಪತಿಯನ್ನು ಪರದೇಶಿ ಮಾಡಿ ಮುತ್ತೈದೆಯಾಗಿ ಮರಳಿ ಬಾರದ ಲೋಕಕ್ಕೆ ತೆರಳಿ ಬಿಟ್ಟಿಯಾ ಭಾಗ್ಯಶ್ರೀ ನೀನು

ಮಧು:– ಸಮಾಧಾನ ಮಾಡಿಕೊಳ್ಳಿ ಮಾವ. ಎಲ್ಲೂರು ಕಣ್ಣೀರು ಹಾಕುತ್ತ ಕುಳಿತರೆ ಅಕ್ಕ ಮರಳಿ ಬರುವುದಿಲ್ಲ. ಹಿರಿಯರಾಗಿ ನೀವು ನಮಗೆ ಸಮಾಧಾನ ಹೇಳುವುದನ್ನು ಬಿಟ್ಟು ಹೀಗೆ ನೀವು ಕಣ್ಣೀರು ಹಾಕಿದರೆ ನಮ್ಮ ಪಾಡೇನು ಮಾವ. ಈ ಅಪಘಾತವನ್ನು ನೋಡಿದರೆ. ಊರು ಒಳಗೆ ಯಾವುದಾದರೂ ಕಾಡು ಪ್ರಾಣಿ ಬಂದಿರಬಹುದು ಎನಿಸುತ್ತದೆ

ಮಾಂತೇಶ:– (ಸಿಟ್ಟಿನಿಂದ) ಅತ್ತಿಗೆ ಊರುಳಗೆ ಯಾವ ಕಾಡ ಪ್ರಾಣ್ಣಿ ಬಂದಿಲ್ಲ ಅತ್ತಿಗೆ. ಇದು ಊರವಳಗಿರುವ ಮಾನವ ಪ್ರಾಣಿಯ ಕೈವಾಡ. ನಾವು ಇಲ್ಲದ ಸಮಯ ಸಾಧಿಸಿ ಯಾರು ನರಹಂತಕರು. ನಮ್ಮ ಅತ್ತಿಗೆಯನ್ನು ಕೊಲೆ ಮಾಡಿದ್ದಾರೆ

ಮೈಲಾರ:– (ಸಿಟ್ಟಿನಿಂದ) ಮಾಂತೇಶ ಆ ನರಹಂತಕರು ಯಾರೆಂದು ಪತ್ತೆ ಹಚ್ಚಿ. ಆ ನರಹಂತಕರ ನರನಾಡಿಯನ್ನು ತುಂಡು ತುಂಡಾಗಿ ಕಡೆದು ಹಾಕಿ ಬರೋಣ (ಒಳಗಡೆ ಹೋಗಿ ಕೊಡ್ಲಿ ತೆಗೆದುಕೊಂಡು ಬರುವನು)

ಮಧು:– ಬೇಡರೀ ನಿಂತುಕೊಳ್ಳಿ. ಸಿಟ್ಟಿನ ಕೈಯಲ್ಲಿ ಬುದ್ದಿ ಕೊಡುವುದು ಬೇಡ. ಈಗ ಅಕ್ಕನ ಅಂತ್ಯಕ್ರಿಯದ ಕಾರ್ಯ ಮಾಡೋಣ. ಮುಂದೆ ಸಮಯ ಬಂದಾಗ ನೋಡಿದರಾಯ್ತು

ಮಹೇಶ:– ಹೌದು ಮೈಲಾರ ಮಧು ಹೇಳುತ್ತಿರುವ ಮಾತು ಸರಿಯಾಗಿದೆ. ಯಾಕಂದರೆ ಬಡವನ ಸಿಟ್ಟು ದವಡಿಗೆ ಮೂಲ ಎಂಬಂತೆ. ಕೊಲೆ ಮಾಡಿದವರು ಯಾರೆಂದು ಸಾಕ್ಷಿ ಇಲ್ಲದೆ ಯಾರ ಮೇಲೆ ಕೈ ಮಾಡೋದು ತರವಲ್ಲ. ಮೊದಲು ನಿನ್ನ ಅತ್ತಿಗೆಯ ಅಂತ್ಯಕ್ರಿಯ ಮಾಡೋನು ನಡೆಯಿರಿ

ಮಾಂತೇಶ:– ಬೇಡ ಅಣ್ಣ. ಎಷ್ಟು ಹೆಣ್ಣು ಮಕ್ಕಳು ಈ ರೀತಿ ಸತ್ತು ಹೋಗಿದ್ದಾರೆ. ಅವರ್ಯಾರ ಸಾವಿಗೂ ನ್ಯಾಯ ಸಿಕ್ಕಿಲ್ಲ. ಅದೇ ರೀತಿ ನನ್ನ ಅತ್ತಿಗೆ ಸಾವಿಗೂ ನ್ಯಾಯ ಸಿಗದೇ ಹೋಗಬಾರದು. ಅಂತ್ಯಕ್ರಿಯೆ ಮಾಡೋದು ಬೇಡ. ಅತ್ತಿಗೆ ಶವವನ್ನು ಪೋಸ್ಟ್ ಮಾರ್ಟ ಮಾಡಿಸಿ ಈ ಕೊಲೆ ಮಾಡಿದವರು ಯಾರೆಂದು ತಿಳಿದುಕೊಳ್ಳುತ್ತೇನೆ. ಆನಂತರ ಅವರೆಲ್ಲಿ ಅಡಗಿಕೊಂಡು ಕುಳಿತಿದರೂ. ಅವರನ್ನು ಹುಡುಕಿ ತಂದು ಅವರಿಗೊಂದು ಗತಿ ಗಣಿಸೋಣ (ಫೋನ್ ತೆಗೆದುಕೊಂಡು ಫೋನ್ ಹಚ್ಚುವನು) ಹಲೋ ಕಾನ್ಸ್ಟೇಬಲ್ ಇಲ್ಲೊಂದು ಕೊಲೆಯಾಗಿದೆ. ಈ ಬಾಡಿಯನ್ನು ಪೋಸ್ಟ್ ಮಾರ್ಟಂ ಮಾಡಬೇಕು. ಬೇಗ ತಕ್ಷಣ ಹೊರಟು ಬನ್ನಿ (ಇಬ್ಬರೂ ಪೀಸ್ ಗಳು ಬರುವರು)

ಪಿಸಿಗಳು:– ಎಲ್ಲಿದೆ ಸರ್ ಬಾಡಿ

ಮಾಂತೇಶ:– ಅಲ್ಲಿದೆ ನೋಡಿ. ಬೇಗ ಪೋಸ್ಟ್ ಮೋಟ ಮಾಡಿ ನನಗೆ ತಕ್ಷಣ ರಿಪೋರ್ಟ್ ಕಳಿಸಿ

ಪಿಸಿಗಳು:– ಎಸ್ ಸರ್(ಹಿನ್ನೆಲೆ ಶ್ಲೋಕ ಗೀತೆಯೊಂದಿಗೆ ಬಾಡಿನ ಎತ್ತಿಕೊಂಡು ಹೋಗುವರು ಲೈಟ್ ಆಫ್ ಆಗುವದು)

ಪ್ರವೇಶ 10

ರಸ್ತೆ ಪರದೆ

ನವೀನ:– (ಮುಸುಗೂ ಹಾಕಿಕೊಂಡು ಪ್ರವೇಶಿಸಿ) ನಮ್ಮ ಹುಡುಗಿ ಇವತ್ತ ರಾತ್ರಿ ಇಲ್ಲೆ ಬಾ ಅಂತ ಹೇಳ್ಯಾಳ ಅದಕ್ಕ ಬಂದಿನಿ. ಇವತ್ತ ಫುಲ್ ರೊಮ್ಯಾಂಟಿಕ್ ಆಗಿ ಮಾತಾಡಿ ಅಕಿಗೆ ಮೂಡ ತರಿಸಿ. ಇವತ್ತ ರಾತ್ರಿ ಹೊತ್ತು ನೋಡಿಹೊಡತ್ತ ಹಾಕುದ್. ಇನ್ ತಡ ಮಾಡುದು ಬ್ಯಾಡ ಪಟ್ಟನ ಫೋನ್ ಹಚ್ಚಿ ಸಾಟ್ನಾ ಕರಿಸಿ. ನನ್ನ ಕೆಲಸ ಮುಗಿಸಿಕೊಂಡು ಹೋದರಾಯ್ತಿ (ಫೋನು ಹಚ್ಚುವನು ಇನ್ನೆಲ್ಲಿ ನಯನ ಮಾತಡಬೇಕು) ಹಲೋ ನಯನ

ನಯನ:– ಹೇಳೋ ನವೀನ

ನವೀನ:– ನಯನ ನಿಮ್ಮ ಮನೆ ಹಿಂದ ಬಂದೀನಿ ಬೇಗ ಬಾ ಚಿನ್ನು

ನಯನ:– ಬಂದ್ಯಾ ತಡಿ ನವೀನ (ಫೋನು ಕಟ್ಟ ಮಾಡುವಳು. ಅಷ್ಟರಲ್ಲಿ ಪ್ರವೀಣ ಮುಸುಗೂ ಹಾಕಿಕೊಂಡು ಪ್ರವೇಶಿಸಿ)

ಪ್ರವೀಣ:– ನಮ್ಮ ಹುಡುಗಿ ಇಲ್ಲೇ ಬಾ ಅಂತ ಮೊನ್ನೆ ಭೇಟಿಯದಾಗ ಹೇಳ್ಯಾಳ್. ಅವತ್ತ ನಂಬರ್ ತಗೊಂಡಿದ್ರ. ಪಟ್ನ ಫೋನ್ ಹಚ್ಚಿ ಬೇಗ ಬಾ ಅಂತ ಕರಸಾಕ್ ಬರುತ್ತಿತ್ತು. ಆದ್ರ ಏನ ಮಾಡೋದು ನನ್ನತ್ರ ಅಕಿ ನಂಬರ್ ಇಲ್ಲ. ಬರ್ತೀನಂತ ಹೇಳ್ಯಾಳ್ ಬಂದ ಬರ್ತಾಳ ಆಕಿ ಬರುತ್ತನ ಕಾದರಾಯಿತು (ಒಂದು ಕಡೆ ನೋಡಿ) ಅಲೆ ನನಗಿಂತ ಮೊದಲ ಬಂದ ನಿಂತೈತಲ್ರಿ ನನ್ನ ಪ್ರೀತಿಯ ಪಾರಿವಾಳ ಮತ್ಯಾಕ ತಡ. ಹೋಗಿ ತೆಕ್ಕಿ ಬಡಕೊಂಡು ಬಂದ ಕೆಲಸ ಶುರು ಮಾಡೇ ಬಿಡುದು (ಹಿಂದೆ ಹೋಗಿ ಅಪ್ಪಿಕೊಳ್ಳುವನು)

ನವೀನ:– ಆಹಾಹಾ..... ಹುಡುಗಿಯರಂದ್ರ ಹಿಂಗಿರಬೇಕ್ರಿ. ಒಂದ ಮಾತಿಗೆ ಬಂದು ನನ್ನ ತೆಕ್ಕಿ ಬಡಕೊಂಡ ಬಿಟ್ಲು. ಮತ್ಯಾಕ ತಡ ಶುರು ಮಾಡೋದು ಕಬಡ್ಡಿನ (ಇವನು ಅಪ್ಪಿಕೊಳ್ಳುವನು ಇಬ್ಬರು ತಿಕ್ಕಾಡುತ್ತಾ)

ಪ್ರವೀಣ:– ಆಹಾಹಾ ಹುಡುಗಿ ನಿನ್ನ ತೆಕ್ಕಿ ಬಡುಕೊಳ್ಳೋಣ ಹಿಡಿದಿರು ತಂಡಿ ಬಿಟ್ಟ ಹೋತು. ಇನ್ನ ಒಂದು ರೌಂಡ್ ಕಬ್ಬಡ್ಡಿ ಆಡಿದರ ಇಡಿ ಮೈಯಲ್ಲ ಹಗುರ ಆಗಿ ಬಿಡತೈತಿ. ಜಲ್ದಿ ಬಾರ ಹುಡುಗಿ ಕಬ್ಬಡ್ಡಿ ಮೈದಾನಕ್ಕ

ನವೀನ:– ಇದೇನಾ ನಯನ ನೀನು ಎರಡು ಕೈ ಎಷ್ಟು ಬಿರಸ ಆದವಲ್ಲ. ಮತ್ತ ಕೈ ಮೇಲೆ ಕೂದಲು ಬಾಳ ಅದವಲ್ಲ. ಒಮ್ಮಾರ ನಿನ್ನ ಮೈ ಮಸಾಜ್ ಮಾಡಿಸಿಕೊಂಡೆ ಲಿಲ್ಲೇನ. ಇರ್ಲಿ ಬಿಡು ಹುಡುಗಿ. ಈಗ ನಾ ತಿಕ್ಕು ಕಡಿತಕ್ಕ ಇದ್ದ ಬಿದ್ದ ಕೂದಲೆಲ್ಲ ಉದುರಿಹೋಗರಬೇಕ. ಬಾಬಾ ಹಂಗ ತಿಕ್ಕುತ್ತೀನಿ

ಪ್ರವೀಣ:– ಏನ್ರಿ ಇಕೀವು ಹಿಡುಕೊಳ್ಳೋಕ ಏನು ಸಿಗವಲವು. ಎಲ್ಲಿ ಕೈಯಾಡಿಸಿದರೂ ಬರೆ ಬರುಸನ ಕೂದಲನ್ನ ಹತ್ತವು (ಇಬ್ಬರು ಮುದ್ದಾಡುವಾಗ ನಯನ ಕೈಯಲ್ಲಿ ಚರಿಗಿ ಹಿಡಿದುಕೊಂಡು ಪ್ರವೇಶಿಸಿ)

ನಯನ:– ಎ ಯಾರ್ ಅವರು (ಇಬ್ಬರು ಗಾಬರಿಯಿಂದ ನೋಡಿ ಅಪ್ಪಿ ಕೊಂಡಿದ್ದು ಬಿಡುವರು)

ನವೀನ:– (ಮುಸುಗೂ ತಗದು) ಇದೇನಾ ನಯನ. ನೀ ನೋಡಿದರ ಈಗ ಬಂದಿ ಇಷ್ಟೋತಕ ನಾ ಹಿಡುಕೊಂಡು ಮುತ್ತು ಕೊಟ್ಟಿದ್ದು ಯಾರಿಗೆ

ಪ್ರವೀಣ:– (ಮುಸುಗೂ ತಗದು) ಎ ಎ ನವೀನ ಇಷ್ಟೋತ್ತನ್ಯಾಗ ನಿ ಇಲೆನ್ ಮಾಡಾಕತ್ತಿಲೇ

ನವೀನ:– ನಂದೊಂದು ಅಡ ಕಳಿಗಿ ಕಳದಿತ್ತು ಅದನ್ನ ಹುಡುಕಾಕ ಬಂದಿದ್ಯಾ. ಮತ್ತ ನಿ ಇಲ್ಯಾಕ್ ಬಂದಿಲೇ ಪ್ರವೀಣ

ಪ್ರವೀಣ:– ನಂದೊಂದು ಅಕಳ ಮನಕ ಕಳದಿತ್ತು ನಾನು ಅದನ್ನ ಹುಡುಕಾಕ ಬಂದಿದ್ಯಾ. ಮತ್ತ ನಿಂದೆನ್ ಕಳದಿತ್ತು ನಯನ

ನಯನ:– ಹಾಂ ನಂದ. ಒಂದು ಹೊತ್ತಮರಿ. ಒಂದು ಹೋರಿಕರ. ಕಳದಿತ್ತು ನಾನು ಹುಡುಕಾಕ ಬಂದೀನಿ. ಎ ಕೈಯಾಗ ಕಾಣವಲ್ಲತ್ತನ್ನು ಚರಿಗಿ. ನಾನು ಬೈಲ್ ಕಡೆ ಹೊಂಟೀದ್ಯಾ. ನಿಮಿಬ್ಬರನು ದಾರ್ಯಾಗ್ ನೋಡಿದ್ಯಾ. ಅದಕ್ಕ ನಿಮ್ಮನ ಮಾತ್ತಾಡಿಸಿದ್ಯಾ. ಸರಿ ಸರಿ ನಂಗ ದಾರಿ ಬಿಡ್ರಿ ನನ್ನಗ ಅರ್ಜೆಂಟ್ ಐತಿ

ನವೀನ:– ನಿಂದ್ರ ಹುಡುಗಿ ಸರ್ವಹೊತ್ತನ್ಯಾಗ ಬೆಟ್ಯಾಗಿ ಸಟ್ನ ಹೊಂಟಿಯಲ್ಲ. ಸ್ವಲ್ಪ ಕಷ್ಟ ಸುಖ ಮಾತಾಡು ನಿಂದರ

ಪ್ರವೀಣ:– ಎ ನವೀನ. ಕಷ್ಟ ಸುಖ ಮಾತಾಡು ಹೊತ್ತು ಅಲೋ ಇದು. ಕಷ್ಟಪಡುವ ಹೊತ್ತು ಇದು. ಅಲ್ಲ ಹುಡುಗಿ ಅರ್ಧ ರಾತ್ರಿಯಾಗ ಬೆಟ್ಯಾಗಿ ಹಂಗ ಹೊಂಟಿಯಲ್ಲ. ಏನಾರ ಒಂದು ಪ್ರೀತಿ ಕೋನರ ಕೊಟ್ಟು ಹೋಗು

ನಯನ:– ಪ್ರೀತಿ ಕೂನ ಅಂದ್ರ ಏನ ಹುಡುಗ

ನವೀನ:– ಅದ ಹುಡುಗಿ ನಮ್ಮ ಇಬ್ಬರ ನೆನಪಿಗಾಗಿ ವಗಿ ಒಂದು ಮಸ್ತನ ಮಸಾಲಿ ಸಾಂಗ್

ನಯನ:– ಮತ್ಯಾಕ ತಡ ಬರ್ರೋ ಹುಡುಗರ. ಮೂರು ಮಂದಿ ಕೂಡಿ ಒಂದು ಡ್ಯಾನ್ಸ್ ಮಾಡಿಬಿಡೋಣ ಫುಲ್ ಜೋರ (ಜೋಡಿ ಪದ ಮುಗಿದ ನಂತರ ಜೊತೆಯಾಗಿ ಹೋಗುವರು)

ರಸ್ತೆ ಸಿನ್

ಮಹೇಂದ್ರ:– (ಮಚ್ಚು ಹಿಡಿದು ಪ್ರವೇಶಿಸಿ ಸಿಗರೇಟ್ ಹಚ್ಚಿ) ಲೆ ಮಾಂತೇಶ (ನಕ್ಕು) ಕಾಕಿ ಬಟ್ಟೆ ಹಾಕಿಕೊಂಡು ನಾನೆ ಸರಕಾರದ ಸರದಾರನೆಂದು ಮೆರೆಯುತ್ತಿರುವ. ಆ ನಿನ್ನ ಕಾಕಿ ಬಟ್ಟೆಯನ್ನು ಬಿಚ್ಚಿಸಿ. ಕೈಯಲ್ಲಿ ಬಳೆ ತೊಟ್ಟಿಕೊಂಡುಮನೆಯಲ್ಲಿ ಕುಳಿತುಕೊಳ್ಳುವ ಹಾಗೆ ಮಾಡಿದ್ದಾನೆ ಈ ಮಗಧೀರ ಮಹೇಂದ್ರ (ನಕ್ಕು) ಲೆ ಮಾಂತೇಶ ಬೆಂಕಿನ ಮುಟ್ಟಿದರೆ ಕೈ ಸುಡುತ್ತೆ. ಸೂರ್ಯನಿಗೆ ಎದುರು ನಿಂತ್ರೆ ಕಣ್ಣು ಕುಕ್ಕುತೆ. ಈ ಮಗಧೀರ ಮಹೇಂದ್ರನು ಎದುರು ಹಾಕಿಕೊಂಡ್ರೆ ನಿಮ್ಮ ಪ್ರಾಣವೇ ಹೋಗುತ್ತೆ (ನಕ್ಕು ಸಿಗರೇಟ್ ಸೇದುತ ನಿಂತಾಗ. ಮಂಜುಳಾ ಬ್ಯಾಗ್ ಹಾಕಿಕೊಂಡು ಪ್ರವೇಶಿಸಿ)

ಮಂಜುಳಾ:– ಹಲೋ ಮಿಸ್ಟರ್ ಸ್ವಲ್ಪ ಸೈಡು ನಿಂತುಕೊಳ್ಳಿ. ನೀವು ಈ ರೀತಿ ದಾರಿಗೆ ಆಡ್ಡವಾಗಿ ನಿಂತರೆ ಜನರು ಓಡಾಡೋದು ಹೇಗೆ

ಮಹೇಂದ್ರ:– ಜನರು (ನಕ್ಕು ಸ್ವ) ಜಾತಕ ಪಕ್ಷಯಂತೆ ಕಾಯುತ್ತಿರುವ ಈ ಜಂಗಲ್ ದಾದನ ಕಣ್ಣಿಗೆ ಒಂದು ಒಳ್ಳೆಯ ರಂಬೆ ಬಿದಿತ್ತು (ಪ್ರ) ಏ ಹುಡುಗಿ ನಿನ್ನ ಹೆಸರು ಏನು. ನಿಂದು ಯಾವೂರು

ಮಂಜುಳಾ:– ಎ ಮಿಸ್ಟರ್ ನಂದು ಯಾವ ಊರಾದರೆನ್ನು. ಅದುಯಲ್ಲ ನಿನಗ ಯಾಕೆ ಬೇಕು. ಸುಮ್ಮನೆ ದಾರಿ ಬಿಡು ನನಗೆ

ಮಹೇಂದ್ರ:– ದಾರಿ (ನಕ್ಕು) ನಿಂತುಕೊಳ್ಳಲೇ ಲಡ್ಡಿ. ಸುರಕ್ಷಿತವಾಗಿ ಹೋಗಬೇಕೆಂದಿರುವೆಯಾ ಈ ಮಹೇಂದ್ರನನ್ನು ಕೆಣಕಿ. ಕೆಣಕಿದ ಹೆಣ್ಣನ್ನು ಸುಮ್ಮನೆ ಬಿಡುವಷ್ಟು ಮೂರ್ಖನಲ್ಲ ಈ ಕಲಿಯುಗದ ಕಲಕಿ. ಬಾರಲೇ ಬಾಲಕಿ. ಹತ್ತು ಬಾ ನನ್ನ ಪ್ರೇಮದ ಪಲ್ಲಕ್ಕಿ. ಬಾರಲೇ ಬಣ್ಣದ ಹಕ್ಕಿ. ಆ ಬಾನಲ್ಲಿ ಮಿನುಗುತ್ತಿದ್ದವು ನಕ್ಷತ್ರಗಳ ಚುಕ್ಕಿ. ಈ ಕಾಮ ರಾಜನ ಕಣ್ಣಿಗೆ ಕುಕ್ಕುತ್ತಿದೆ ಈ 18ರ ಹಕ್ಕಿ. ಬಾರಲೇ ಬಾ ಸುಂದರವಾದ ಲಡ್ಡಿ ಬಾ (ಕೈಹಿಡಿದು ಎಳೆಯುವನು)

ಮಂಜುಳಾ:– ಎ ಕೈ ಬಿಡೋ ತಿರುಬೋಕಿ. ಇನ್ನೊಂದು ಮಾತು ಹೆಚ್ಚಿಗೆ ನೋಡಿದರೆ ಕಾಲಲ್ಲಿರುವ ಚಪ್ಪಲಿ ಕೈಯಲ್ಲಿ ಬರಬೇಕಾಗುತ್ತದೆ ಬಲು ಜ್ವಾಕಿ

ಮಹೇಂದ್ರ:– ಜ್ವಾಕಿ (ನಕ್ಕು) ಜ್ವಾಕಿ ಎಂದು ಜಿಗಿದ್ಯಾಡಬ್ಯಾಡಲೇ ಜುಮ್ಮಿ ತೋಟ ಜಿಂಕೆ. ಈ ನಿನ್ನ ಶೃಂಗಾರ ಎಂಬ ಶೀಲದ ತೋಟಕ್ಕೆ. ನಾನು ಹಚ್ಚಲೇಬೇಕು ಕಾಮದ ಬೆಂಕಿ. ಬಾರಲೇ ಬಾ. ಲಕ ಲಕ ಹೊಳಿಯುತ್ತಿರುವ ಲಡಕಿ

(ಎಳೆದೆಡುವಾಗ. ಮಾಂತೇಶ ಸಾದಾ ಡ್ರೆಸಿನಲ್ಲಿ ಪ್ರವೇಶಿಸಿ. ಮಹೇಂದ್ರನ ಕಾಲರ್ ಹಿಡಿದು ಎಳೆದು)

ಮಾಂತೇಶ:– ಲೇ ಮಹೇಂದ್ರ. ಆ ಹುಡುಗಿಯನ್ನು ಕೈ ಬಿಡಲೇ ಆವಿವೇಕಿ. ಇಲ್ಲ ಈ ಮಾಂತೇಶನ ಕೈಯಲ್ಲಿ ಹಾರಿ ಹೋಗೋದು ನಿನ್ನ ಪ್ರಾಣ ಎಂಬ ಹಕ್ಕಿ. ಹಿಂದಕ್ಕೆ ಸರಿಯಲೇ ತಿರುಬೋಕಿ

ಮಹೇಂದ್ರ:– ಲೇ ಮಾಂತೇಶ ಇದು ನಿನಗೆ ಸಂಬಂಧವಿಲ್ಲದ ವಿಷಯ. ಇದರಲ್ಲಿ ನೀನು ತಲೆ ಹಾಕುವದು ಸರಿಯಲ್ಲ. ಇಲ್ಲಿಂದ ಸುಮ್ಮನೆ ಜಾಗ ಕಾಲಿ ಮಾಡು. ಯಾಕಂದರೆ ಈಗಾಗಲೇ ನನ್ನನ್ನು ಕೆಣಕಿ ಕಾಕಿ ಬಟ್ಟೆಯನ್ನು ಕಳೆದುಕೊಂಡಿದ್ದೀಯಾ. ಮತ್ತೆ ಈ ನನ್ನ ಕಾರ್ಯದಲ್ಲಿ ಅಡ್ಡ ಗೋಡೆಯಾಗಿ ಬಂದು ನಿನ್ನ ಪ್ರಾಣವನ್ನು ಕಳೆದುಕೊಳ್ಳಬೇಡ ಇಲ್ಲಿಂದ ಹೊರಟು ಹೋಗು

ಮಾಂತೇಶ:– ಲೆ ಮಹೇಂದ್ರ. ನಿನ್ನ ಕೈಯಲ್ಲಿ ಪ್ರಾಣ ಕಳೆದುಕೊಳ್ಳುವುದಕ್ಕೆ ನಾನೇ ಹೇಡಿಯಲ್ಲಲೇ. ನಿಮ್ಮಂತ ರೌಡಿಗಳ ರುಂಡ ಹಾರಿಸುವ ರುದ್ರತಾಂಡವ ಈ ಮಾಂತೇಶ. ಏನಂದಲೇ ಕತ್ತೆ ನನ್ನ ಮಗನೇ. ನನ್ನ ಮೈ ಮೇಲಿರೋ ಕಾಕಿ ಬಟ್ಟೆಯನ್ನು ಕಸಿದುಕೊಂಡು. ನೀವು ನಡೆಸಿರುವ ಈ ನಾಟಕದಲ್ಲಿ ನಾವು ಗೆದ್ದಿದ್ದೇವೆ ಎಂದು ನೀವು ತಿಳಿದುಕೊಂಡಿರಬಹುದು. ಅದರೆ ಅಸಲಿ ಆಟ ಇನ್ನ ಮುಂದೆ ನಾನು ಶುರು ಮಾಡುತ್ತೇನೆ. ನೀವು ನಡೆಸಿರುವ ಈ ನಾಟಕಕ್ಕೆ ಕೊನೆ ನಾಂದಿಯನ್ನು ನಾನು ಹಾಡುತ್ತೇನೆ. ಲೇ ಹರಾಮ್ ಕೋರ ಮಹೇಂದ್ರ. ಕಾಕಿ ಬಟ್ಟೆ ಹಾಕಿಕೊಂಡ ಸಿಂಹಕ್ಕೆ ಹೊಡಿಯೋಕೆ ಒಂದೇ ದಾರಿ. ಕಾಕಿ ಬಟ್ಟೆ ಬಿಚ್ಚಿರುವ ಈ ಸಿಂಹಕ್ಕೆ ಹೊಡಿಯೋದಕ್ಕೆ ನೂರೆಂಟು ದಾರಿ. ನಿಮ್ಮ ಸಾಮ್ರಾಜ್ಯವನ್ನು ಸಮಾಧಿ ಮಾಡುವುದಕ್ಕೆ ಸಿಡಿದೆದ್ದು ನಿಂತಿದೆ ಈ ಸಿಂಹದಮರಿ. ಈ ಮಾಂತೇಶನ ಕೈಯಲ್ಲಿ ನಿಮ್ಮ ಸಾಮ್ರಾಜ್ಯವನ್ನು ಉಳಿಸಿಕೊಳ್ಳಲೇ ಮಳ್ಳ ಕುರಿ. ಇನ ಮುಂದೆ ನಿಮ್ಮ ಒಬ್ಬೊಬ್ಬರ ಪ್ರಾಣ ಹೋಗುವುದು ಈ ಸರದಾರ ಮಾಂತೇಶನ ಕೈಯಲ್ಲಿ ಹಾರಿ. ಇದು ನಿನಗೆ ಎಚ್ಚರವಿರಲಿ ಮಗನೇ

ಮಹೇಂದ್ರ:– ಸಿಡಿದೆದ್ದ ಸಿಂಹದಮರಿ (ನಕ್ಕು) ಲೆ ಮಾಂತೇಶ ನಮ್ಮ ಪ್ರತಿಯೊಂದು ಕಾರ್ಯಕ್ಕೂ ಅಡ್ಡಗೋಡಿ ಆದ ನಿನ್ನನ್ನು ಅಡ್ಡಡ್ಡ ಮಲಗಿಸುವರೆಗೂ ನೆಮ್ಮದಿ ಇಲ್ಲ. ಈ ಮಗಧೀರ ಮಹೇಂದ್ರನಿಗೆ. ಇವತ್ತಲ್ಲ ನಾಳೆ ನಿನ್ನ ಸೂರತ್ತನಕ್ಕೆ ಸವಾಲ್ ಹಾಕಿ. ನಿನ್ನ ಶೌರ್ಯವನ್ನು ಸಮಾಧಿ ಮಾಡಲಿಲ್ಲ. ನನ್ನ ಹೆಸರು ಸಾವಿರಾನಿ ಬಲದ ಸರದಾರ ಮಗಧೀರ ಮಹೇಂದ್ರನೇ ಅಲ್ಲ (ನಕ್ಕು) ಬರುತ್ತೇನೆ (ಹೋಗುವನು)

ಮಾಂತೇಶ:– ಲೇ ಮಹೇಂದ್ರ. ಸುರನೆಂದು ಸವಾಲ್ ಹಾಕಿ ಹೋಗಬೇಡ ಈ ಕೆಂಗೆಟ್ಟ ಕಾಳಿಂಗ ಸರ್ಪ ಮಾಂತೇಶಗೆ. ನಿನ್ನಂತ ಸಾವಿರಾ ರಾಣಿ ಬಲದ ಸರದಾರರಿಗೆ ಸೊಡ್ಡು ಹೊಡೆದು ಸವಾಲ್ ಹಾಕಿದ ಸೂರರ ಮನೆತನಲೇ ನಮ್ಮದು ಹೇಡಿ ನನ್ನ ಮಗನೇ. ನಿನಗೇನುಗೊತ್ತುಲೇ ನರ್ಮದಾ. ಹಾಂ ಇದೇನು ಮಂಜುಳಾ ನೀನು ಇಲ್ಲಿ ಯಾವೂರಿಗೆ ಹೊರಟಿದಿಯಾ ನೀನು

ಮಂಜುಳಾ:– ಮಾಂತೇಶ್ ಇಲ್ಲೆ ನನ್ನ ಫ್ರೆಂಡ್ ಊರಿಗೆ ಹೊರಟಿದೆ. ಹೌದು ಮಾಂತೇಶ ನೀನು ಇಲ್ಲಿ

ಮಾಂತೇಶ:– ಇದು ನಮ್ಮ ಊರು ಮಂಜುಳಾ ಮಂಜುಳಾ:– ಹೌದ ಮಾಂತೇಶ್ ನೀನು ಕಾಲೇಜ್ ಅಲ್ಲಿರುವಾಗ ಐಪಿಎಸ್ ಅಧಿಕಾರಿ ಆಗುತ್ತೇನೆ ಅಂದಿದೆಯಲ್ಲ ಆ ಐಪಿಎಸ್ ನೌಕರಿ ಸಿಕ್ಕಿದಿಯಾ ನಿನಗೆ

ಮಾಂತೇಶ:–ಆ ನೌಕರಿ ನನಗೆ ಸಿಕ್ಕಿದೆ ಮಂಜುಳಾ ಅದೇ ಕೆಲಸದ ಮೇಲೆ ಇದ್ದೀನಿ ಇವಾಗ

ಮಂಜುಳಾ:– ಹೌದೇ ಒಳ್ಳೇದಾಯ್ತು ಬಿಡು ಮಾಂತೇಶ್. ಹಾಂ ಮಾಂತೇಶ ನನ್ನ ನಿನ್ನ ವಿಷಯ ಏನು ಮಾಡಿದೆ

ಮಾಂತೇಶ:– ಯಾವ ವಿಷಯ ಮಂಜುಳಾ ಮಂಜುಳಾ:– ಅದೇ ಮಾಂತೇಶ. ನನ್ನ ನಿನ್ನ ಪ್ರೀತಿಯ ವಿಷಯ

ಮಾಂತೇಶ:– ಅದಕ್ಕೆ ಏನಾಯ್ತು ಮಂಜುಳಾ

ಮಂಜುಳಾ:– ಅದೇ ಮಾಂತೇಶ. ನಾನು ಕಾಲೇಜಿನಲ್ಲಿರುವಾಗ ನನ್ನ ಪ್ರೀತಿಯನ್ನು ನಿನಗೆ ಮೂರು ನಾಕ್ಕೂ ಸಾರಿ ಹೇಳಿದಿನೆ. ಆದರೆ ನಿನ್ನ ಒಪ್ಪಿಗೆ ಏನಂತ ನನಗೆ ಹೇಳಲಿಲ್ಲ ಆ ವಿಷಯ

ಮಾಂತೇಶ:– ಮಂಜುಳಾ ಆ ವಿಷಯದ ಬಗ್ಗೆ ಮಾತನಾಡೋಕೆ. ಈಗ ನನಗೆ ಸಮಯವಿಲ್ಲಾ ಮತ್ತೊಂದು ಸಲ ಭೇಟಿಯಾದಗ ಹೇಳುತೀನಿ. ನಾನಿನ್ನು ಬರುತೇನೆ

ಮಂಜುಳಾ:– ನಿಂತಕೋ ಮಾಂತೇಶ. ನಿನ್ನ ಪ್ರೀತಿಯನ್ನು ಬಯಸಿ ಬಂದ. ಈ ಪ್ರೇಯಸಿ ಕನಸನ್ನು ತಿರಸ್ಕರಿಸಿ ಹೋಗುವೆಯ್ಯ. ನೋಡು ಮಾಂತೇಶ ನಿನ್ನ ಪ್ರೀತಿಗಾಗಿ ಎಷ್ಟು ವರ್ಷ ಬೇಕಾದ್ರೂ ನಾನು ಕಾಯುತ್ತೆನೆ

ಮಾಂತೇಶ:– ಮಂಜುಳಾ ನನ್ನ ಮನೆತನದ ಪರಸ್ಥಿತಿ. ನನ್ನ ಮನಸ್ಥಿತಿ ಎರಡು ಈಗ ಸರಿ ಇಲ್ಲ. ನಿನ್ನ ಪ್ರೀತಿಯನು ನಾನು ಒಪಿಕೊಂಡಿದ್ದೇನೆ. ಆದರೆ ನನಗೆ ಇನ್ನು ಸ್ವಲ್ಪ ಸಮ್ಮಯಬೇಕು

ಮಂಜುಳಾ:– ಅಯ್ತು ಮಾಂತೇಶ. ನಿನ್ನಗಾಗಿ ಕಾಯುತ್ತೆನೆ. ಈಗ ಈ ನಿನ್ನ ಪ್ರೇಯಸಿ ಒಂದು ಮುತ್ತು ಕೊಟ್ಟು. ಒಂದು ಗೀತೆಯನ್ನು ಹಾಡಿ ಹೋಗಬಾರದೆ

ಮಾಂತೇಶ:– ಅಯ್ತು ಮಂಜುಳಾ ನಿನ್ನ ಆಸೇ ಅಂತೇ ಬಾ ಇಬ್ಬರು ಕುಡಿ ಹಾಡೋಣ (ಜೋಡಿ ಪದ ಮುಗಿದ ನಂತರ)

ಮಂಜುಳಾ:– ಮಾಂತೇಶ್ ನಾನಿನ್ನು ಹೋಗಿ ಬರುತ್ತೇನೆ (ಹೋಗುವಳು)

ಮಾಂತೇಶ:– ಆಯ್ತು ಮಂಜುಳಾ ಹೋಗಿ ಬಾ. ನನಗೆ ರಿಪೋರ್ಟ್ ನಲ್ಲಿ ಬಂದಿರುವ ವಿಷಯವನ್ನು ಕ್ರಾಂತಿವೀರನಿಗೆ ಹೇಳಲೇಬೇಕು ಯಾಕೆಂದರೆ ಇದರಲ್ಲಿ ಅವನ ತಂಗಿಯ ಅತ್ಯಾಚಾರವಾದ ವಿಷಯ ಅಡಗಿದೆ ಹೋಗಿ ಹೇಳಿ ಬರುತ್ತೇನೆ (ಹೋಗುವನು)

ಪ್ರವೇಶ 11

ರಾಜೇಂದ್ರನ ಮಹಡಿ ಮನೆ

(ರಾಜೇಂದ್ರ ನಾಗೇಂದ್ರ ಮಹಡಿ ಮೇಲೆ ಕುಳಿತಿರಬೇಕು. ರಾಜೇಂದ್ರ ಕೆಳಗಿಳಿದು ಬಂದು ಸಿಗರೇಟ್ ಹಚ್ಚಿ)

ರಾಜೇಂದ್ರ:– ಲೇ ಮಹೇಶ (ನಕ್ಕು) ನಿನ್ನ ತಮ್ಮದಿರು ನನಗೆ ಎದುರಾಗಿ ನೀತಿದ್ದಕ್ಕೆ ಸ್ವರ್ಗ ಲೋಕದಂತೆ ಸ್ವರ್ಗಲೋಕವದ ನಿನ್ನ ಮನೆತನ ಈ ರಾಜೇಂದ್ರನ ಸಿಡಿಲಿನ ಆರ್ಭಟಕೆ ಸಿಕ್ಕು ಸುಟ್ಟು ಸ್ಮಶಾನವಾಗಿ ಹೋಯಿತು (ನಕ್ಕು) ರತಿ ರಮನೆಂತೆರುವ ನಿನ್ನ ಹೆಂಡತಿ ಭಾಗ್ಯಾಶ್ರೀ. ಈ ರಾಜೇಂದ್ರನ ಕೈಯಲ್ಲಿ ಶೀಲಾ ಕಳೆದುಕೊಂಡು ಸತ್ತು ಸ್ಮಶಾನ ಸೇರಿದಳು. ನನ್ನ ಬಲಗೈ ಬಂಟನಾದ ಮಹೇಂದ್ರನನ್ನು ಮುಟ್ಟಿದ ತಪ್ಪಿಗಾಗಿ ತನ್ನ ಕಾಕಿ ಬಟ್ಟೆಯನ್ನು

ಕಳೆದುಕೊಂಡ. ಆ ನಿನ್ನ ತಮ್ಮ ಮಾಂತೇಶ. ಇನ್ನು ನಿನ್ನ ದೊಡ್ಡ ತಮ್ಮ ಮೈಲಾರನಿಗೆ ಈ ರಾಜೇಂದ್ರನ ಕೈಚಳಕ ತೋರೊಸೋದಕ್ಕೆ ಸಿದ್ದನ್ನಾಗಿ ನಿಂತಿದ್ದಾನೆ ಈ ಆರ್ಭಟದ ಹುಲಿ (ನಗುತ್ತಿರುವ ನಾಗೇಂದ್ರ ಸಿಗರೇಟ್ ಹಚ್ಚುತ್ತ ಕೆಳಗಿಳಿದು)

ನಾಗೇಂದ್ರ:– ಸಾಹೇಬ್ರೆ ಆರ್ಭಟದ ಹುಲಿ ಎಂದು ಅಬರಿಸಿದರೆ ಸಾಲದು. ಹಠ ತೋಟ ಹುಲಿಯಾಗಿ ಅವರ ಘಟ್ಟವನ್ನು ಹರಿದು ರಕ್ತ ಕುಡಿಯುವ ರಣಧೀರರು ನಾವಗಲೇಬೇಕು (ನಕ್ಕು) ನಮಗೆ ಎದುರಾದ ಮೈಲಾರನ ರಕ್ತದ ಹೊಳೆ ಹರಿಸುವವರೆಗೂ ಈ ನಟ ಭಯಂಕರ ನರನಾಗೇಂದ್ರನ ಎದೆಯಲ್ಲಿ ಉರಿಯುತ್ತಿರುವ ಬೆಂಕಿ ಶಾಂತಿ ಆಗುವುದಿಲ್ಲ (ಮಹೇಂದ್ರ ಮಚ್ಚು ಹಿಡಿದು ಸಿಗರೇಟ್ ಹಚ್ಚುತ್ತಾ ಪ್ರವೇಶಿಸಿ)

ಮಹೇಂದ್ರ:– (ಸಿಟ್ಟಿನಿಂದ ಹಲ್ಲು ಕಡಿಯುತ್ತಾ) ಸಾಹೇಬ್ರೆ ಆ ಮೈಲಾರ ಮಾಂತೇಶ ನಮ್ಮ ಪ್ರತಿಯೊಂದು ಕಾರ್ಯಕ್ಕೆ ಅಡ್ಡಗೋಡೆಯಾಗಿ ಬರುತ್ತಿದ್ದಾರೆ. ಅವರನ್ನು ಹರಣ ಪಾದ ಸೇರಿಸುವವರೆಗೂ ನಮಗೆ ಕಂಟಕ ತಪ್ಪಿದ್ದಲ್ಲ ರಾಜೇಂದ್ರ:– ಕಂಟಕ (ನಕ್ಕು) ಮಹೇಂದ್ರ ಕಂಟಕವನ್ನು ಕಡೆಗಣಿಸುವ ಖಿಳನಾಯಕರು ನಾವಾಗಿರುವಾಗ. ನಮಗೆ ಎಲ್ಲಿದೆ ಕಂಟಕ. ಇನ್ನು ಮುಂದೆ ಅವರಿಬ್ಬರನ್ನು ಬದುಕಲು ಬಿಡಬಾರದು ನಾಗೇಂದ್ರ ಆ ಕ್ರಾಂತಿವೀರನಿಗೆ ಫೋನ್ ಹಚ್ಚಿ ಬೇಗ ಬರಲು ಹೇಳು. ಆ ಮೈಲಾರನ ಕೋಲುವುದಕ್ಕೆ ಸುಪಾರಿ ಕೊಟ್ಟ ವಿಷಯ ಏನಾಯ್ತು ಎಂದು ವಿಚಾರಿಸೋಣ

ನಾಗೇಂದ್ರ:– ಆಯ್ತು ಸಾಹೇಬ್ರೆ (ಫೋನ್ ಹಚ್ಚಿ) ಕ್ರಾಂತಿವೀರ ಎಂಎಲ್ಎ ಅವರ ಮನೆಗೆ ತಕ್ಷಣ ಹೊರಟು ಬಾ

ಮಹೇಂದ್ರ:– ಸಾಹೇಬ್ರೆ ನಾವು ಕರೆಸಿದ ಕ್ರಾಂತಿವೀರ ಆ ಮೈಲಾರನ್ ಜೋಡಿ ಶ್ಯಾಮಿಲ್ ಆಗಿ. ಅವನು ಕೂಡ ನಮಗೆ ವಿರುದ್ಧವಾಗಿ ನಿಂತಿರಬಹುದು ಅನಿಸುತ್ತದೆ ನನಗೆ

ನಾಗೇಂದ್ರ:– ಮಹೇಂದ್ರ ಅವನು ನಮ್ಮ ವಿರುದ್ಧವಾಗಿ ನಿಂತರೆ. ಅವನ ದೇಹವನ್ನು ವಿಕೃತ ವಿಖಿರವಾಗಿ ಕೊಚ್ಚಿ ಹಾಕಿ ಬಿಡೋಣ (ಕ್ರಾಂತಿವೀರ ಮಚ್ಚು ಹಿಡಿದು ಪ್ರವೇಶಿಸಿ)

ಕ್ರಾಂತಿವೀರ:– ಯಾಕೆ ನಾಗೇಂದ್ರ ತಕ್ಷಣ ಹೊರಟು ಬಾ ಅಂತ ಫೋನ್ ಮಾಡಿದೆಯಲ್ಲ ಯಾಕೆ

ರಾಜೇಂದ್ರ:– ಲೇ ಕ್ರಾಂತಿವೀರ ಯಾಕೆ ಏನೆಂದು ಅನವಶ್ಯಕವಾಗಿ ಪ್ರಶ್ನೆ ಕೇಳುವುದು ಬೇಡ. ನಾವು ಆ ಮೈಲಾರನನ್ನು ಕೊಲ್ಲುವುದಕ್ಕೆ ನಿನಗೆ ಸುಪಾರಿ ಕೊಟ್ಟು ಎಷ್ಟು ದಿವಸವಾಯಿತು ಇನ್ನು ಅದರ ಸುದ್ದಿ ನಮಗೆ ತಲುಪಲಿಲ್ಲ. ಆದರೆ ದೀನ ನಿತ್ಯ ಅವರ ಅಟ್ಟಹಾಸ ನಮ್ಮ ಮೇಲೆ ಹೆಚ್ಚಾಗುತ್ತಿದೆ. ಆ ಕೆಲಸ ನಿನ್ನಿಂದ ಆಗದಿದ್ದರೆ. ನನ್ನ ಕೈಯಲ್ಲಿ ಆಗುವುದಿಲ್ಲ ಎಂದು ಸಲಾಂ ಹೊಡಿದು ಇಲ್ಲಿಂದ ಬಚಾವಾಗಿ ಹೋಗಲೇ ಬಚ್ಚಾ

ಕ್ರಾಂತಿವೀರ:– ಏನಂದಲೇ ಲುಚ್ಚಾ. ಭಯಪಟ್ಟು ಬಚ್ಚವಾಗಿ ಹೋಗೋದಕ್ಕೆ ಈ ಕ್ರಾಂತಿವೀರನೇಣು ಹುಚ್ಚ ನಲ್ಲಲೇ. ಮೊದಲು ಮರ್ಯಾದೆ ಕೊಟ್ಟು ಮರ್ಯಾದೆಯನ್ನು ತೆಗೆದುಕೋ. ಅದನ್ನು ಬಿಟ್ಟು ಅವಿವೇಕಿಯಾಗಿ ಹುಚ್ಚಿಡಿದ ನಾಯಿಯಂತೆ ವರ್ತಿಸಿದರೆ ಲೇ. ಆ ಮೈಲಾರನಕಿಂತ ಮುಂಚೆ ನಿಮ್ಮ ಪ್ರಾಣ ಹಾರಿ ಹೋಗಬೇಕಾಗುತ್ತದೆ ಎಚ್ಚರ

ನಾಗೇಂದ್ರ:– ಎಚ್ಚರ (ನಕ್ಕು) ಲೇ ಕ್ರಾಂತಿವೀರ ಯಾರ ಮನೆಗೆ ಬಂದು ಏನು ಮಾತನಾಡುತ್ತಿದ್ದೇನೆಂದು ಪರಿಜ್ಞಾನ ಇದೆಯಾ ನಿನಗೆ. ಕೊಟ್ಟ ಕೆಲಸವನ್ನು ತೆಗೆದುಕೊಂಡು ಸುಮ್ಮನೆ ಮಾಡುವುದನ್ನು ಬಿಟ್ಟು. ಈ ರೀತಿ ಎದುರು ವಾದಿಸಿದರೆಲೇ. ನಿನ್ನನ್ನು ಎತ್ತೋದಕ್ಕೆ ನಾನು ಕಿಲ್ಲರ್ ಆಗಬೇಕಾಗುತ್ತದೆ

ಕ್ರಾಂತಿವೀರ:– ಕಿಲ್ಲರ್ (ನಕ್ಕು) ಲೆ ನಾಗೇಂದ್ರ ನೀವು ದುಡ್ಡು ಕೊಟ್ಟು ಸುಪಾರಿ ಕೊಟ್ಟ ತಕ್ಷಣ ನೀ ಹೇಳಿದಾಗೆ ಕೇಳುವುದಕ್ಕೆ. ನಾನೇನೋ ನಿಮ್ಮ ಗುಲಾಮನಲ್ಲ

ಮಹೇಂದ್ರ:– ಗುಲಾಮನಲ್ಲ (ನಕ್ಕು) ಲೇ ಕ್ರಾಂತಿವೀರ ಕೊಟ್ಟ ಕೆಲಸವನ್ನು ಮಾಡ್ತಿಯೋ ಇಲ್ಲ. ನಾವೆಲ್ಲರೂ ಸೇರಿ ನಿನ್ನನ್ನು ಎತ್ತಬೇಕು

ಕ್ರಾಂತಿವೀರ:– ಎತ್ತಬೇಕು (ನಕ್ಕು) ಲೆ ಮಹೇಂದ್ರ ನನ್ನನ್ನು ಎತ್ತುವುದಕ್ಕೆ ನಿಮಗು ಆಗಲ್ಲ. ನಿಮ್ಮಪ್ಪಂದರಿಗು ಆಗಲ್ಲ. ನೀವು ಸುಪಾರಿ ಕೊಟ್ಟಿದ್ದು ಯಾರ ಮೇಲೆ ಗೊತ್ತಾ. ನನ್ನ ಸ್ನೇಹಿತ ಮೈಲಾರನ ಮೇಲೆ. ಅದು ಅಲ್ಲದೆ ಮಾಡಬಾರದು ಹೇಸಿ ಕೃತ್ಯಗಳನ್ನು ನೀವು ಮಾಡಿ. ಈ ಹಳ್ಳಿಯ ಬಡ ರೈತರ ಮೇಲೆ ದರ್ಪ ಮಾಡುತ್ತಾ. ನಿಮ್ಮ ಎದುರು ನಿಂತವರನ್ನು ನಮ್ಮಂತ ರೌಡಿಗಳಿಂದ ಅವರನ್ನು ಕೊಲೆ ಮಾಡಿಸುತ್ತಾ. ದುಡ್ಡಿನ ದುರಂಕಾರದಿಂದ ಮೆರೆಯುವ ನಿಮ್ಮಂತ ಸೊಕ್ಕಿನ ಶ್ರೀಮಂತರಿಗೆ ಮಿಕ್ಕಿದ ಮೈಲಾರ ನನ್ನ ಸ್ನೇಹಿತ. ಅವನ ಒಂದು ಕೂದಲು ಕೂಡ ನಿಮಗೆ ಮುಟ್ಟೋದಕ್ಕೆ ಆಗಲ್ಲ. ಮುಟ್ಟೋದಕ್ಕೆ ಹಠ ತೊಟ್ಟು ದಿಟ್ಟರಾಗಿ ಬಂದರೆ. ಅವನ ಬೆಂಗಾವಲಾಗಿ ನಾನು ಇರುತ್ತೇನೆ. ನಿಮ್ಮ ಒಬ್ಬೊಬ್ಬರ ಪ್ರಾಣವು ಉಳಿಯೋದಿಲ್ಲ ಮೈಂಡ್ ಇಟ್. ನೆನಪಿರಲಿ ಬರುತ್ತೇನೆ (ಹೋಗುವಾಗ)

ಮಹೇಂದ್ರ:– ನಿಂತುಕೊಳ್ಳಲೇ ಕ್ರಾಂತಿವೀರ. ನಮ್ಮ ಕೆಲಸಕ್ಕಾಗಿ ನಿನ್ನನ್ನು ಕರೆಸಿದರೆ. ನೀನು ನಮಗೆ ಎದುರುವಾದುಸ್ತೀಯಾ ಬಂಡ ನನ್ನ ಮಗನೇ. ನಿನ್ನನು ಈಗಲೇ ಕೊಚ್ಚಿ ಹಾಕಿಬಿಡುತ್ತೇನೆ (ಮಚ್ಚು ಎತ್ತುವನು)

ಕ್ರಾಂತಿವೀರ:– ಲೇ ಷಂಡ ನನ್ನ ಮಗನೇ ಈ ಕ್ರಾಂತಿವೀರನ ಒಂದು ಕೂದಲು ಕೊಡ ಕಿತ್ತಿಕೊಳ್ಳುವುದಕ್ಕೆ ಆಗುವುದಿಲ್ಲಲೇ ನಿಮಗೆ. ಲೆ ಮಹೇಂದ್ರ ಈ ಕ್ರಾಂತಿವೀರನಿಗೆ ಕೈ ಮುಗಿದರೆ ಕರುಣೆ ತೋರುತ್ತಾನೆ. ಎಗರಾಡಿದರೆ ಪ್ರಾಣ ತಗಿಯುತ್ತಾನೆ. ಕಣ್ಣೀರು ಹಾಕಿದರೆ ಸಹಾಯ ಮಾಡುತ್ತಾನೆ. ಕೆಂಗಣ್ಣಿನಿಂದ ಕೆಕ್ಕರಿಸಿ ನೋಡಿದರೆ. ನಿಮ್ಮ ಕಣ್ಣನ ಕಿತ್ತು ಹಾಕುತ್ತಾನೆ. ಲೆ ಎಂಎಲ್ಎ ಸಾಹೇಬಾ. ಇನ್ನು ಮುಂದೆ ಈ ಕ್ರಾಂತಿವೀರ

ನಿಮ್ಮ ಪಾಲಿಗೆ ಕೆರಳಿದ ಕರಿ ಕಾಳಿಂಗ ಸರ್ಪವಿದಂತೆ. ಬರುತ್ತೇನೆ ದಿಸ್ ಇಸ್ ಮೈ ಚಾಲೆಂಜ್ (ನಕ್ಕು ಹೋಗುವನು)

ರಾಜೇಂದ್ರ:– ಚಾಲೆಂಜ್ (ನಕ್ಕು) ಅದು ಈ ಕಲಿಯುಗದ ರಾವಣ ರಾಜೇಂದ್ರನಿಗೆ ಚಾಲೆಂಜ್ (ನಕ್ಕು) ಲೇ ಕ್ರಾಂತಿವೀರ. ನಾವು ತಿಂದು ಬಿಸಾಕಿದ ಮೂಳೆ ತಿಂದು ಬದುಕುವ ನಾಯಿ ನೀನು. ನಮಗೆ ಎದುರಾಗಿ ಚಾಲೆಂಜ್ ಹಾಕಿದ್ದೀಯಾ ಮಗನೇ. ನಾಗೇಂದ್ರ ಇವನಿಗೆ ಸುಪಾರಿ ಕೊಟ್ಟರೆ ಪ್ರಯೋಜನವಿಲ್ಲ. ಈ ರಣರಂಗಕ್ಕೆ ನಾವು ಇಳಿಯಲೆಬೇಕು

ನಾಗೇಂದ್ರ:– ಸಾಹೇಬ್ರೆ ನಾನೇ ಗಂಡಿದೆ ವೀರನೆಂದು ಕೊಬ್ಬರಿದ ಈ ಕ್ರಾಂತಿವೀರನ ದೇಹವನ್ನು ಮೊದಲು ಕೊಚ್ಚಿ ಹಾಕೋಣ. ಆನಂತರ ಆ ಮೈಲಾರನಿಗೆ ಅಂತ್ಯ ಆಡೋಣ. ನಡಿಯಿರಿ. ಈ ರಣ ರಂಗದ ಯುದ್ಧಕ್ಕೆ ಸಿದ್ದರಾಗಿ. ಆ ಮೈಲಾರ ಕ್ರಾಂತಿವೀರನ್ನನು ಕೈಲಾಸಕ್ಕೆ ಕಳಿಸೋಣ (ನಕ್ಕು) ನಡಿರಿ ಹೋಗೋಣ (ಒಳಗಡೆ ಹೋಗುವರು)

ಪ್ರವೇಶ 12

ರಸ್ತೆ ಪರದೆ

(ನವೀನ ನಯನ ಎದುರು ಬದುರಾಗಿ ಪ್ರವೇಶಿಸಿ)

ನವೀನ:– ನಿಂತುಕೋರ ಹುಡುಗಿ. ನಯನ ನಾವು ಇಬ್ಬರು ಪ್ರೀತಿ ಮಾಡಕತ್ತಿ ಎಷ್ಟೋ ವರಸಾಯಿತು ಇನ್ನು ಯಾವಾಗ ನಮ್ಮ ಮದುವೆ ಅಂತೀನಿ. ಇನ್ನ ನನಗ ನಿನ್ನ ಬಿಟ್ಟಿರೋಕ ಆಗೋದಿಲ್ಲ ಬಾ ಬಾ. ಮುಂದಿನ ಸೋಮವಾರ ನಮ್ಮೂರಾಗ ಶರಣಬಸಪ್ಪ ಅಜ್ಜನ ಜಾತ್ರೆಯಾಗ ಸಾಮೂಹಿಕ ಲಗ್ನ ಇಟ್ಟಾರ. ಅದರಾಗ ನಾವು ಇಬ್ರು ಮದುವೆ ಆಗಿಬಿಡೋಣ

ನಯನ:– (ಸ್ವ) ಇದೇನ್ರೀ ಈ ಹುಡುಗ ಫುಲ್ ರೊಚ್ಚಿಗೆದ್ದ ಬಂದಾನ. ನನ್ನ ಮನಸ್ಸು ನೋಡಿದ್ರ ಆ ಪ್ರವೀಣ್ ಮ್ಯಾಗ ಐತಿ. ಅವನು ಮದುವೆ ಆದರ ನನ್ನ ಜೀವನ ಸುಖವಾಗಿ ಇರತೈತಿ. ಇವನು ಮದುವೆ ಆದ್ರ ಏನಾಯ್ತೀ ಸೂಟ್ ಆಯಿಲ್. ಹರಕ್ ವಯರ್. ಮರುಕ್ ಪಾನ. ಬರೆ ಇದರಾಗ ನನ್ನ ಜೀವನ ಹೊಕ್ಕೈತಿ. ಏನಾರ ಮಾಡಿ ಮೆತ್ತಗ ಮಾತನಾಡಿ ಮಳ್ಳ ಮಾಡಿ. ಇಲ್ಲಿಂದ ಪಾರಾಗಿ ಹೋಗಬೇಕು ನಾನು (ಪ್ರ) ನೋಡು ಹುಡುಗ ಇಂಗ ದಿಡೀರ್ ಅಂತ ಕೇಳಿದರೆ ನಾ ಹೆಂಗ್ ಹೇಳಿ. ನನಗ ಸ್ವಲ್ಪ ದಿವಸ ಟೈಮ್ ಕೊಡು. ನಮ್ಮೂರಿಗೆ ಹೋಗಿ ನಮ್ಮಪ್ಪ ನಮ್ಮವ್ವನ ಒಪ್ಪಿಸಿ ಬರ್ತೀನಿ. ನಾವಿಬ್ರೂ ಜೋರಾಗಿ ಮದುವೆ ಆಗೋಣ ಏನಂತಿ

ನವೀನ:– ಆಯ್ತಾ ಹುಡುಗಿ ನಿ ಅಂದಂಗ ಆಗಲಿ. ಯಾರ ಬ್ಯಾಡ ಅಂತಾರ. ಇಡೀ ಊರಿಗೆ ಅಂದ್ರ ಹಾಕಿ ಫುಲ್ ಜೋರಾಗಿ ಮದುವೆ ಆಗೋನಂತ ನಯನ:– ಆಯ್ತು ಹುಡುಗ ನಾ ಇನ್ನ ಬರಲ್ಯಾ ನವೀನ:– ನಿಂದ್ರ ಹುಡುಗಿ ನನ್ನ ನಿನ್ನ ಮದುವೆ ಆಗೋ ದಿವಸ ಕೂಡೆ ಬಂದೈತಿ ಮತ್ಯಾಕ ತಡ. ಬಾ ಬಡ ಬಡ ಬಜಾರಕ್ ಹೋಗಿ ಮದುವಿಗೆ ನನಗ ನಿನಗ ಬಟ್ಟೆ ತರೋನಂತ. ಈಗ ವಗಿ ಒಂದು ಇದ ಖುಷಿಯಾಗ ಚಿಗರಿ ಡ್ಯಾನ್ಸ್ (ಜೋಡಿ ಪದ ಮುಗಿದ ನಂತರ)

ನವೀನ:– ಹಾಂ ನಯನ ನಿಮ್ಮ ಊರಿಗೆ ಹೋಗಿ ನಿಮ್ಮಪ್ಪ ಅಮ್ಮನ ಮದುವೆಗೆ ಒಪ್ಪಿಸಿ ಬಾ. ಅಷ್ಟರೊಳಗ ಮದವಿಗೆ ನಾ ಎಲ್ಲಾ ಸಿದ್ದತೆ ಮಾಡ್ತೀನಿ. ನಾ ಇನ್ ಬರ್ಲಾ ಟಾಟಾ (ಹೋಗುವನು)

ನಯನ:– ಆಯ್ತು ಹುಡುಗ ಹೋಗಿ ಬಾ. ನಾ ಪಟ್ನ ಹೋಗಿ ಪ್ರವೀಣ ಭೇಟಿಯಾಗಿ. ನನ್ನ ಪ್ರೀತಿ ವಿಷಯ ಹೇಳಿ ಅವನ ಮದುವೆ ಆಗಬೇಕು (ಅಷ್ಟರಲ್ಲಿ ಪ್ರವೀಣ ಹಾಡುತಾ ಪ್ರವೇಶಿಸಿ)

ಪ್ರವೀಣ:– ಏ ನಿಂದ್ರ ಹುಡುಗಿ ನಿನ್ನ ಎಷ್ಟೊಂದು ಹುಡುಕೊಂತ ಬರಬೇಕು ಅಂತೀನಿ

ನಯನ:– ನಾನ್ಯಾಕ ಹುಡ್ಕೊಂತ ಬರಕತ್ತಿಯೋ ಪ್ರವೀಣ

ಪ್ರವೀಣ:– ನೋಡು ಹುಡುಗಿ ಸುತ್ತಿ ಬಳಸಿ ಮಾತಾಡುವುದು ಬ್ಯಾಡ. ನಾನು ನಿನ್ನ ಮದುವೆ ಆಗಬೇಕಂತ ಮಾಡೀನಿ. ಮತ್ತ ನಿನಗ ನನ್ನ ಮದುವೆ ಆಗಾಕ ಮನಸ್ ಐತೆನ ಇಲ್ಲ ನಿನಗ

ನಯನ:– ನನಗೂ ನಿನ್ನ ಮದುವೆ ಆಗಾಕ ಬಾಳ ಮನಸ್ಸಾಯಿತೋ. ಪ್ರವೀಣ ಮತ್ಯಾಕ ತಡ ಅಗುನ ನಡಿ ಮದುವಿನ

ಪ್ರವೀಣ:–ವಾರೆವಾ ನಯನ. ನನ್ನ ಮದುವೆ ಆಗಾಕ ಒಪ್ಕೊಂಡ ಈ ಖುಷಿಯಾಗ. ಈ ನಿನ್ನ ಪ್ರಿಯತಮಗೋಸ್ಕರ ಒಂದು ಹಾಡು. ಹಾಡು ಚಿನ್ನ

ನಯನ:– ಆಯ್ತು ಹುಡುಗ ಬಾ ಹಾಡೋಣ. ಇಬ್ರು ಜೋಡಿ ಮೇಲೆ ಜೋರಾ. (ಜೋಡಿ ಪದ ಮುಗಿದ ನಂತರ)

ಪ್ರವೀಣ:– ನಯನ ನಾಳೆ ನಮ್ಮೂರಾಗ ಶರಣಬಸಪ್ಪ ಅಜ್ಜನ ಜಾತ್ರೆಯಾಗ ಸಾಮೂಹಿಕ ಮದುವೆ ಇಟ್ಟರ. ಅಲ್ಲೇ ಮದುವೆ ಆಗೋನಂತ ಬಾ ಹೋಗೋಣ

ನಯನ:– ಆಯ್ತು ನಡಿ ಹುಡುಗ. ಹನಿ ಅಕ್ಕಿ ಕೂಡಿ ಬಂದ್ರ ಹಡೆದವರು ಬ್ಯಾಡ ಅಂತ. ಬಾ ಇಬ್ರು ಮದುವೆಯಾಗಿ ಬರೋಣ (ಜೊತೆಯಾಗಿ ಹೋಗುವರು.)

(ಅದೇ ಮಾರ್ಗವಾಗಿ ಕ್ರಾಂತಿವೀರ ಮಚ್ಚು ಹಿಡಿದು ಸಿಗರೇಟ್ ಹಚ್ಚುತಾ ಪ್ರವೇಶಿಸಿ)

ಕ್ರಾಂತಿವೀರ:– (ಸಿಟ್ಟಿನಿಂದ) ಸೇಡು ಸೇಡು ಸೇಡು (ನಕ್ಕು) ನನ್ನ ಸೇಡಿನ ಜ್ವಾಲಾಮುಖಿ ಬುಗುಲೆದು ಮುಗಿಲು ಮುಟ್ಟುತ್ತಿರುವಾಗ. ನನ್ನ ತಂಗಿಗೆ ಅನ್ಯಾಯ ಮಾಡಿದ ಆ ಹಾರಾಮ್ ಕೋರ್ ನನ್ನ ಮಗನ ಸುಳಿವೆ ಸಿಗುತ್ತಿಲ್ಲ. ಅವನು ಎಲ್ಲಿ ಅವಿತ್ತುಕೊಂಡು ಕುಳಿತಿದ್ದಾನೋ ಗೊತ್ತಿಲ್ಲ. ಈ ಕ್ರಾಂತಿವೀರನ ಎದೆಯಲ್ಲಿ ಉರಿತಿರುವ ಕ್ರೂದಗ್ನಿಯನ್ನು ನಂದಿಸಿಕೊಳ್ಳಬೇಕಾದರೆ. ಆ ಹರಾಮ್ ಕೋರನ ಅಂಗಾಂಗವನ್ನು ಈ ನನ್ನ ಕತ್ತಿಯಿಂದ ಕತ್ತರಿಸಲೇಬೇಕು (ಸಿಟ್ಟಿನಿಂದ) ಲೇ ಕುತಂತ್ರಿ ನನ್ನ ಮಗನೇ.... ನಿನ್ನ ಬಿಸಿ ರಕ್ತವನ್ನು ಕುಡಿಯಬೇಕೆಂದು ಅಬ್ಬರಿಸಿ ಕಾಯುತ್ತಿದೆ ಈ ಅರ್ಭಟದ ಹುಲಿ ಕಿಲ್ಲರ್ ಕ್ರಾಂತಿವೀರ (ನಗುತ್ತಿರುವಾಗ ಮಾಂತೇಶ ಸಾದಾ ಡ್ರೆಸಿನಲ್ಲಿ ಎರಡು ರಿಪೋರ್ಟ್ ಹಿಡಿದುಕೊಂಡು ಪ್ರವೇಶಿಸಿ. ಮಾಂತೇಶನನ್ನು ನೋಡಿ ತಡಿದು) ಇದೇನು ಮಾಂತೇಶ ಬಲು ವೇಗವಾಗಿ ಹೊರಟಿರುವೆ ಅಲ್ಲ

ಮಾಂತೇಶ:– ನಿನ್ನನೆ ಹುಡುಕ್ಕೊಂಡು ಬಂದಿದ್ದೆ ಕ್ರಾಂತಿವೀರ

ಕ್ರಾಂತಿವೀರ:– ನನ್ನನ್ನು ಹುಡುಕಿಕೊಂಡು ಬಂದಿದ್ದೀಯಾ. ಏನು ವಿಷಯ ಮಾಂತೇಶ

ಮಾಂತೇಶ:– ಅದೇ ಕ್ರಾಂತಿವೀರ ನನ್ನ ಅತ್ತಿಗೆ ಸಾವಿನ ವಿಷಯ

ಕ್ರಾಂತಿವೀರ:– ಮಾಂತೇಶ್ ಏನಾಗಿತ್ತು ನಿನ್ ಅತ್ತಿಗೆಗೆ. ಅವಳ ಸಾವಿಗೆ ಕಾರಣ ಯಾರು ಎಂದು ಗೊತ್ತಾಯಿತಾ

ಮಾಂತೇಶ್:– ಕ್ರಾಂತಿವೀರ ನನ್ನ ಅತ್ತಿಗೆಯನ್ನು ಅತ್ಯಾಚಾರ ಮಾಡಿ ಕೊಲೆ ಮಾಡಿದ್ದಾರೆ

ಕ್ರಾಂತಿವೀರ:– ಮಾಂತೇಶ ಏನು ಹೇಳುತ್ತಾ ಇದ್ದೀಯ ನೀನು

ಮಾಂತೇಶ:– ಹೌದು ಕ್ರಾಂತಿವೀರ ಈ ರಿಪೋರ್ಟ್ ನಲ್ಲಿ. ಈ ಸ್ತ್ರೀಯ ಮೇಲೆ ಲೈಂಗಿಕ ದೌರ್ಜನ ನಡೆದಿದೆ ಎಂದು ಬಂದಿದೆ

ಕ್ರಾಂತಿವೀರ:– ಮಾಂತೇಶ. ಹಾಗಿದ್ದರೆ ಅವನು ಯಾರು ಎಂದು ಗೊತ್ತಾಗಿದೆಯಾ

ಮಾಂತೇಶ:– ಕ್ರಾಂತಿವೀರ ಅವನ್ನು ಬೇರೆ ಯಾರು ಅಲ್ಲ. ಈ ನಮ್ಮ ತಾಲ್ಲೂಕಿನ ಎಂಎಲ್ಎ ರಾಜೇಂದ್ರ

ಕ್ರಾಂತಿವೀರ:– ಮಾಂತೇಶ ನೀನು ಹೇಳು ಮಾತು ಸತ್ಯವೇ

ಮಾಂತೇಶ:– (ಸಿಟ್ಟಿನಿಂದ) ಹೌದು ಕ್ರಾಂತಿವೀರ ನನ್ನ ಅತ್ತಿಗೆಯನ್ನು ಭಲತ್ಕರಿಸಿ ಕೊಲೆ ಮಾಡಿದ್ದಾನೆ ಆ ಕೆಟ್ಟ ಸೂಳಿಯ ಮಗ ಎಂಎಲ್ಎ ರಾಜೇಂದ್ರ

ಕ್ರಾಂತಿವೀರ:– ಮಾಂತೇಶ ಇನ್ನು ಅವನನ್ನು ಸುಮ್ಮನೆ ಬಿಡಬಾರದು. ಅವನ ಬಿಸಿ ರಕ್ತವನ್ನು ಈ ರುದ್ರ ಭೂಮಿಗೆ ಹರಿಸಿ. ಅವನ ಅಂಗಾಂಗವನ್ನು ಕಡೆದು. ಅವನ ರಕ್ತದೋಕಳಿಯನ್ನು ಆಡಲೇಬೇಕು

ಮಾಂತೇಶ:– ಅಷ್ಟೇ ಅಲ್ಲ ಕ್ರಾಂತಿವೀರ. ನಿನ್ನ ತಂಗಿ ಕೀರ್ತಿನೂ ಕೂಡ ಅತ್ಯಾಚಾರವಾಗಿ ಸತ್ತು ಹೋಗಿದ್ದಾಳೆ. ಹೌದು ತಾನೆ

ಕ್ರಾಂತಿವೀರ:– (ಸಿಟ್ಟಿನಿಂದ ಚಿರುವನ್ನು) ಮಾಂತೇಶ ಮತ್ತೆ ಆ ವಿಷಯವನ್ನು ಎತ್ತಿ ನನ್ನ ಕೋಪವನ್ನು ಕೆರಳಿಸಬೇಡ. ನನ್ನ ತಂಗಿಯನ್ನು ಅತ್ಯಾಚಾರ ಮಾಡಿದ ಹರಾಮ್ ಕೋರ ಯಾರೆಂದು ಇನ್ನು ಸುಳುವೆ ಸಿಗುತ್ತಿಲ್ಲ. ಅವನ ರಕ್ತ ಕುಡಿಯಬೇಕೆಂದು ಎಷ್ಟು ವರ್ಷಗಳಿಂದ ಹುಡುಕುತ್ತಿದ್ದೇನೆ ಅವನನ್ನು

ಮಾಂತೇಶ:– ಕ್ರಾಂತಿವೀರ ನಿನ್ನ ತಂಗಿಯನ್ನು ಅತ್ಯಾಚಾರ ಮಾಡಿದ ವ್ಯಕ್ತಿಯ ಡಿನ ಪರೀಕ್ಷೆ ರಿಪೋರ್ಟ್ ಈಗ ನನ್ನ ಕೈಯಲ್ಲಿದೆ. ನಿನ್ನ ತಂಗಿ ಕೊಂದುವನು ಯಾರು ಗೊತ್ತಾ

ಕ್ರಾಂತಿವೀರ:– (ಸಿಟ್ಟಿನಿಂದ ಹಲ್ಲು ಕಡಿಯುತ್ತಾ) ಯಾರೆಂದು ಬೇಗ ಹೇಳು ಮಾಂತೇಶ

ಮಾಂತೇಶ:– ಅವನ್ನು ಬೇರೆ ಯಾರು ಅಲ್ಲ ಕ್ರಾಂತಿವೀರ. ಆ ಎಂಎಲ್ಎ ರಾಜೇಂದ್ರನ ಮನೇಲಿ ಇದ್ದಾನಲ್ಲ ಆ ನಾಗೇಂದ್ರ. ಅವನೇ ನಿನ್ನ ತಂಗಿಯನ್ನು ಭಲತ್ಕರಿಸಿ ಕೊಲೆ ಮಾಡಿದ್ದು

ಕ್ರಾಂತಿವೀರ:– (ಸಿಟ್ಟಿನಿಂದ ಚೀರುವನು) ಲೇ ನಾಗೇಂದ್ರ ನನ್ನ ತಂಗಿಯ ಬಾಳು ಹಾಳು ಮಾಡಿ. ನನ್ನ ಕಣ್ಮುಂದೆನೆ ಮೆರೆತ್ತಿರುವೆಯ ಮಗನೇ. ಇನ್ನು ನೀನು ಬದುಕಬಾರದು. ನಿನ್ನ ಅಂಗಾಂಗವನ್ನು ಕಡಿಯೋದಕ್ಕೆ ಸಿದ್ದನಾಗಿ ಬರುತ್ತಿದ್ದಾನೆ. ಸಹೋದರಿಯ ಸೇಡಿಗಾಗಿ ಕತ್ತೆ ಹಿಡಿದ ಈ ಕಿಲ್ಲರ್ ಕ್ರಾಂತಿವೀರ ಬಾ ಮಾಂತೇಶ ಹೋಗೋಣ

ಮಾಂತೇಶ:– ಕ್ರಾಂತಿವೀರ ನೀನು ಆ ನಾಗೇಂದ್ರನನ್ನು ಹುಡುಕಿಕೊಂಡು ಬಾ. ನಾನು ಮನೆಗೆ ಹೋಗಿ ಈ ವಿಷಯವನ್ನು ಮೈಲಾರ ಅಣ್ಣನಿಗೆ ಹೇಳಿ. ಅವನನ್ನು ಕರೆದುಕೊಂಡು ಆ ಎಂಎಲ್ಎ ಮನೆಗೆ ಬರುತ್ತೇನೆ (ಇಬ್ಬರು ಎದುರು ಬದುರು ದಿಕ್ಕಿನಲ್ಲಿ ಹೋಗುವರು)

ಪ್ರವೇಶ 13

ಮಹೇಶನ ಮನೆ (ಹೊರಗಿನಿಂದ ಪ್ರವೇಶಿಸಿ)

ಮಹೇಶ:– ಮಧು ಮಧು ಬಾರಮ್ಮ ಹೊರಗಡೆ

ಮಂಜುಳಾ:– (ಒಳಗಿಂದ ಪ್ರವೇಶಿಸಿ) ಮಧು ಒಳಗಡೆ ಅಡುಗೆ ಮಾಡುತ್ತಿದ್ದಾಳೆ ಬನ್ನಿ ಯಾರು ನೀವ

ಮಹೇಶ:– ನಾನು ಮಾಂತೇಶನ ಹಿರಿಯ ಅಣ್ಣ ಮಹೇಶ ಅಂತ. ಮಧುನ ಸ್ವಲ್ಪ ಕರಿಯಮ್ಮ

ಮಧು:– (ಪ್ರವೇಶಿಸಿ) ಬನ್ನಿ ಮಾವ ಒಳಗಡೆ ಅಡುಗೆ ಮಾಡುತಿದ್ದೆ. ನೀವು ಕೂಗಿದರಲ್ಲ. ಅದಕ್ಕೆ ಹೊರಗಡೆ ಬಂದೆ

ಮಹೇಶ:– ಮಧು ಯಾರಮ್ಮ ಈ ಇವರು

ಮಧು:– ಮಾವ ಇವಳು ನನ್ನ ಕಾಲೇಜ್ ಫ್ರೆಂಡ್ ಮಂಜುಳಾ ಅಂತ. ಇವಳನು ನಿಮಗೆಲ್ಲರಿಗೂ ಭೇಟಿ ಮಾಡಿಸಬೇಕೆಂದು ನಾನೇ ಕರಿಸಿದ್ದೇನೆ.

ಮಹೇಶ:– ಇವರ ಪರಿಚಯ ನಮಗ್ಯಾಕಮ್ಮಾ

ಮಧು:– ಮಾವ ನನ್ನ ಅಕ್ಕ ದೊಡ್ಡ ಮೈದುನನಿಗೆ ನಾನು ಕನ್ಯೆ ಹುಡುಗಿದ್ದೇನೆ. ಇನ್ನು ಮಾಂತೇಶನಿಗೆ ನೀನು ಕನ್ಯಾ ಹುಡುಕು ಎಂದು ಹೇಳಿದ್ದಳು. ಅದಕ್ಕೆ ಇವಳು ನನ್ನ ಸ್ನೇಹಿತಳು. ತುಂಬಾ ಕಡು ಬಡತನದಲ್ಲಿ ಹುಟ್ಟಿ ಬಂದವಳು. ಇವಳಿಗೆ ಬಂದು ಬಾಂದವರಂತ ಯಾರು ಇಲ್ಲ ಅದಕ್ಕೆ ಇವಳನ್ನು ಇಲ್ಲಿಗೆ ಕರೆಸಿದ್ದೇನೆ ನಿಮಗೆಲ್ಲರಿಗೂ ಒಪ್ಪಿಗೆ ಆದರೆ. ಮಾಂತೇಶ ಅಣ್ಣನ ಜೊತೆ ಇವಳ ಮದುವೆ ಮಾಡಬೇಕೆಂದು ಕರೆಸಿದ್ದೇನೆ

ಮಹೇಶ:– ಮಧು ಮದುವೆಯಾಗಬೇಕಾದರೂ ಅವರು. ಅವರಿಬ್ಬರಿಗೂ ಒಪ್ಪಿಗೆ ಆದರೆ ನಮಗೆ ಯಾವ ಅಭ್ಯಂತರವೂ ಇಲ್ಲ (ಅಷ್ಟರಲ್ಲಿ ಮೈಲಾರ ಪ್ರವೇಶಿಸಿ)

ಮೈಲಾರ:– ಯಾರದಣ್ಣ ಮದುವೆ ವಿಚಾರ

ಮಹೇಶ:– ಮತ್ಯಾರದು ಸೋದರ. ನಿನ್ನ ತಮ್ಮ ಮಾಂತೇಶನ ಮದುವೆ. ನೀನ ಹೆಂಡತಿ ಮಧು ಅವನಿಗೊಂದು ಕನ್ಯಾವನ್ನು ಹುಡುಕಿದ್ದಾಳೆ. ಅದಕ್ಕೆ ನಮ್ಮೆಲ್ಲರ ಒಪ್ಪಿಗೆಯನ್ನು ಕೇಳುತ್ತಿದ್ದಾಳೆ. ಮಾಂತೇಶ ಬಂದ ತಕ್ಷಣ ಈ ವಿಷಯನು ಮಾಂತೇಶನಿಗೆ ಹೇಳಿ. ಅವನನ್ನು ಮದುವೆಯಾಗಲು ಒಪ್ಪಿಸು ನಿಮ್ಮಿಬ್ಬರ ಮದುವೆ ಒಟ್ಟಿನಲ್ಲಿ ಮುಗಿದು ಹೋಗಲಿ

ಮೈಲಾರ:– ಅಣ್ಣ ಮದುವೆ ಆಗೋವರು. ಅವರು. ಅವರಿಗೆ ಇಷ್ಟ ಆಗಬೇಕಲ್ಲ. ಮಾಂತೇಶ ಬರಲಿ. ಈ ವಿಷಯದ ಬಗ್ಗೆ ಅವನಿಗೆ ನಾನು ಹೇಳುತ್ತೇನೆ. ಏನಾಗುತ್ತೆ ನೋಡೋಣ (ಅಷ್ಟರಲ್ಲಿ ಮಾಂತೇಶ ರಿಪೋರ್ಟ್ ಹಿಡಿದುಕೊಂಡು ಪ್ರವೇಶಿಸಿ)

ಮಾಂತೇಶ:– ಅಣ್ಣ ಅಣ್ಣ

ಮಹೇಶ:– ಬಾ ಮಾಂತೇಶ. ಎಷ್ಟೊಂದು ಅವಸರ ಮಾಡಿ ಬರ್ತಾ ಇದೆಯಲ್ಲ

ಮಾಂತೇಶ:– ಅಣ್ಣ ಅದು (ಒಂದು ಕಡೆ ನೋಡಿ) ಇದೇನು ಮಂಜುಳಾ. ನೀನು ನಮ್ಮ ಮನೆಯಲ್ಲಿ

ಮಂಜುಳಾ:– ಮಾಂತೇಶ್ ಇದು ನಿಮ್ಮ ಮನೆನಾ

ಮಧು:– ಹೌದು ಮಂಜುಳಾ. ಇವನು ನನ್ನ ಮೈದುನ ಮಾಂತೇಶ ಅಂತ. ಹೌದು ಇವನಿಗೆ ನಿನಗೆ ಹೇಗೆ ಪರಿಚಯ

ಮಂಜುಳಾ:– ಮಧು ನಾವು ಇಬ್ಬರು ಒಂದೇ ಕಾಲೇಜಿನಲ್ಲಿ ಓದುತ್ತಿದ್ದೆವು. ಅವಾಗಿಂದ ಪರಿಚಯ ಇವರು ನನಗೆ

ಮೈಲಾರ:– ಮಾಂತೇಶ ನೀನು ಮದುವೆಯಾಗಲು ನಿನಗೊಂದು ಕನ್ಯವನ್ನು ಹುಡುಕಿದ್ದಾಳೆ ನಿಮ್ಮ ಅತ್ತಿಗೆ. ಈ ಹುಡುಗಿ ಅಂದ್ರೆ ನಿನಗೆ ಒಪ್ಪಿಗೆನಾ

ಮಾಂತೇಶ:– ಅಣ್ಣ ಮದುವೆ ವಿಚಾರ ಹಾಗಿರಲಿ. ನಿನಗೊಂದು ವಿಷಯ ಹೇಳಬೇಕೆಂದು ವೇಗವಾಗಿ ಹೊರಟು ಬಂದೆ

ಮೈಲಾರ:– ಯಾವ ವಿಷಯ ಮಾಂತೇಶ

ಮಾಂತೇಶ:– ಅದೇ ಅಣ್ಣ ನಮ್ಮ ಅತ್ತಿಗೆಯ ಸಾವಿನ ವಿಷಯ

ಮಹೇಶ:– ಹೌದೇ ಏನಾಗಿತ್ತು ಮಾಂತೇಶ ನಿಮ್ಮ ಅತ್ತಿಗೆಗೆ

ಮಾಂತೇಶ:– ಅಣ್ಣ ನಮ್ಮ ಅತ್ತಿಗೆನ ಅತ್ಯಾಚಾರ ಮಾಡಿ. ಕೊಲೆ ಮಾಡಿ ಸಾಯಿಸಿದಾರೆ ಅಣ್ಣ

ಮೈಲಾರ:– (ಗಾಬರಿಂದ) ಮಾಂತೇಶ ಏನು ಹೇಳುತ್ತಿದ್ದೆ ನೀನು. ಈ ವಿಷಯ ನಿನ್ನಗೆ ಹೇಗೆ ಗೊತ್ತಾಯಿತು

ಮಾಂತೇಶ:– ಹೌದು ಅಣ್ಣ ನಮ್ಮ ಅತ್ತಿಗೆ ಶವಾವನ್ನು ಪೋಸ್ಟ್ ಮಾರ್ಟ ಮಾಡಿಸಿದೇನಲ್ ಆ ರಿಪೋರ್ಟ್ ನಲ್ಲಿ ಲೈಂಗಿಕ ದೌರ್ಜನ್ಯ ನಡೆದಿದೆ ಎಂದು ಬಂದಿದೆ. ಡಿನ ಕೂಡ ಚಕ್ಕಾಗಿದೆ ನಮ್ಮ ಅತ್ತಿಗೆಯನ್ನು ಅತ್ಯಾಚಾರ ಮಾಡಿ ಸಾಯಿಸಿದವನು ಬೇರೆ ಯಾರು ಅಲ್ಲ ಅಣ್ಣ. ಅವನೇ ಆ ಎಂಎಲ್ಎ ರಾಜೇಂದ್ರ

ಮಧು:–ಮಾಂತೇಶ ಅಣ್ಣ ಏನು ಹೇಳ್ತಾ ಇದ್ದೀಯಾ ನೀನು. ನನ್ನ ಅಕ್ಕನನ್ನು ಅತ್ಯಾಚಾರ ಮಾಡಿ ಕೊಲೆ ಮಾಡಿದ್ದಾರೆ

ಮಾಂತೇಶ:– ಹೌದು ಅತ್ತಿಗೆ

ಮೈಲಾರ:– (ಸಿಟಿಂನ್ನಿಂದ) ಮಾಂತೇಶ ನಮ್ಮ ಅತ್ತಿಗೆಯನ್ನು ಅತ್ಯಾಚಾರ ಮಾಡಿ ಸಾಯಿಸಿದನಾ. ಆ ಹಾದರದ ಮಗ ರಾಜೇಂದ್ರ. ಲೇ ಕೆಟ್ಟ ಸೂಳಿಯ ಮಗನೆ ರಾಜೇಂದ್ರ ನಿನ್ನ ಅಂಗಾಗವನ್ನು ತುಂಡು ತುಂಡಾಗಿ ಕಡಿದು ಹಾಕಿ. ನಿನ್ನ ರಕ್ತದಿಂದ ನನ್ನ ಅತ್ತಿಗೆಯ ಆತ್ಮಕ್ಕೆ ಶಾಂತಿ ಕೋರುಲ್ಲಿಲ್. ನನ್ನ ಹೆಸರು ಕಾಲು ಕೆದರಿದ ಕುರಿಗಾರ ಹುಲಿ. ಆ ಗುಡ್ಡದ ಒಡೆಯ ಮೈಲಾರಲಿಂಗನ ವರ ಪುತ್ರ. ಈ ಹುನುಗುಂಡಿ ಹುಡುಗ ಮೈಲಾರನೇ ಅಲ್ಲ (ಒಳಗಡೆ ಹೋಗಿ ಕೊಡ್ಲಿಯನ್ನು ತರವನ್ನು) ಲೇ ರಾಜೇಂದ್ರ ಸತಿ ಸಾವಿತ್ರಿಂತಿರುವ ನನ್ನ ಅತ್ತಿಗೆ ಮೇಲೆ ಕೈ ಹಾಕಿದ ನಿನ್ನ ಕೈಗಳನ್ನು ಕತ್ತರಿಸಿ ಹಾಕಿ. ದೇವಾಲಯದಂತಿರುವ ಈ ನಮ್ಮ ಮನೆತನದ ಮೇಲೆ ಕಣ್ಣು ಹಾಕಿದ ಆ ನಿನ್ನ ಕೆಟ್ಟ ಕಣ್ಣನ್ನು ಕಿತ್ತು ಹಾಕಿ. ಈ ಹಳಿಯ ಬಡ ರೈತರ ಜೀವನದಲ್ಲಿ ಆಟ ಆಡುವ ನಿಮ್ಮಂತ ಸೊಕ್ಕಿನ

ಶ್ರೀಮಂತರ ಮನೆಗೆ ಹಚ್ಚಲೇಬೇಕು ಬೆಂಕಿ. ಲೇ ರಾಜೇಂದ್ರ ನಿನ್ನ ಪಾಲಿಗೆ ಕೆರಳಿದ ಕರಿ ಕಾಳಿಂಗ ಸರ್ಪವಾಗಿ. ಶತ್ರುಗಳ ಸಂಹಾರಕಾಗಿ ಸಿಡಿದ್ದೆದ ಪುಂಡ ಪರಶುರಾಮನಾಗಿ. ನಿನ್ನ ರಕ್ತ ಕುಡಿಯುವ ರಣಧೀರನಾಗಿ. ಈ ಮೈಲಾರ ಬರುತ್ತಿದ್ದಾನೆ. ಸಿದ್ದನಾಗಿರು ಮಗನೆ. ಈ ಮೈಲಾರನ ಕೈಯಲ್ಲಿ ಸಾಯುದ್ದಕ್ಕೆ (ಸಿಟ್ಟಿನಿಂದ ಹೋಗುವನ್ನು)

ಮಹೇಶ:– (ಸಿಟ್ಟಿನಿಂದ) ಮಾಂತೇಶ ಹಾಲು ಜೇನಿನಂತಿರುವ ಈ ನಮ್ಮ ಸಂಸಾರದಲ್ಲಿ. ಕಣ್ಣೀರು ಹೊಳಿಯನೆ ಹರಿಸಿದ. ಆ ರಾಜೇಂದ್ರನ ರಕ್ತದ ಹೊಳೆ ಹರಿಸುವವರೆಗೂ ಬಿಡಬಾರದು. ಮಧು ನೀವಿಬ್ರು ಒಳಗಡೆ ಹೋಗಿರಿ. ಮಾಂತೇಶ ಬಾ ಹೋಗೋಣ ಅವನ ರಕ್ತದ ಹೊಳೆನೆ ಹರಿಸಿ ಬರೋಣ

ಮಾಂತೇಶ:– ನಡಿ ಅಣ್ಣ ಹೋಗೋಣ. ಅವರ ಜೀವನದ ಕೊನೆ ಪುಟವನ್ನು ತಿರುವಿ ಹಾಕಿ. ಈ ನಾಟಕಕ್ಕೆ ನಾಂದಿ ಹಾಡಿ ಬರೋಣ (ಇಬ್ಬರು ಸಿಟ್ಟಿನಿಂದ ಹೋಗುವರು)

ಪ್ರವೇಶ 14

ರಸ್ತೆ ಪರದೆ

(ನಾಗೇಂದ್ರ ನಯನ ಎದುರು ಬದುರಾಗಿ ಪ್ರವೇಶಿಸಿ)

ನಾಗೇಂದ್ರ:– ಹಲೋ ಎಕ್ಸ್ ಕ್ಯೂಸ್ ಮಿ. ಸ್ಟಾಪ್ ಮಿಸ್ ಟೀಚರ್ ಸ್ಟಾಪ್

ನಯನ:– ಯಾಕೆ ಮಿಸ್ಟರ್

ನಾಗೇಂದ್ರ:– ಯಾಕೆ (ನಕ್ಕು) ನೋಡು ಟೀಚರ್ ತಂಪತ್ತಿನಲ್ಲಿ ಬರುವನು ಆ ಚಂದ್ರ. ದೇವಲೋಕದ ಅಧಿಪತಿ ಆ ದೇವೇಂದ್ರ. ಚಂದ ಚಂದ ಹುಡುಗಿಯರ ಶೀಲದ ಅಧಿಪತಿ ಈ ನರ ನಾಗೇಂದ್ರ (ನಕ್ಕು) ಟೀಚರ್ ಬಹುದಿನಗಳಿಂದ ನಿನ್ನ ದೇಹದ ಮೇಲಿರುವ ನನ್ನ ಬಯಕೆ ಈಡೇರಿಸಿಕೊಳ್ಳುವುದಕ್ಕೆ ನಿಲ್ಲಿಸಿದ್ದೇನೆ ನಿನ್ನನ್ನು. ಈಗ ಸುಮ್ಮನೆ ನನ್ನ ಮಾತಿಗೆ ಒಪ್ಪಿ ನಾನು ಹೇಳಿದಾಗೆ ಕೇಳಿ. ನನ್ನ ಕಾಮದ ದಾವನ್ನು ತೀರಿಸಿ ನಾನು ಕೊಟ್ಟಷ್ಟು ಹಣವನ್ನು ತೆಗೆದುಕೊಂಡು ಹೋದರೆ ಸರಿ. ಇಲ್ಲ ನಿನ್ನ ಸಿಂಗಾರ ಎಂಬ ಶೀಲದ ಬುತ್ತಿಯನ್ನು ಹದ್ದಿನಂತೆ ಕುಕ್ಕಿ ಕುಕ್ಕಿ ತಿನ್ನಬೇಕಾಗುತ್ತದೆ ಹೇಳು ಹು ಅಂತೀಯಾ ಇಲ್ಲ ಹೂಹೂ ಅಂತೀಯಾ

ನಯನ:– ಏ ನಾಗೇಂದ್ರ ನಾನ್ಯಾರು ಗೊತ್ತಾ. ನಿನ್ನಂತ ದಡ್ಡ ನನ್ನ ಮಕ್ಕಳಿಗೆ ಹೊಡೆದು ಬುದ್ಧಿ ಕಲಿಸುವ ಶಿಕ್ಷಕಿ ನಾನು. ನನ್ನ ಮೇಲೆ ನಿನ್ನ ಕಾಮದ ಕಣ್ಣು ಹಾಕಿದರೆ. ನನ್ನ ಕಾಲ್ಲಲಿರುವ ಮೆಟ್ಟಿನಿಂದ ನಿನಗೆ ದೃಷ್ಟಿ ತೆಗಿಬೇಕಾಗುತ್ತದೆ. ನೋಡು ನಿನಗೆ ಮರ್ಯಾದೆ ಕೊಟ್ಟು ಹೇಳುತ್ತೇನೆ ಇಲ್ಲಿಂದ ಜಾಗ ಖಾಲಿ ಮಾಡು. ಇಲ್ಲ ಮುಂದೆ ಪರಿಣಾಮ ನೆಟ್ಟಗಿರುವುದಿಲ್ಲ

ನಾಗೇಂದ್ರ:– ದೃಷ್ಟಿ (ನಕ್ಕು) ಲೇ ಟೀಚರ್ ಈ ಕಾಮರಾಜನ ಕಣ್ಣಿಗೆ ನಟ್ಟ ಕನ್ಯಾ ಮನೆಯರಗೆ ಕಾಮದ ಕಾಳಿಂಗನಾಗಿ. ನನ್ನ ಮಾತಿಗೊಪ್ಪದೆ ಎದುರು ಉತ್ತರ ಕೊಡುವ ಚೆಲುವೆರ ಚಲದಂಕ ಚಕ್ರವರ್ತಿಯಾಗಿ. ನಿಮ್ಮಂತ ಸುರ ಸುಂದರಿಯರ ದೇಹದ ಮೇಲೆ ಕಾಮದ ಕಾಳಗ ಮಾಡುವುದಕ್ಕಾಗಿ. ಈ ಕಲಿಯುಗದಲ್ಲಿ ಹುಟ್ಟಿ ಬಂದಿದ್ದಾನೆ ಈ ಕತರ್ನಾಕ್ ಖಿಳನಾಯಕ ನಟ ಭಯಂಕರ ನರ ನಾಗೇಂದ್ರನಾಗಿ (ನಕ್ಕು) ನೋಡಿ ಟೀಚರ್ ಈಗ ನಾನು ಹೇಳಿದಾಗೆ ಕೇಳಿ. ನನಗೆ ಐದು ನಿಮಿಷ ಸುಖ ಕೊಡ್ತೀಯಾ ಇಲ್ಲ. ನಿನ್ನನ್ನು ಹೊತ್ತುಕೊಂಡು ಹೋಗಿ. ನಿನ್ನ ಮೈ ಮೇಲಿದ್ದ ಬಟ್ಟೆಯನ್ನು ಬಿಚ್ಚಿ. ನಿನ್ನನು ಅರಬೆತ್ತಲೆಯಾಗಿ ಮಾಡಿ. ಬಲತ್ಕಾರದಿಂದ ನಿನ್ನ ದೇಹದ ಸುಖ ಪಡಿಬೇಕಾಗುತ್ತದೆ ಬಾರಲೇ ಬಾ (ಕೈ ಹಿಡಿದು ಎಳೆಯುವನು)

ನಯನ:– ಕೈ ಬಿಡೊ ಚಾಂಡಲ್ಲಾ. ಇಲ್ಲ ನಿನ್ನ ರಕ್ತ ಕುಡಿಯದಿಕ್ಕೆ ಚಂಡಿ ಚಾಮುಂಡಿ ಆಗಬೇಕಾಗುತ್ತೆ

ನಾಗೇಂದ್ರ:– ರಕ್ತ (ನಕ್ಕು) ಲೆ ಟೀಚರ್ ರಕ್ತ ಕುಡಿಯುತ್ತೇನೆಂದು ಬಂದ ನಿನ್ನಂತ. ರಮನಿಯರನ್ನು ಹಾಗೆ ಬಿಡುವುದೇ ಬಾರಲೇ ಬಾ ನಿನ್ನನ್ನು ಹೊತ್ತುಕೊಂಡು ಹೋಗಿ ನನ್ನ ಹಠವನ್ನು ತೀರಿಸಿಕೊಳ್ಳುತೇನೆ (ಎಳೆದಾಡುವಾಗ ಕಾಪಾಡಿ ಎಂದು ಕೂಗುಗಳು ಕ್ರಾಂತಿವೀರ ಮಚ್ಚು ಹಿಡಿದು ಪ್ರವೇಶಿಸಿ)

ಕ್ರಾಂತಿವೀರ:– ಲೇ ಕಾಮ ತುಂಬಿದ ಕಚ್ಚೆ ಹರಕ್ಕ ನನ್ನ ಮಗನೇ. ಕೈ ಬಿಡಲೇ ಈ ನಾರಿಯನು

ನಾಗೇಂದ್ರ:– ಲೇ ಕ್ರಾಂತಿವೀರ ಈ ನನ್ನ ಕಾಮದ ಕಾರ್ಯದಲ್ಲಿ ಅಡ್ಡ ಬರಬೇಡ ಮಗನೇ. ಸುಮ್ಮನೇ ಹೊರಟು ಹೋಗಿ ನಿನ್ನ ಪ್ರಾಣ ಉಳಿಸಿಕೋ ಹೋಗಲೇ

ಕ್ರಾಂತಿವೀರ:– ಪ್ರಾಣ (ನಕ್ಕು) ಲೇ ನಾಗೇಂದ್ರ ಪ್ರಾಣಕ್ಕೆ ಹೆದರಿ ಪಕ್ಷಿಯಂತೆ ಹಾರಿ ಹೋಗುವ ಹೇಡಿ ಅಲ್ಲ ಈ ಕ್ರಾಂತಿವೀರ. ನಿಮ್ಮಂತ ಕಾಮದ ಕಚ್ಚೆ ಹರಕ್ಕ ನನ್ನ ಮಕ್ಕಳ ಕತ್ತನ್ನು ಕತ್ತರಿಸುವುದಕ್ಕೆ. ವೀರ ಪುರುಷರ ಅವತಾರ ತಾಳಿ ಹುಟ್ಟಿ ಬಂದಿದ್ದಾನೆ ಈ ಕಲಿಯುಗದ ಕ್ರಾಂತಿವೀರ. ಹಾಂ ಟೀಚರ್ ನೀವಿನ್ನು ಹೋಗಬಹುದು ಈ ಕಚ್ಚೆ ಹರಕ್ಕ ನನ್ನ ಮಗನಿಗೆ ನಾನೊಂದು ಗತ್ತಿಕಾಣಿಸುತ್ತೆನೆ (ಹೋಗುವಳು)

ನಾಗೇಂದ್ರ:– ಕಲಿಯುಗದ ಕ್ರಾಂತಿವೀರ (ನಕ್ಕು) ಲೇ ಕ್ರಾಂತಿವೀರ ನನ್ನ ಈ ಕಾರ್ಯಕ್ಕೆ ಅಡ್ಡ ಬರುವದನ್ನು ಬಿಟ್ಟು. ನಿನಗೆ ಏನು ಬೇಕು ಕೇಳು ಕೊಡುತ್ತೇನೆ ತಗೆದುಕೊಂಡು. ನೀನು ನಿನ್ನೂರಿಗೆ ಹೊರಟು ಹೋಗು

ಕ್ರಾಂತಿವೀರ:– ನಾಗೇಂದ್ರ ನಾನು ಏನು ಕೇಳಿದರೂ ಕೊಡುತ್ತೀಯಾ. ಹಾಗಾದ್ರೆ ಈ ಫೋಟೋವನ್ನು ನೋಡು (ಫೋಟೋ ತೋರಿಸುವನು) ಈ ಫೋಟೋದಲ್ಲಿರೊ ಯುವತಿ ಯಾರೆಂದು ಗೊತ್ತಾ. ಇವಳು ನನಗೆ ಬೇಕು ನಿನ್ನ ಕೈಯಲ್ಲಿ ಕೊಡುವುದಕ್ಕೆ ಆಗುತ್ತಾ

ನಾಗೇಂದ್ರ:– ಅದು ಹೇಗೆ ಸಾಧ್ಯ ಕ್ರಾಂತಿವೀರ ಅವಳ್ಯಾರು ನನಗೆ ಗೊತ್ತಿಲ್ಲ

ಕ್ರಾಂತಿವೀರ:–ಲೆ ನಾಗೇಂದ್ರ ಗೊತ್ತಿಲ್ಲ ಎಂದು ಗತ್ತಿಲೆ ಮಾತನಾಡಿ ಕತ್ತು ಉಳಿಸಿಕೊಂಡು ಹೋಗಬೇಡ. ಸರಿಯಾಗಿ ನೋಡಿ ಹೇಳಲೇ. ಇವಳು ನಿನಗೆ ಗೊತ್ತಿಲ್ವಾ (ಫೋಟೋ ತೋರಿಸುವನು)

ನಾಗೇಂದ್ರ:– ಗೊತ್ತು ಕ್ರಾಂತಿವೀರ ಇವಳ ಹೆಸರು ಕೀರ್ತಿ ಅಂತ. ಇವಳು ಸತ್ತು ಹೋಗಿದ್ದಾಳೆ

ಕ್ರಾಂತಿವೀರ:– ಎ ನಾಗೇಂದ್ರ ಸುಳ್ಳು ಹೇಳಬೇಡ ಅವಳು ಹೇಗೆ ಸತ್ತು ಹೋದಳು

ನಾಗೇಂದ್ರ:– ಅದು ಹೇಗೆ ಎಂದು ನನಗೆ ಗೊತ್ತಿಲ್ಲ ಕ್ರಾಂತಿವೀರ:– ಲೇ ಹಲಕ ನನ್ನ ಮಗನೇ ನಾಗೇಂದ್ರ, ಅವಳನ್ನು ನೀನೆ ಬಲತ್ಕರ ಮಾಡಿ ಸಾಯಿಸಿದ್ಧಿಯ ಮಗನೆ. ಅದು ನಿನಗೆ ಗೊತ್ತಿಲ್ವಾ

ನಾಗೇಂದ್ರ:– ಲೇ ಕ್ರಾಂತಿವೀರ. ಇವಳಂತೆ ನೂರೆಂಟು ಹುಡುಗಿಯರನ್ನು ರೇಪ್ ಮಾಡಿ ಸಾಯಿಸಿದ್ದೇನೆ. ಅದನ್ನು ಕೇಳೋದಕ್ಕೆ ನೀನ್ಯಾರಲೇ ಭಿಕಾರಿ ನನ್ನ ಮಗನೇ

ಕ್ರಾಂತಿವೀರ:– ಲೇ ಕೆಟ್ಟ ಸೂಳೆಯ ಮಗನೇ ನಾಗೇಂದ್ರ, ನೀನು ಬಲಾತ್ಕರ ಮಾಡಿ ಸಾಯಿಸಿದ ಆ ಕೀರ್ತಿ ಅಣ್ಣ. ಕಾರ್ತಿಕ ನಾನೇಲೇ ಷಂಡ ನನ್ನ ಮಗನೇ. ಅವತ್ತು ನನ್ನ ತಂಗಿಯನ್ನು ಸಾಯಿಸಿ ಈ ಕತ್ತಿಯನು ಅಲ್ಲೇ ಬಿಟ್ಟು ಹೋಗಿದ್ದಿಯಲ್ಲ ನೆನಪಿದೆಯಾ ನಿನಗೆ. ನನ್ನ ತಂಗಿಯನ್ನು ಕೊಂದ. ಇದೆ ಕತ್ತಿಯಿಂದ ನಿನ್ನ ಕತ್ತನ ಕತ್ತರಿಸಬೇಕೆಂದು. ಕಾರ್ತಿಕ ಎಂಬ ಹೆಸರನ್ನು ಕಡೆಗಣಿಸಿ. ಸಹೋದರಿಯ ಸೇಡಿಗಾಗಿ ಕತ್ತಿ ಹಿಡಿದ ಕ್ರಾಂತಿವೀರನಾಗಿ. ನಿನ್ನ ಬಿಸಿರಕ್ತ ಕುಡಿಯಲು ಬಂದಿರುವೆನು ನಿನ್ನ ಪಾಲಿನ ಯಮ ಧರ್ಮನಾಗಿ

ನಾಗೇಂದ್ರ:– ಯಮಧರ್ಮನಾಗಿ (ನಕ್ಕು) ಲೇ ಕ್ರಾಂತಿವೀರ ಯಮಧರ್ಮನಾಗಿ ನನ್ನ ಎದುರು ಬಂದವರು ಈ ಧರೆಯಲಿ ದಪನಾಗಿ ಹೋಗಿದ್ದಾರೆ. ಇನ್ನು ನೀನಂದ್ರೆ ಏನಲೇ ಬಚ್ಚ ನನ್ನ ಮಗನೇ ನಿನ್ನನ್ನು ಸುಟ್ಟು ಹಾಕಿಬಿಡುತ್ತೇನೆ (ಪಿಸ್ತೂಲ್ ಗುರಿ ಇಡುವನು)

ಕ್ರಾಂತಿವೀರ:– ಲೇ ನಾಗೇಂದ್ರ ನನ್ನ ತಂಗಿಗೆ ಅನ್ಯಾಯ ಮಾಡಿದ್ದಲ್ಲದೆ. ಮತ್ತೆ ನನಗೆ ಪಿಸ್ತೂಲು ತೋರಿಸ್ತೀಯಾ ಮಗನೇ. ಇನ್ನು ನೀನು ಬದುಕಬಾರದು ಜೈ ಭಜರಂಗಿ (ಎರಡು ಕೈಗಳನ್ನು ಕತ್ತರಿಸುವನು) ಲೇ ನಾಗೇಂದ್ರ ಎಷ್ಟೋ ಹೆಣ್ಣು ಮಕ್ಕಳ ಬಾಳನ್ನು ಹಾಳು ಮಾಡಿ. ಇಲ್ಲಿ ನಾನೇ ರಾಜನೆಂದು. ರಾಜ ರೋಷವಾಗಿ ಮೆರೆಯುತ್ತಿದ್ದೀಯಲ್ಲ ಮಗನೇ. ಇವತ್ತು ನಿನ್ನ ಪ್ರಾಣ ಈ ಕ್ರಾಂತಿವೀರನ ಕೈಯಲ್ಲಿ ಹಾರಿ ಹೋಗಬೇಕು ಸಾಯಿಲೆ ಮಗನೆ (ಕತ್ತು ಕತ್ತರಿಸುವನು ನಾಗೇಂದ್ರ ಅಮ್ಮ ಎಂದು ಬೀಳುವನು) ಲೇ ನಾಗೇಂದ್ರ ಸಹೋದರಿಯ ಸೇಡಿಗಾಗಿ ಈ ಕತ್ತಿ ಹಿಡಿದು ಕ್ರಾಂತಿವೀರನಾಗಿದ್ದ ಈ ನನ್ನ ಸೈಡು ಇವತ್ತು ತೀರಿತು ಮಗನೆ. ಇನ್ನು ನನ್ನ ಮುಂದಿನ ಕಾರ್ಯ. ನನ್ನ

ಸ್ನೇಹಿತ ಮೈಲಾರನ ಅತ್ತಿಗೆಯನ್ನು ಆ ರಾಜೇಂದ್ರ ಬಲತ್ಕರಿಸಿದ್ದಾನಂತೆ. ಅವನ ಹೆಣವನ್ನು ನೀನ ಜಗಕ್ಕೆ ಕಳಿಸಿ ಕೊಡುತ್ತೇನೆ. ಲೇ ರಾಜೇಂದ್ರ ಬರತ್ತಾಯಿದಿನಿ ಮಗನೆ (ಸಿಟ್ಟಿನಿಂದ ಹೋಗುವನು)

ಪ್ರವೇಶ 15

ಮಹೇಶನ ಮನೆ

ಮಹೇಂದ್ರ:– (ರಂಗ ನಿಂಗನೊಂದಿಗೆ ಪ್ರವೇಶಿಸಿ) ಮೈಲಾರ ಲೇ ಮೈಲಾರ

ಮಧು:– (ಪ್ರವೇಶಿಸಿ) ಯಾರು ನೀವು ನಮ್ಮ ಯಜಮಾನರು ಮನೆಯಲ್ಲಿ ಇಲ್ಲ

ಮಹೇಂದ್ರ:– ಯಜಮಾನರು (ನಕ್ಕು) ಏ ಹುಡುಗಿ ನಿಮ್ಮ ಯಜಮಾನರು ಅಂದರೆ ಯಾರು

ಮಧು:– ನೋಡಿ ನಾನು ಮೈಲಾರನ ಹೆಂಡತಿ ಮಧು ಅಂತ. ನಿಮ್ಮ ಹೆಸರು ಏನು ಅಂತ ಹೇಳಿ. ನೀವಿನ್ನು ಹೊರಟು ಹೋಗಿ. ಅವರು ಬಂದ ಮೇಲೆ ಹೇಳಿ ಕಳಿಸ್ತೀವಿ

ಮಹೇಂದ್ರ:– ಹೊರಟ್ಟು ಹೋಗಿ (ನಕ್ಕು) ಹೊರಟು ಹೋಗುವುದಕ್ಕೆ ಬಂದಿಲ್ಲ ಲೇ ಮಧು. ನಿಮ್ಮನ್ನು ಹೊತ್ತುಕೊಂಡು ಹೋಗೋದಿಕ್ಕೆ ಬಂದಿದ್ದೇವೆ

ಮಂಜುಳಾ:– (ಪ್ರವೇಶಿಸಿ) ಏ ಮಿಸ್ಟರ್ ಬಾಯ್ ಬಿಗಿ ಹಿಡಿದು ಮಾತನಾಡು. ಮರ್ಯಾದೆ ಲ್ಲಿಂದ ಹೋದರೆ ಸರಿ. ಇಲ್ಲ ನಮ್ಮ ಯಜಮಾನರಿಗೆ ಫೋನ್ ಹಚ್ಚಿ ಕರೆಸಿದರೆ. ನಿಮ್ಮನ್ನು ಒದ್ದು ಪೊಲೀಸ್ ಸ್ಟೇಷನ್ ಗೆ ಎಳೆದುಕೊಂಡು ಹೋಗುತ್ತಾರೆ

ಮಹೇಂದ್ರ:– ಪೊಲೀಸ್ ಸ್ಟೇಷನ್ (ನಕ್ಕು) ರಂಗಾ ನಿಂಗ ಇವರಿಬ್ಬರನ್ನು ಹೊತ್ತುಕೊಂಡು ನಡೆಯಿರಿ. ಯಾವನೋ ಬಂದು ಬಿಡಿಸಿಕೊಂಡು ಹೋಗುತ್ತಾನೆ ನೋಡೋಣ

ರಂಗ ನಿಂಗ:– ಆಯ್ತು ಮಹೇಂದ್ರಣ್ಣ ಏ ಹುಡುಗಿಯರೆ. ಬನ್ನಿ ನಿಮ್ಮನ್ನು ಎಳೆದುಕೊಂಡು ಹೋಗಿ. ನಮ್ಮ ಎಂಎಲ್ಎ ಸಾಹೇಬರು ಕೈಯಲ್ಲಿ ಕೊಡುತ್ತೇವೆ (ಇಬ್ಬರನ್ನು ಎಳೆದುಕೊಂಡು ಹೋಗುವರು)

ಪ್ರವೇಶ 16

ರಸ್ತೆ ಪರದೆ

(ಪ್ರವೀಣ ನಯನ ಮದುವೆಯಾಗಿ ಆರದೊಂದಿಗೆ ಪ್ರವೇಶಿಸಿ)

ಪ್ರವೀಣ:– ನಯನ ನಮ್ಮ ಮದುವೆ ಅಂತೂ ಮಸ್ತಾಯ್ತು. ಇನ್ನು ನಮ್ಮ ಮನೆ ದೇವರು ಮೈಲಾರ ಗುಡ್ಡಕ್ಕ ಹೋಗಿ ಬಾಸಿಂಗ ಬಿಟ್ಟು ಬಂದ. ಒಂದಿನ ಒಳ್ಳೆ ದಿವಸ ನೋಡಿ ನಮ್ಮ ಫಸ್ಟ್ ನೈಟ್ ಫಿಕ್ಸ್ ಮಾಡೇ ಬಿಡೋಣ

ನಯನ:– ಆಯ್ತು ರೀ ಹಂಗ ಮಾಡೋಣ ನಡ್ರಿ ಯಜಮಾನ್ರ. ಯಾರ ಬೇಡ ಅಂತಾರ. ಮುಂದಿನ ವರ್ಷ ಜಾತ್ರಿಗೆ ಗಂಡ ಮಗನ್ನ ಕರಕೊಂಡು ಬರುವಂಗ ಆಶೀರ್ವಾದ ಮಾಡಪ್ಪ ಅಂತ ಹೇಳಿ ಅಲ್ಲೇ ಬೇಡಿಕೊಂಡು ಬಂದು ಬಿಡೋಣ ನಡ್ರಿ

ಪ್ರವೀಣ:– ಆಯ್ತು ಬಾ ಬಾ ಹುಡುಗಿ ಮತ್ಯಾಕ ತಡ. ಮದುವಿನೂ ಆಗೈತಿ. ಫಸ್ಟ್ ನೈಟ್ ಒಂದ ಬಾಕಿ ಐತಿ ಗುಡ್ಡುಕ ಹೋಗಿ ಬರುತ್ತನ ತಡಕೊಳ್ಳುವಂಗ. ಒಂದೆರಡು ಮುತ್ತು ಕೊಟ್ಟು ಒಂದು ಸಾಂಗ್ ಹಾಡಿಬಿಡ ನನ್ನ ಬಂಗಾರಿ

ನಯನ:– ಅಯ್ತಿ ಬರ್ರಿ ಯಜಮಾನ್ರೆ. ನೀವು ಅಂದಂಗ ಆಗಲಿ. ಬರ್ರಿ ಇಬ್ಬರು ಕೂಡಿ ಹಾಡಿ ನಲಿಯೋಣ (ಜೋಡಿಪದ ಮುಗಿದ ನಂತರ)

ನವೀನ:– (ಪ್ರವೇಶಿಸಿ ನಯನ ಕೊರಳಿಲ್ಲಿರುವ ಹಾರ ನೋಡಿ ಗಾಬರಿಯಿಂದ) ಇದೇನು ನಯನ ನಿಮ್ಮ ಸಾಲ್ಯಾಗ ಏನರ ಫಂಕ್ಷನ್ ಇತ್ತನು ಇವತ್ತ. ಯಾಕಂದ್ರ ನಿನ್ನ ಕೊರೊಳಗೆ ಹಾರೈತಲ್ಲ ಅದಕ್ಕ ಕೇಳಿದ್ಯಾ. ಮತ್ತ ಈ ಪ್ರವೀಣ್ ಕೊರಳಾಗುವ ಹಾರೈತಲ್ಲ. ಯಾಕ್ಲೇ ತಮ್ಮ ಸನ್ಯಾಸಿ ಆಗಿ ಮಠ ಸೇರಕ ಹೊಂಟಿ ಏನ ಸುದ್ದಿ

ಪ್ರವೀಣ:– ಲೇ ಮಳ್ಳ ನವೀನ. ನಂದು ಇಕ್ಕಿದು ಮದುವೆ ಆಗೈತ್ಲೆ ತಮ್ಮ. ಅದಕ್ಕ ನಮ್ಮಿಬ್ರು ಕೊರಳಗ ಹಾರ ಐತಿ

ನವೀನ:– ಏನ ಹೇಳ ಕತ್ತಿ ಲೇ ಪ್ರವೀಣ. ನಯನ ಈ ಪ್ರವೀಣ ಏನ್ ಸುಳ ಸೂಳರ ಹೇಳಾಕತ್ತಿನಲ್ಲ

ನಯನ:– ಸುಳ್ಳುರ ಆವಾ ಯಾಕೆ ಹೇಳತ್ತನ ನಮ್ಮಿಬ್ಬರದು ಮದುವೆ ಆಗೈತೆ

ನವೀನ:– ಇದೇನಲೇ ನಯನ. ಊರಿಗೆ ಹೋಗಿ ನಮ್ಮಪ್ಪ ನಮ್ಮವ್ವನ್ನು ಮದುವಿಗೆ ಒಪ್ಪಿಸಿ ಬರ್ತೀನಿ. ಬಂದ ನಿನ್ನ ಮದುವೆಯಾಗತಿನಿ ಅಂತ ಹೇಳಿ. ಹೋಗಿ ಹೋಗಿ ಈ ಮುಸ್ರಿ ತಿಕ್ಕವನ ಮದುವಿ ಆಗಿ ಅಲ್ಲಲೇ ಹುಡುಗಿ

ನಯನ:– ಏ ನವೀನ ಇನ್ ಮ್ಯಾಲೆ ನನಗ ಏಕ್ ವಚನದಲ್ಲಿ ಮಾತಾಡ್ಬೇಡ. ನಂದು ಮದುವೆ ಆಗೈತಿ. ಇನ್ ಮೇಲೆ ನಾ ನಿಮ್ಮ ತಂಗಿ ಅಂತ ತಿಳ್ಕೊಂಡು ಬಿಡು ಅಣ್ಣ

ನವೀನ:– (ದುಃಖದಿಂದ) ಅಲ್ಲೇ ನಯನ ಮಾಡುತ್ತಾನ ಮಾಡಿ ನಂದೆಲ್ಲಾ ಅಳಗಾಲು ಮಾಡಿ. ಈಗ ಬ್ಯಾರೆದುನ ಮದುವೆಯಾಗಿ. ನನಗ ಅಣ್ಣ ಅಂತ ಕರೀತಿಯ ಹುಡುಗಿ. ನಿಮ್ಮಂಥ ಹುಡುಗ್ಯಾರನ ನೋಡಿ ಜನಪದ ಗಾಯಕರ ಬಂಡ ಬಂಡ ಜಾನಪದ ಬರದ ಹಾಡತ್ತಾರ. ಮಾಡುತ್ತನ ಮಾಡಿ ನನಗ ಅಣ್ಣ ಅಂದಿಲೇ ಹುಡುಗಿ

ಪ್ರವೀಣ:– ಎದಕ್ಕ ಅಳತಿ ಗಪ್ಪ ಆಗಲೇ ನವೀನ. ನಾವಿಬ್ರೂ ಕೂಡಿ ಒಂದು ವರ್ಷದಾಗ. ನಿನಗೊಂದು ಹೆಣ್ಣ ಹಡದ ಕೊಡ್ತೀವಿ ಅವಾಗ ನೀನು ಮದುವೆಯಾಗಿ ಆಗಿಕೆಂತ ಚಿಂತಿ ಯಾಕ ಮಾಡ್ತಿ

ನವೀನ:– ಲೇ ಬದ್ಮಾಶ್ ನನ್ನ ಮಗನ ಪ್ರವೀಣ. ಮಾಡುತ್ತನ ಮಾಡಿ ಮತ್ತ ನನ್ನ ಹೊಟ್ಟಿ ಉರುಸ್ತೀಲೇ ಮಗನ. ಹತ್ತು ಲಕ್ಷ ದಂಡ ಕಟ್ಟಿದ್ರು ಚಿಂತಿಲ್ಲ. ಹೆಂಗಾರ ಮಾಡಿ ಈಕಿ ಹೊರಗ ಸಿಕ್ಕಾಗ ಇಕಿನ ಹೊತ್ತುಕೊಂಡು ಹೋಗಿಬಿಡತ್ತಿನಿ

ಪ್ರವೀಣ:– ನಾ ಎದುಕು ಆಕಿನ ಮನಿ ಹೊರಗ ಕಳಿಸುವುದಿಲ್ಲ ಲೇ ಮಗನ. ಒಳಗ ಇಡತ್ತಿನಿ ಇಕಿನ

ನವೀನ:– ಎದುಕರ ಕಳಿಸಲಿಕ ಅಷ್ಟ ಹೋತು ಮಗನ. ಒಂದಕ್ಕ ಎರಡಕ್ಕರ ಕಳಸಬೇಕಲ್ಲ. ಆಗ ಒಂದು ಕೈ ನೋಡ್ಕೋತೀನಿ

ಪ್ರವೀಣ:– ಲೆ ನವೀನ ಅಕಿನ. ನಾ ಹೊರಗಡೆ ಕಳಿಸುವುದಿಲ್ಲ. ಆಕ್ಕಿ ಸಂಬಂಧ ಮನೆಯಾಗ ಒಂದು ಸುಲಭ ಶೌಚಾಲಯ ಕಷ್ಟತ್ತೀನಿ

ನಯನ:– ಎ ಸಾಕ್ಕ ಗಪ್ಪಾಗರೋ ನಿಮ್ಮೌರ. ಯಜಮಾನ್ರೇ. ರೀ ಯಜ್ಮಾನ್ರೆ ನಾವು ಹೋಗೋಣ ನಡ್ರಿ

ಪ್ರವೀಣ:– ಹೋಗೋಣ ನಡಿ ಹುಡುಗಿ (ಇಬ್ಬರು ಹೋಗುವರು)

ನವೀನ:– ಹೋಗು ಹುಡ್ಗಿ ಹೋಗು ಪ್ರೀತಿ ಮಾಡುತ್ತಾನ ಮಾಡಿ. ಬೇಕಾದ ಮಾವ ಅಂದ ಬ್ಯಾಡದಾಗ ಯಾವ. ಆದಂಗ ಮಾಡಿ ಹೊಂಟಿಯಲ್ಲ ಹೋಗ ಹೋಗು. ನೀ ಹೋದ್ರ ನಮಗೆ ಕಡಿಮಿ ಲವ್ ಮಾಡಕ್ಕಾರಗಡ ಹುಡುಗಿಯರ ಅದರ. ನಿನ್ನ ಮುಂದ ಚಂದನ ಹುಡುಗಿ ಮದುವೆಯಾಗಿ ನಿನ್ನ ಹೊಟ್ಟಿ ಉರಿಯುವಂಗ ಬಾಳೆ ಮಾಡಿ ತೋರಿಸ್ತೀನಿ (ಹಾಡುತ್ತಾ ಹೋಗುವನು)

ಪ್ರವೇಶ 17

ರಾಜೇಂದ್ರನ ಮಹಡಿ ಮನೆ

(ರಾಜೇಂದ್ರ ಮಹಡಿ ಮೇಲೆ ಕುಳಿತಿರಬೇಕು. ಮಹೇಂದ್ರ ಮಧುನ ಮಂಜುಳಾನ ಎಳೆದುಕೊಂಡು ಪ್ರವೇಶಿಸಿ)

ಮಹೇಂದ್ರ:– ಸಾಹೇಬ್ರೆ ಸಾಹೇಬ್ರೆ

ರಾಜೇಂದ್ರ:–(ಕೆಳಗಿಳಿದು) ಯಾಕೆ ಮಹೇಂದ್ರ ಬಲು ವೇಗವಾಗಿ ಎರಡು ರಂಬೆಯಾರನು ಎಳೆದುಕೊಂಡು ಬಂದಿಯಲ್ಲ ಯಾರು ಇವರು

ಮಹೇಂದ್ರ:– ಸಾಹೇಬ್ರೆ ಇವರು ಇಬ್ಬರು ಆ ಮೈಲಾರ ಮಾಂತೇಶರ ಹೆಂಡತಿಯರು. ಆ ಮೈಲಾರನನ್ನು ಹುಡಿಕಿಕೊಂಡು ಅವರ ಮನೆಗೆ ಹೋಗಿದ್ದೆ ಅಲ್ಲಿ ಇವರ ಇಬ್ಬರೇ ಇದ್ದರು. ಅದಕ್ಕೆ ಇವರನ್ನು ಎಳೆದುಕೊಂಡು ಬಂದಿದ್ದೇನೆ. ಆ ಮೈಲಾರ ಇಲ್ಲಿಗೆ ಬರುವಕಿಂತ ಮುಂಚೆ. ಇವರ ಶೀಲಾದ ಜೊತೆ ಚಾಲಟ್ಟವಡಿ. ನಮ್ಮ ಸೇಡನು ತೀರಿಸಿಕೊಳೋಣ ಬನ್ನಿ

ರಾಜೇಂದ್ರ:– ಶಭಾಷ್ ಮಹೇಂದ್ರ ಶಭಾಷ್. ಒಳ್ಳೆ ಕೆಲಸವನೆ ಮಾಡಿದೀಯ. ನಮ್ಮ ನೆಮ್ಮದಿಯನ್ನು ಕೆಡಸಿ ತಾನ್ನು ಮದುವೆ ಮಾಡಿಕೊಂಡು ನೆಮ್ಮದಿಯಾಗಿ ಇರಬೇಕೆಂದು ಬೈಯಸಿದನ ಆ ಮಗ ಮೈಲಾರ. ಅದು ಸಾಧ್ಯವಾಗ ಮಾತ್ತು. ಲೇ ಮೈಲಾರ ನಮ್ಮನ್ನು ಕೆಣಕಿದವರು ಯಾರು ನೆಮ್ಮದಿಯಾಗಿ ಇರಬಾರದು ಇನ್ನು ಮುಂದೆ. ಬರ್ರೆಲೆ ಬಣ್ಣದ ಹಕ್ಕಿಗಳೇ. ಅಂದ ಚಂದದಿಂದ ತುಂಬಿದ ನಿಮ್ಮ ದೇಹವನ್ನು ದಂಡಿಸಿ ನಮ್ಮ ಕಾಮದ ದಾಹವನ್ನು ತೀರಿಸಿಕೊಳ್ಳುತೇವೆ ಬರ್ರೆಲೆ ಬರ್ರಿ (ಮಧುನ ಕೈ ಹಿಡಿದು ಎಳೆಯುವನ್ನು)

ಮಧು:– ಲೋ ಕೈ ಬಿಡೋ ಕಾಮ ತುಂಬಿದ ನಾಯಿ ರಾಜೇಂದ್ರ. ನನ್ನ ಅಕ್ಕನ ಮೈ ಮುಟ್ಟಿದ ವಿಷಯ ನನ್ನ ಗಂಡ ಮೈಲಾರನಿಗೆ ಗೊತ್ತಾಗಿದೆ. ನಿನ್ನ ಬಿಸಿ ರಕ್ತವನ್ನು ಕುಡಿಯುದ್ದಕ್ಕೆ ನನ್ನ ಗಂಡ ರೊಚ್ಚಿಗೆದು ಬರುತ್ತಿದ್ದಾನೆ. ಹಸಿದ ಹೆಬ್ಬುಲಿಯಾಗಿ

ಮಹೇಂದ್ರ:– ಹಸಿದ ಹೆಬ್ಬುಲಿ (ನಕ್ಕು) ಲೇ ಮಧು ಮದವೇರಿದ ಮದ್ದಾನಿಯ ಮದ ಇಳಿಸುವ ಈ ಮಗದಿರ ಮಹೇಂದ್ರನ ಮುಂದೆ. ಅವನ್ಯಾವನಲೇ ಹಸಿದ ಹೆಬ್ಬುಲಿ. ಲೇ ಹೆಣೆ ನಾನೇ ಹೆಬ್ಬುಲಿ ಎಂದು ಕೋಬೇರಿ. ಫರ್ಜಿಸಲು ಆ ನಿನ್ನ ಗಂಡ ಮೈಲಾರ ಮತ್ತು ನಿನ್ನ ಮೈದುನ ಮಾಂತೇಶ ಬಂದರೆ. ಅವರು ಇಬ್ಬರ ರುಂಡವನ್ನು ಕಡಿದು ಹಾಕಿ. ಅವರ ರಕ್ತವನ್ನು ಈ ಎಂಎಲ್ಎ ಸಾಹೇಬರ ಪಾದಕ್ಕೆ ಅರ್ಪಣೆ ಮಾಡುತ್ತಾನೆ. ಈ ಮಗಧೀರ ಮಹೇಂದ್ರ

ಮಂಜುಳಾ:– ಲೋ ಮಹೇಂದ್ರ, ಆ ನನ್ನ ಮಾವ ಮೈಲಾರನ ರಕ್ತವನ್ನು ಈನಿಮ್ಮ ಸಾಹೇಬರ ಪಾದಕ್ಕೆ ಅರ್ಪಣೆ ಮಾಡುತ್ತೀಯಾ. ಅದು ನಿಮ್ಮಪ್ಪನಿಂದ ಸಾಧ್ಯವಿಲ್ಲ ಮಗನೇ. ಇನ್ನು ಸ್ವಲ್ಪ ಹೊತ್ತಿನಲ್ಲಿ ನಿಮ್ಮ ಪ್ರಾಣ ಹಾರಿ ಹೋಗುತ್ತದೆ. ಸಾಯೋದಕ್ಕೆ ಸಿದ್ದನಾಗಿರಲ್ಲೋ ಲಪಂಗರ. ನಿಮ್ಮ ರುಂಡವನ್ನು ಕಡಿಯುವುದಕ್ಕೆ ಬಂದೇ ಬರುತ್ತಾನೆ. ನನ್ನ ಮಾವ ಮೈಲಾರ

ರಾಜೇಂದ್ರ:– ರುಂಡ ಕಡಿಯುವುದಕ್ಕೆ (ನಕ್ಕು) ಎ ಹುಡುಗಿ ನಿನ್ನ ಮಾವ ಮೈಲಾರ ರುದ್ರ ಅವತಾರ ಎತ್ತಿ ನಮ್ಮ ರುಂಡ ಕಡಿಯುವರೆಗೂ ನಾವೇನು ಚಕ್ಕ ಆಡ್ತೀವಿ ಅಂತ ತಿಳ್ಕೊಂಡು ಏನಲೇ ಚೀನಾಲಿ. ಅವನು

ಬರೋಕಿಂತ ಮುಂಚೆ. ನಿಮ್ಮ ಶೀಲದ ಜೊತೆ ಚೆಲ್ಲಾಟ. ಅವನು ಬಂದ ಮೇಲೆ ಈ ರುದ್ರ ಭೂಮಿಯಲ್ಲಿ ಉರುಳಿ ಹೋಗುವುದು ಅವನ ಗಟ. ಬಾ ಮಹೇಂದ್ರ ತೀರಿಸಿಕೊಳ್ಳೋಣ ನಮ್ಮಿಬ್ಬರ ಹಠ

(ನಕ್ಕು ಇಬ್ಬರು ಇಬ್ಬರನ್ನು ಕೈ ಹಿಡಿದು ಎಳೆದಾಡುವಾಗ. ಕ್ರಾಂತಿವೀರ ಮಚ್ಚು ಹಿಡಿದು ಪ್ರವೇಶಿಸಿ)

ಕ್ರಾಂತಿವೀರ:– ಲೆ ರಾಜೇಂದ್ರ ಮಹೇಂದ್ರ ಕೈ ಬಿಡ್ರಲೇ ಈ ಸ್ತ್ರೀಯರನ್ನು

ರಾಜೇಂದ್ರ:– ಲೇ ಕ್ರಾಂತಿವೀರ ನಿನಗೆ ಸಂಬಂಧವಿಲ್ಲದ ವಿಷಯಕ್ಕೆ ತಲೆಹಾಕಿ. ಇವರನ್ನು ಕಾಪಾಡೋದಕ್ಕೆ ನೀನ್ಯಾರಲೇ

ಕ್ರಾಂತಿವೀರ:– ಲೇ ರಾಜೇಂದ್ರ ಕಷ್ಟದಲ್ಲಿ ಇದ್ದವರ ಮೇಲೆ ಕರುಣೆ ತೋರುವವನು ಆ ಕರ್ನಾ. ಅಣ್ಣನ ಹೆಂಡತಿ ಮಾನಕ್ಕಾಗಿ ಪ್ರಾಣ ಒತ್ತೆ ಇಟ್ಟು ಹೋರಾಡಿದವನು ಆ ರಾಮಾಯಣದ ಲಕ್ಷ್ಮಣ. ಈ ಕಲಿಯುಗದಲ್ಲಿ ಕ್ರಾಂತಿವೀರನಾಗಿ ಹುಟ್ಟಿ ಆಪತ್ತಿನಲ್ಲಿರುವ ಹೆಣ್ಣಿನ ಮಾನ ರಕ್ಷಣೆಗಾಗಿ ಬಂದಿರುವನು ಇವರ ಅಣ್ಣ. ಈ ಕ್ರಾಂತಿವೀರ

ಮಹೇಂದ್ರ:– ಅಣ್ಣ (ನಕ್ಕು) ಲೇ ಅಣ್ಣನೆಂದು ಅಕ್ಕರೆಂದ ಮಾತನಾಡಿ. ಈ ಎರಡು ಹೆಕ್ಕೆನು ನೀನು ಹಾರಿಸಿಕೊಂಡು ಹೋಗಬೇಕೆಂದಿರುವೆಯಾ ಮಗನೇ. ಅದು ಎಂದಿಗೂ ಸಾಧ್ಯವಿಲ್ಲ. ನೀನು ಅವರ ಅಣ್ಣನಾದರೇನು ತಮ್ಮನಾದರೇನು ನಿನ್ನನ್ನು ಈ ಅರಮನೆ ಕಂಬಕ್ಕೆ ಕಟ್ಟಿ ಹಾಕಿ. ನಿನ್ನ ಕಣ್ಣ ಮುಂದೇನೆ ಇವರ ಸೀರೆಯನ್ನು ಬಿಚ್ಚುತ್ತೇವೆ ನೋಡ್ತೀಯಾನಲೆ

ರಾಜೇಂದ್ರ:– ಲೇ ಕ್ರಾಂತಿವೀರ ಈ ನಮ್ಮ ಶುಭ ಕಾರ್ಯಕ್ಕೆ. ಆಶುಭ ವೆಸಗಲು ಬಂದ ನಿನ್ನನ್ನು ಸುಮ್ಮನೆ ಬಿಡುತ್ತೇವೆ ಎಂದು ತಿಳಿದುಕೊಳ್ಳಬೇಡ. ರಂಗ ನಿಂಗ ಹಿಡಿದುಕೊಳ್ಳೋರಲ್ಲೇ ಇವನನ್ನು. ಆ ಕಂಬಕ್ಕೆ ಕಟ್ಟಿ ಹಾಕಿರಿ

ರಂಗ–ನಿಂಗ:– ಆಯ್ತು ಸಾಹೇಬರೇ (ಹಿಡಿದುಕೊಳ್ಳಲು ಮುಂದೆ ಬರುವಾಗ)

ಕ್ರಾಂತಿವೀರ:– ಲೆ ರಂಗ ನಿಂಗ ನಿಮ್ಮನ್ನು ಸಾಯಿಸಿ ಬಿಡುತ್ತೇನೆ ಮಕ್ಕಳೆ. ಲೆ ರಾಜೇಂದ್ರ ದೀಪಾ ಆರುವಾಗ ಬಲು ಜೋರಾಗಿ ಉರಿದಂತೆ. ಹಕ್ಕಿಯ ಹಣೆ ಬರ ಮುಗಿದು ಬಂದಾಗ. ಗಗನಕ್ಕೆ ಹಾರಿ ಹೋದಂತೆ. ಇವತ್ತು ನಿಮ್ಮೆಲ್ಲರ ಹಣೆಬರ ಮುಗಿದು ಬಂದಿದೆ. ಈ ಕ್ರಾಂತಿವೀರನ ಕೈಯಲ್ಲಿ ನಿನ್ನ ಪ್ರಾಣ ಗಗನ ಯಾತ್ರೆ ಬೈ ಭಜರಂಗಿ (ರಾಜೇಂದ್ರನ ಮೇಲೆ ಮಚ್ಚು ಎತ್ತುವನು. ಅಷ್ಟರಲ್ಲಿ ಮೈಲಾರ ಕೊಡ್ಲಿ ಹಿಡಿದು ಧಾವಿಸಿ ಬರುವನು)

ಮೈಲಾರ:– ನಿಲ್ಲು ಕ್ರಾಂತಿವೀರ. ಕಂಡ ಕಂಡವರ ಹೊಲದಲ್ಲಿ ಸಿಕ್ಕಂತೆ ಮೈದು. ಕೊಬೆರಿದ ಈ ಬೇಟೆ ಈ ಮೈಲಾರನದು. ಈ ಬೇಟೆಯನ್ನು ಬಡಿದು ತಿನ್ನುವ ಬಹದ್ದೂರ. ಬಂದಾಯಿತು ಇಲ್ಲಿಗೆ

ಮಹೇಂದ್ರ:– ಬೇಟೆ (ನಕ್ಕು) ಲೇ ಮೈಲಾರ ಬೇಟೆ ಆಡೊ ನಿನ್ನಂತ ಬಕಾಸುರರನ್ನು ಬಡೆದು ಬಗ್ಗಿಸುವ ಬಹದ್ದೂರ ನಾನಾಗಿರುವಾಗ ನೀನ್ಯಾವ ಸೀಮೆ ಬೇಟೆಗಾರಲೇ. ನಿನ್ನನ್ನು ನಾವೇ ಹುಡುಕುತ್ತಿದ್ದೆವು. ನೀನಾಗಿ ಬಂದು ಸಿಕ್ಕಾಕಿಕೊಂಡೆ. ಇನ್ನು ನಿನಗೆ ಉಳಿಗಾಲವಿಲ್ಲ

ಮೈಲಾರ:– ಹೋಳಿಗಾಲವಿಲ್ಲ (ನಕ್ಕು) ಲೆ ಮಹೇಂದ್ರ. ಉಳಿಗಾಲವಿಲ್ಲವೆಂದು ಹುಂಬನಂತೆ ವರ್ತಿಸಬೇಡಲೇ ಹುಮ್ಮ ನನ ಮಗನೇ. ಹುಲಿ ಬೇಟೆನ ಹುಡುಕಿಕೊಂಡು ಹೋದ್ರು, ಬೇಟೆನೆ ಹುಲಿ ಹುಡ್ಕೊಂಡು ಹೋದ್ರು, ಎದೆ ಬಗೆದು ರಕ್ತ ಕುಡಿಯೋದು ಹುಲಿನಲೇ ದಡ್ಡ ನನ್ನ ಮಗನೇ

ರಾಜೇಂದ್ರ:– ಹುಲಿ (ನಕ್ಕು) ಹುಲಿ ಹುಲಿ ಎಂದು ಹೊಯ್ಕೋಬೇಡಲೇ ಹುಚ್ಚ ನನ್ನ ಮಗನೇ. ನಿನ್ನಂತ ಹುಲಿಯನ್ನು ಬದುಕಲು ಬಿಟ್ಟರೆ ತಾನೆ. ಈಗಲೇ ನಿನ್ನನ್ನು ಸುಟ್ಟು ಹಾಕಿಬಿಡುತ್ತೇನೆ (ಬಂದೂಕು ಗುರಿ ಇಡುವನು)

ಮೈಲಾರ:– ಲೇ ರಾಜೇಂದ್ರ ನಿನ್ನ ಪ್ರಾಣ ತಗೆಯುವುದಕ್ಕೆ ಶಿವಲೋಕದಿಂದ ಸಿಡಿದು ಬಂದ ಸಿಂಹದ ಮರಿಯಾಗಿ. ನನ್ನ ಮನೆತನದ ಮೇಲೆ ನೀನು ಮಾಡಿದ ದೌರ್ಜನ್ಯಕ್ಕೆ ಕೆಂಗೆಟ್ಟ ಕಾಳಿಂಗ ಸರ್ಪವಾಗಿ. ಸತಿ ಸಾವಿತ್ರಿ ಅಷ್ಟು ಪವಿತ್ರವಾದ ನನ್ನ ಅತ್ತಿಗೆ ಮೇಲೆ ಕೈ ಹಾಕಿದ ನಿನ್ನ ಸಿರವನು ಕಡಿಯುವುದಕ್ಕೆ. ಸಿಡಿದೆದ್ದ ಶಿವರುದ್ರನಾಗಿ. ನಿಮ್ಮಂತ ದುಷ್ಟ ಶ್ರೀಮಂತರ ದರ್ಪವನ್ನು ಧ್ವಂಶ ಮಾಡುವ ದಾಂಡಿಗನಾಗಿ. ಅಂದು ಮಲ್ಲ ಮನಿಕರ ಸಂಹಾರಕ್ಕಾಗಿ. ಆ ಕೈಲಾಸದಿಂದ ಈ ಧರೆಗೆ ಇಳಿದು ಬಂದ ಮೈಲಾರಲಿಂಗನ ಮಗನಾಗಿ. ಇಂದು ಈ ರಾಜೇಂದ್ರ ಮಹೇಂದ್ರನಂತ ಕೆಟ್ಟ ಕ್ರೂರ ಕಾಮುಕರ ಸಂಹಾರಕ್ಕಾಗಿ. ಮಹೇಶನ ತಮ್ಮನಾಗಿ. ಮಾಂತೇಶನ ಅಣ್ಣನಾಗಿ. ಈ ಜಗ ಮೆಚ್ಚಿದ ಮಗ ಮೈಲಾರನಾಗಿ. ಅರ್ಥಾತ ನಿನ್ನ ಪಾಲಿನ ಯಮನಾಗಿ. ನಿಮ್ಮಿಬ್ಬರ ರುಂಡ ಕಡಿಯುದಕ್ಕೆ ಸಿದ್ದನಾಗಿ. ಬಂದಿದ್ದಾನೆ ಈ ಮೈಲಾರ. ಇನ್ನು ಆಗಲೇಬೇಕು ನಿಮ್ಮ ಸಂಹಾರ ನಿನ್ನ ಕಥೆ ಮುಗಿತಲೇ ರಾಜೇಂದ್ರ

(ಮಹೇಶ ಮಾಂತೇಶ ಇಬ್ಬರು ಧಾವಿಸಿ ಪ್ರವೇಶಿಸಿ)

ಮಹೇಶ:– ಮೈಲಾರ ಬಡವರ ಬಾಳಲ್ಲಿ ಮನ ಬಂದಂತೆ ಆಟ ಆಡುವ ಈ ಬಡ್ಡಿ ಮಗನ ದೇಹವನ್ನು ಕೊಚ್ಚಿ ಹಾಕು ಬಿಡಬೇಡ

ರಾಜೇಂದ್ರ:– ಕೊಚ್ಚಿ ಹಾಕು (ನಕ್ಕು) ಲೇ ಮಹೇಶ ಹಿಂಡು ಹುಲಿಗಳಾಗಿ. ದಂಡೆದು ದಾಂಡಿಗರಾಗಿ ನನ್ನ ಮನೆಗೆ ಬಂದಿದ್ದೀರಾ ಮಕ್ಕಳೇ. ಹಿಂಡು ಹುಲಿಗಳಲಿ ಗಂಡು ಹುಲಿಯಾಗಿ ಮೆರೆದವನು ಈ ರಾಜ ರಾಜೇಂದ್ರ. ಇನ್ನು ಈ ಹುಲಿಯ ಕೈಯಲ್ಲಿ ನೀವು ಪಾರಾಗಿ ಹೋಗುವುದೇ. (ನಕ್ಕು) ನೀವೇ ಸಾಯಿರಿ ಮಕ್ಕಳೇ (ಬಂದೂಕು ಗುರಿ ಇಟ್ಟಾಗ. ಮಾಂತೇಶ ಬಂದೂಕು ಕಸಿದುಕೊಂಡು)

ಮಾಂತೇಶ:– ಲೇ ರಾಜೇಂದ್ರ. ಶರವೇಗದ ಸರದಾರನಾಗಿ ಬಂದ ಈ ಸರಕಾರದ ಹುಲಿ ಮಾಂತೇಶನ ಮುಂದೆ. ಈ ನಿನ್ನ ಜುಜುಬಿ ಬಂದೂಕಿನ ಆಟ ನಡೆಯೋದಿಲ್ಲ ಮಗನೇ. ಏನಂದೆ ಹಿಂಡು ಹುಲಿಗಳಲ್ಲಿ ಗಂಡು ಹುಲಿಯಾಗಿ ನಮ್ಮನ್ನು ಭೇಟಿ ಆಡ್ತೀಯಾ ಮಗನೆ ಅದು ನಿನಗೂ ಸಾಧ್ಯವಿಲ್ಲ. ನಿಮ್ಮಪ್ಪನಿಗೂ ಸಾಧ್ಯವಿಲ್ಲ. ಯಾಕಂದ್ರೆ ಇಲ್ಲಿ ಬಂದ್ದಿರುವದು ಸರ್ಕಾರದ ಹುಲಿ ಈ ಮಾಂತೇಶ

ಮಹೇಂದ್ರ:– ಸಾಧ್ಯವಿಲ್ಲ (ನಕ್ಕು) ಲೇ ಮಾಂತೇಶ ಸಾಧ್ಯವಿಲ್ಲದನ್ನು ಸಾಧಿಸಿ ತೋರಿಸುವವನು. ಈ ಸಾವಿರನೇ ಬಲದ ಸರದಾರ ಬಹದ್ದೂರ್ ಮಹೇಂದ್ರ. ನನ್ನ ಮುಂದೆ ನಮ್ಮ ಸಾಹೇಬರ ಮೇಲೆ ಕೈ ಮಾಡುತ್ತೀಯಾ ಮಗನೇ. ನಿನ್ನ ಕೈಯನ್ನು ಕತ್ತರಿಸಿ ಬಿಡುತ್ತೇನೆ (ಮಚ್ಚು ಎತ್ತುವನು ಕ್ರಾಂತಿವೀರ ಮಚ್ಚು ಕಸಿದುಕೊಂಡು)

ಕ್ರಾಂತಿವೀರ:– ಗುರುಗಳೇ ನಿಮ್ಮ ಹೆಂಡತಿಯನ್ನು ಕೊಂದ ಈ ರಾಜೇಂದ್ರನ ಕೈಗಳನ್ನು ಕತ್ತರಿಸಿ ಹಾಕಿರಿ. ತಗೆದುಕೋಳಿ ಈ ಮಚ್ಚನ್ನು (ಕೊಡುವನು) ಮಾಂತೇಶ ನಿನ್ನ ಕಾಕಿ ಬಟ್ಟೆಯನ್ನು ಬಿಚ್ಚಿಸಿ ಅಧಿಕಾರವನ್ನು ಕಿತ್ತುಕೊಂಡ ಈ ಮಹೇಂದ್ರರನ್ನು ಸುಟ್ಟು ಹಾಕು. ತಗೆದುಕೊ ಈ ಪಿಸ್ತೂಲನ್ನು (ಕೊಡುವನು) ಮೈಲಾರ ನಮಗೆಲ್ಲರಿಗೂ ಹೆತ್ತ ತಾಯಿಯಾಗಿದ್ದ ಆ ನಮ್ಮ ಅತ್ತಿಗೆಯನ್ನು ಮುಟ್ಟಿದ. ಈ ಕೆಟ್ಟ ಸೂಳಿಯ ಮಗನ ಶಿರವನ್ನು ಕಡಿದು ಹಾಕು

ಮೈಲಾರ:– ಲೆ ರಾಜೇಂದ್ರ ಸಾಯಿ ಮಗನೇ ಜೈ ಗುಡ್ಡದ ಒಡೆಯ ಮೈಲಾರಲಿಂಗ (ಮಹೇಶ ರಾಜೇಂದ್ರನ ಕೈಗಳನ್ನು ಕಡಿಯುವನು. ಮೈಲಾರ ರುಂಡ ಕಡಿಯುವನು. ಮಾಂತೇಶ ಮಹೇಂದ್ರನಿಗೆ ಗುಂಡು ಹರಿಸುವನು. ಕ್ರಾಂತಿವೀರ ಮಚ್ಚಿನಿಂದ ಕೊಚ್ಚುವನು. ರಂಗ ನಿಂಗ ಓಡಿ ಹೋಗುವರು)

ಕ್ರಾಂತಿವೀರ:– ಮಾಂತೇಶ ಆ ನಾಗೇಂದ್ರನನ್ನು ಕೊಂದಾಯಿತು. ನಾನು ರೌಡಿ ಆಗಿದ್ದ ಸೇಡು ತೀರಿತು. ನನ್ನನ್ನು ಅರೆಸ್ಟ್ ಮಾಡು

ಮಾಂತೇಶ:– ಕ್ರಾಂತಿವೀರ ಈ ಸಮಾಜಕ್ಕೆ ನಿನ್ನಂತ ವ್ಯಕ್ತಿ ಅವಶ್ಯಕತೆ ಇದೆ. ಸರ್ಕಾರದಿಂದ ಮಟ್ಟ ಹಾಕೋದಕ್ಕೆ ಆಗದಂತ ಈ ಕಾಮುಕರನ್ನು. ನೀನು ಮಟ್ಟ ಹಾಕಿದಿಯ. ನೀನಗೊಂದು ನನ್ನ ಸಲ್ಯೂಟ್

ಮಹೇಶ:– ಬನ್ನಿ ತಮ್ಮಂದಿರ ಹೋಗೋಣ. ಕ್ರಾಂತಿವೀರ ನಾಳೆ ನನ್ನ ತಮ್ಮಂದಿರ ಇಬ್ಬರ ಮದುವೆ ಇದೆ. ಈಗಲೇ ನಮ್ಮ ಜೊತೆ ನೀನು ಹೊರಟು ಬಾ

ಕ್ರಾಂತಿವೀರ:– ಆಯ್ತು ನಡೀರಿ ಗುರುಗಳೇ ಹೋಗೋಣ (ಎಲ್ಲರೂ ಹೋಗುವರು)

ಪ್ರವೇಶ 18

ಮಹೇಶನ ಮನೆ (ಪ್ರವೀಣ ನಯನ ಪ್ರವೇಶಿಸಿ)

ಪ್ರವೀಣ:– ಇದೇನಾ ನಯನ ಆ ಮಹೇಶ ಅಣ್ಣ ನನ್ನ ತಮ್ಮಂದಿರ ಮದುವೆ ಐತಿ ಮನೆಗೆ ಬರ್ರಿ ಅಂತ ಫೋನ್ ಹಚ್ಚಿ ಹೇಳ್ಯಾನ. ಇಲ್ಲಿ ನೋಡಿದ್ರ ಏನು ಮದುವೆ ವಾತಾವರಣ ಕಾಣವಲ್ತು

ನಯನ:– ಹೌದಲ್ಲ ಮಾರಾಯ. ನಾನು ಇವರ ಮದುವೆ ಇದೆ ಅಂತ ಡ್ಯೂಟಿ ರಜಾ ಹಾಕಿ ಬಂದೀನಿ. ಇಲ್ಲಿ ನೋಡಿದ್ರ ಏನು ಇಲ್ಲ

ಪ್ರವೀಣ:– ತಡಿ ತಡಿ ಮಹೇಶ ಅಣ್ಣ ಕರದ ಬಿಡ್ತೀನಿ. ಮಹೇಶಣ್ಣ ಎ ಮಹೇಶಣ್ಣ (ಮಹೇಶ ಒಳಗಿಂದ ಪ್ರವೇಶಿಸಿ).

ಮಹೇಶ:– ಬಾರೋ ಪ್ರವೀಣ ಎಸ್ಟ ಬೇಗ ಬಂದ ಬಿಟ್ರೀ. ನಯನ ಬಾ ತಂಗಿ. ಒಳಗಡೆ ಹೋಗಿ ಮಧು ಮಂಜುಳಾನನ್ನನ್ನು ಮದುವೆಗೆ ಬೇಗ ರೆಡಿ ಮಾಡು ಬಾರವ (ನಯನ ಒಳಗಡೆ ಹೋಗುವಳು. ನವೀನ ನಾಲ್ಕು ಮಾಲೆಯನ್ನು ಹಿಡಿದುಕೊಂಡು ಪ್ರವೇಶಿಸಿ)

ನವೀನ:– ಮಹೇಶಣ್ಣ ಮಾಲೆಯನ್ನು ತಂದಿದ್ದೇನೆ ತಗೆದುಕೊಳ್ಳಿ (ನಯನ ಮದು ಮಕ್ಕಳನ್ನು ಕರೆದುಕೊಂಡು ಬರುವಳು. ಮೈಲಾರ ಮಧುನ ಕೈ ಹಿಡಿದು. ಮಾಂತೇಶ ಮಂಜುಳಾನ ಕೈ ಹಿಡಿದು. ಪ್ರವೇಶಿಸಿ)

ಮೈಲಾರ:– ಅಣ್ಣ ಕ್ರಾಂತಿವೀರ ಎಲ್ಲಿ ಹೋಗಿದ್ದಾನೆ ಕಾಣುತ್ತಿಲ್ಲ

ಮಧು:– ರೀ ಕ್ರಾಂತಿ ಅಣ್ಣ. ನನ್ನ ತಂಗಿಯಂದಿರಿಗೆ ಗಿಫ್ಟು ತರುತ್ತೇನೆ ಎಂದು. ಹೋಗಿದ್ದಾನೆ ರಿ (ಕ್ರಾಂತಿವೀರ ಎರಡು ಗಿಫ್ಟನ್ನು ತಗೆದುಕೊಂಡು ಪ್ರವೇಶಿಸಿ)

ಕ್ರಾಂತಿವೀರ:– ಹಾಂ ತಂಗಿ ಮಧು ತಗೆದುಕೊಳ್ಳಮ್ಮ. ಈ ನಿನ್ನ ಬಡವ ಅಣ್ಣನ ಕಿರು ಕಾಣಿಕೆಯನ್ನು

ಮಂಜುಳಾ:– ಕ್ರಾಂತಿ ಅಣ್ಣ ನಿನ್ನ ತಂಗಿ ಮಧುಗೆ ಅಷ್ಟೇ ಗಿಫ್ಟು ತಂದಿದ್ದೀಯಾ ನೀನು

ಕ್ರಾಂತಿವೀರ:– ಇಲ್ಲಮ್ಮ ತಂಗಿ ನಿನಗೂ ತಂದಿದ್ದೇನೆ ತಗೆದುಕೋ ಅಮ್ಮ ಈ ಗಿಫ್ಟನ್ನು. ನೀವಿಬ್ಬರೂ ನನ್ನ ಎರಡು ಕಣ್ಣುಗಳಿದ್ದಂತೆ. ಯಾರಿಗೂ ಬೇದಭಾವವಿಲ್ಲ

ಮಹೇಶ:– ಮೈಲಾರ ಮಾಂತೇಶ. ಮೂರ್ತಕ್ಕೆ ಟೈಮ್ ಆಗುತ್ತದೆ ಬೇಗ ಮಾಲಿ ಬದಲಾಯಿಸಿಕೊಳ್ಳಿ ತಾಳಿ ಕಟ್ಟರಿ

ಪುರೋಹಿತ್:- (ಮಂತ್ರ ಹೇಳುವನು ತಾಳಿ ಕಟ್ಟುವವರು ಸ್ನೇಹಿತರು ಎಲ್ಲರೂ ಚಪಾಳೆ ತಟ್ಟುವರು ವಧು ವರರು ಎದ್ದು ಬಂದು ಹಿರಿಯರಿಗೆ ನಮಸ್ಕರಿಸುವರು)

ಮಹೇಶ:- ಮೈಲಾರ ಮಾಂತೇಶ ಕ್ರಾಂತಿವೀರ ಎಲ್ಲರೂ ಬನ್ನಿ ಈ ನಾಟಕ ಹೆಚ್ಚು ಪ್ರದರ್ಶನವಾಗಲೆಂದು ಆ ಮನೆದೇವ ಮೈಲಾರಲಿಂಗನಲ್ಲಿ ಪ್ರಾರ್ಥಿಸೋಣ (ಎಲ್ಲರೂ ಸೇರಿ ನಾಂದಿ ಹಾಡುವರು) ನಾಟಕ ಮುಕ್ತಾಯಗೊಳ್ಳುತ್ತದೆ

-------*******-------

ಶುಭಂ

ಇದ ಕವಿಗಳದು ಕೈ ಬರಹದಲ್ಲಿ ಇರುವ

ಮುಂದಿನ ನಾಟಕ

~: ರೈತನ ಸವಾಲು ಸರಕಾರಕ್ಕೆ ಸಿಡಿಲು :~

ಅರ್ಥಾತ್:- ರಾಜಕೀಯರ ದೊಂಬರಾಟ

ಜೈ ಭಜರಂಗಿ